# RASTRAKAVI : Dr.G.S.SHIVARUDRAPPA'S KAVYAGALALLI KAVYA SHILPA

**MINOR RESEARCH PROJECT**

**SUBMITTED TO THE UNIVERSITY GRANTS COMMISSION**

**NEW DELHI**

**FINAL REPORT OF THE WORK DONE ON MINOR PROJECT UGC**
**REF: MRP(H)0257/12-13/KATU008/UGC SWRO. 29th March 2013**

**PRINCIPAL INVESTEGATOR**

**PROF.S.SUMANGALAMMA**
**HOD & ASSOCIATE PROFESSOR**
**DEPARTMENT OF KANNADA**

**SREE SIDDAGANGA COLLEGE OF ARTS SCIENCE & COMMERCE FOR WOMEN, B.H.ROAD, TUMKUR-2.**

**SREE SIDDAGANGA COLLEGE OF ARTS SCIENCE & COMMERCE FOR WOMEN, B.H.ROAD, TUMKUR-2.**

**SREE SIDDAGANGA COLLEGE OF ARTS SCIENCE & COMMERCE FOR WOMEN, B.H.ROAD, TUMKUR-2.**

# RASTRA KAVI Dr.G.S.SHIVARUDRAPPA'S KAVYAGALALLI KAVYA SHILPA

**MINOR RESEARCH PROJECT**

**SUBMITTED TO THE UNIVERSITY GRANTS COMMISSION**

**NEW DELHI**

**FINAL REPORT OF THE WORK DONE ON MINOR PROJECT UGC REF: MRP(H)0257/12-13/KATU008/UGC SWRO. 29th March 2013**

**PRINCIPAL INVESTEGATOR**

**PROF.S.SUMANGALAMMA**
**HOD & ASSOCIATE PROFESSOR**
**DEPARTMENT OF KANNADA**

**SREE SIDDAGANGA COLLEGE OF ARTS SCIENCE & COMMERCE FOR WOMEN, B.H.ROAD, TUMKUR-2.**

**CERTIFICATE**

I hereby declare that this Minor Research project entitled Rashtrakavi Dr.G.S.Shivarudrappa kavyagalalli Kavyashilpa a study of structure of G.S.S. Samagra Kavya conducted by me, at the department of Kannada Sree Siddaganga College of Arts Science & Commerce for Women, Tumkur. under the financial assistance of University grants Commission, New Delhi.

This project has been submitted to UGC in 2014 and this work has not been submitted to any other purpose so far.

Place

Date:

Signature of the Principal Investigator

## ACKNOWLEDGEMENT

This study was conducted under the financial assistance of UGC. I am thankful to University Grants Commission (UGC) for sanctioning the Grants to MRP scheme during 2013-14. I am indebted to them for having given this opportunity to pursue my studies.

With reverential pranams, I express my sincere gratitude and salutations to HIS HOLINESS KARNATAKA RATNA TRIVIDHA DASOHI, SREE Ma.Ni.Pra.Swa.Dr.Sree Sree Shivakumar Swamigalu and SREE Ma.Ni.Pra. Swa. Sri.Sri.Siddalinga Swamigalu of Sri Siddaganga Kshetra for his unlimited blessings.

I am grateful to the Sri Siddaganga Education Society for providing me an opportunity to take up this work. first, I am thankful to our institution Secretary Sri.T.K.Nanjundappa and Special Officer Sri.K.S.Shankaraiah. I express my deep sense of gratitude to Sri.Siddaganga College for Women, our college Principal Prof.V.Nalinakshi who is an academician and dynamic administrator, and also she always. She always encouraged me to complete my work. I am thankful to her.

I am especially thankful to colleagues of my department and also college. I benefited greatly from the help advised experience of Dr.D.N.Yogeshwarappa, SSCW, Tumkur, retired Prof.M.L.Narashimha Murthy, T,V,V College, Madhugiri, Tumkur Dist. And Dr.S.Nataraj Department of Kannada in Govt.College, Hebbur, Tumkur Dist. My thanks to them. My gratitude to the members of my family Mr.Kalyankumar, his constant encouragement and support was a tower of strength at all times. I am also thankful to my daughter Mookambika. My thanks to Smt.C.Prema for neat DTP work.

With regards

Prof.S.Sumangalamma

Principal Investigator

# ಪರಿವಿಡಿ


| | | |
|---|---|---|
| 1. | ಪೀಠಿಕೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ | 01 |
| 2. | ಜಿ.ಎಸ್.ಎಸ್.ಕಾವ್ಯ ರಚನೆಯ ಪ್ರವೇಶ | 06 |
| 3. | ಜಿ.ಎಸ್.ಎಸ್.ಕಾವ್ಯದ ಹೆಜ್ಜೆ ಗುರುತುಗಳು | 10 |
| 4. | ಕುವೆಂಪು ಪರಂಪರೆ ಮತ್ತು ಜಿ.ಎಸ್.ಎಸ್. | 17 |
| 5. | ಕಾವ್ಯಶಿಲ್ಪದ ವಿವರಣೆ | 21 |
| 6. | ಜಿ.ಎಸ್.ಎಸ್.ರವರ ಕವನಗಳಲ್ಲಿ ಕಾವ್ಯಶಿಲ್ಪಗಳು | 24 |
| 7. | ಜಿ.ಎಸ್.ಎಸ್. ರವರ ಕಾವ್ಯ ಮತ್ತು ಭಾಷೆ | 47 |
| 8. | ಜಿ.ಎಸ್.ಎಸ್. ಜೊತೆಯಲ್ಲಿ ಸಂವಾದ | 51 |
| 9. | ಉಪಸಂಹಾರ | 54 |
| 10. | Biblography | 55-65 |

## ಅಧ್ಯಾಯ–1

### ಪೀಠಿಕೆ

ಕನ್ನಡ ನವೋದಯ ಕವಿಗಳ ಕಾವ್ಯಮಾರ್ಗ ಪ್ರೇರಿತರಾಗಿ ತಮ್ಮ ಕವಿತೆಗಳ ಹಾದಿಯನ್ನು ಕಾಣಲು ಪಕ್ರಮಿಸಿದ ಜಿ.ಎಸ್.ಎಸ್. ಈ ನಲವತ್ತು ವರ್ಷಗಳಲ್ಲಿ ಕನ್ನಡ ಕವಿತೆ ಹಾದು ಬಂದ ನೆಲೆಗಳನ್ನು ಕಂಡಿದ್ದಾರೆ; ತಮ್ಮದೇ ಆದ ರೀತಿಯಲ್ಲಿ ಇದಕ್ಕೆ ಪ್ರತಿಕ್ರಿಯಿಸಿಯೂ ಇದ್ದಾರೆ. ನವೋದಯ, ನವ್ಯ, ನವ್ಯೋತ್ತರ ಮಾರ್ಗಗಳು ಜಿ.ಎಸ್.ಎಸ್. ಕವಿತೆಗಳ ಪರಿವಲಯದಲ್ಲಿ ನುಗ್ಗಿ ಬಂದಿರುವುದನ್ನು ಹಲವು ಕವನಗಳಲ್ಲಿ ಗುರ್ತಿಸಬಹುದು. ಇವರ ಕಾವ್ಯ ರಚನೆಯ ಉದ್ದೇಶ, ಪರಿಕ್ರಮಗಳ ಬಗೆಗೆ ಬಹಿರಂಗ ಘೋಷಿತವಲ್ಲದಿದ್ದರೂ ಆಂತರಿಕ ಒತ್ತಡಗಳಿಂದ ಖಚಿತವಾಗಿದ್ದ ಈ ಕವಿ ತಾವು ಹಿಡಿದ ಹಾದಿಯಲ್ಲಿ ನಂಬುಗೆಯಿಂದ ಮುನ್ನಡೆದಿದ್ದಾರೆ. ಕವಿತೆಯ ಓದುಗರು ಅವರ ನಂಬುಗೆಯ ಬೇರಿಗೆ ನೀರಾಗಿದ್ದಾರೆ.

ಬದಲಾವಣೆ ಎನ್ನುವುದು ಸೃಷ್ಟಿಯ ನಿಯಮ. ನಿಸರ್ಗದ ವ್ಯಾಪಾರವಾಗಲಿ, ಋತುಗಳ ಆವರ್ತನವಿರಲಿ, ಬೇರುಗಳಿಂದ ಸತ್ವವನ್ನು ಹೀರಿ, ಚಿಗುರೊಡೆಸಿಕೊಂಡು ಕಾಯಾಗಿ, ಹಣ್ಣಾಗಿ, ಮತ್ತೆ ಮೂಲಕ್ಕೆ ಮರಳುವ ಜೈವಿಕ ಕ್ರಮವಿರಲಿ, ಎಲ್ಲವೂ ಪರಿವರ್ತನಶೀಲತೆಯನ್ನೆ ಆರಿಸಿಕೊಳ್ಳುತ್ತವೆ. ಹಾಗೆಯೇ ಮನುಷ್ಯ ಈ ಪರಿವರ್ತನೆಗೆ ಒಳಗಾಗುತ್ತಾನೆ. ಸದಾ ಪರಿವರ್ತನಾಶೀಲತೆಯನ್ನು ಹೊಂದಿರುವ ಸಾಹಿತ್ಯವೂ ಸಹ ಇದಕ್ಕೆ ಹೊರತಾಗಿಲ್ಲ. ಸಾಹಿತ್ಯದ ಬೆಂಬಲಕ್ಕೆ ನಿಲ್ಲುವ ಹಲವು ಪರಿಕರಗಳಲ್ಲಿ ಪ್ರಯೋಗಶೀಲತೆಯೂ ಸೇರಿದೆ. ಕನ್ನಡಸಾಹಿತ್ಯದ ಮೊದಲ ಘಟ್ಟದಲ್ಲಿ ಇದರ ಗುರ್ತುಗಳು ಕಂಡುಬರುತ್ತವೆ. ಆಶಯಕ್ಕೆ ಅನುಗುಣವಾದ ಲೌಕಿಕ–ಅಲೌಕಿಕ ಚಂಪೂ, ಷಟ್ಪದಿ, ಮುಂತಾದ ಕಾವ್ಯ ಬಂಧಗಳ ಬಳಕೆಯಾಗಲಿ, ಚಂಪೂಸಾಹಿತ್ಯವನ್ನು ದಾಟಿ ಬಂದ ಸಂಕ್ರಾಂತಿಯಾಗಲಿ, ಈ ಸಾಧ್ಯತೆಗಳ ಪರಿವರ್ತನಾ ಶೀಲತೆಯನ್ನು ಗಮನಿಸುತ್ತಾ ಬಂದಿದೆ. ಇದು ಹೊಸಗನ್ನಡ ಸಂದರ್ಭದಲ್ಲಾದರೂ ಅಷ್ಟೆ. ಸ್ವೋಪಜ್ಞತೆಯಿಂದ ಕೂಡಿದ ಭಿನ್ನ ಭಿನ್ನ ಸಾಹಿತ್ಯಿಕ ಚಳುವಳಿಗಳು ಮೇಲಿನ ಮಾತಿಗೆ ವಿಧೇಯವಾದವುಗಳೇ ಆಗಿವೆ.

ಸಾಹಿತ್ಯಕ್ಷೇತ್ರದಂತೆ, ವೈಯಕ್ತಿಕ ನೆಲೆಯಲ್ಲಿ ಸಾಹಿತಿಯೂ ತನ್ನ ವ್ಯಾಪ್ತಿಯ ಒಳಗೆ ಹೊಸತರ ಹರಿಕಾರನಾಗುವ ನಿಟ್ಟಿನಲ್ಲಿ ಪ್ರಯತ್ನಶೀಲನಾಗಿರುತ್ತಾನೆ. ನಡೆದ ಸವೆದ ದಾರಿಯ ಬಗೆಗೆ ಅಪೇಕ್ಷೆ, ಬೇರೆ ನೆಲವನ್ನು ಮಟ್ಟಸ ಮಾಡಿ ಬೆಳೆದು ಹುಲುಸನ್ನು ಕಾಣುವ ಹುಮ್ಮಸ್ಸು, ರೋಮಾಂಚಕತೆ, ಭೀತಿ, ಹಿಂಜರಿಕೆ, ತಲ್ಲಣ, ಆತಂಕಗಳನ್ನು ಅನುಭವಿಸುವ ಉತ್ಸಾಹಗಳಲ್ಲಿ ಈ ಪ್ರಯೋಗಶಾಲೆಯ

ತೋರುಗಂಬಗಳೇ ಆಗಿವೆ. ಅವುಗಳನ್ನು ರೂಢಿಸಿಕೊಂಡು ಸಾಹಿತ್ಯಾದರ್ಶಗಳನ್ನು ರೂಪಿಸಿಕೊಂಡ ಕೆಲವೇ ಕವಿಗಳಲ್ಲಿ ಜಿ.ಎಸ್.ಎಸ್. ಒಬ್ಬರಾಗಿದ್ದಾರೆ.

ಜಿ.ಎಸ್.ಎಸ್.ರವರ ಪ್ರಧಾನ ಮಾಧ್ಯಮಗಳೆಂದರೆ ಕಾವ್ಯ, ಗದ್ಯ, ಪ್ರವಾಸಸಾಹಿತ್ಯ ಸಾಹಿತ್ಯ ವಿಮರ್ಶೆ, ಕಾವ್ಯಮೀಮಾಂಸೆ, ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಕಾವ್ಯವನ್ನು ತನ್ನ ಭಾವನಾನುಭವದಿಂದ ನೋಡುವ ಮತ್ತು ಕಾವ್ಯದ ತಿರುವುಗಳನ್ನು ಲಕ್ಷಿಸುವ ಉದ್ದೇಶ ಲೇಖನ ಇದಾಗಿದೆ.

**ಅಧ್ಯಯನದ ಪ್ರಾಮುಖ್ಯತೆ**

ನವೋದಯ ಕವಿಗಳ ನಂತರ ಬಹಳ ಪ್ರಮುಖವಾಗಿ ಕಾಣುವ ಕವಿಗಳು ಇಬ್ಬರು.

1. ಜಿ.ಎಸ್.ಶಿವರುದ್ರಪ್ಪನವರು.
2. ಚನ್ನವೀರಕಣವಿ

ಇವರು ನವೋದಯದ ಸತ್ವ ಮತ್ತು ನವ್ಯದ ತಾರ್ಕಿಕತೆಯನ್ನು ತಮ್ಮ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. (ಪ್ರಾಶ್ಚಾತ್ಯ ಕಾವ್ಯ ಕಲ್ಪನೆಗಳಾದ ಪ್ರತೀಕ, ಸಾಂಕೇತಿಕತೆ, ಕಾವ್ಯಶಿಲ್ಪ ಮುಂತಾದವು ಕನ್ನಡ ಸಾಹಿತ್ಯಕ್ಕೆ ಪ್ರಭಾವ ಬೀರಿದವು.

**ಕಾವ್ಯಶಿಲ್ಪ**: ನವೋದಯ ನವ್ಯೋತ್ತರ ಸಾಹಿತ್ಯದೊಂದಿಗೆ ಸ್ಪಂದಿಸಿ, ಕವನ, ನಾಟಕ, ವಿಮರ್ಶೆ ಮೀಮಾಂಸೆ, ಪ್ರವಾಸ ಸಾಹಿತ್ಯ ಗದ್ಯಸಾಹಿತ್ಯ ಹೀಗೆ ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಕುವೆಂಪು ಪ್ರಭಾವ ಬಹಳಷ್ಟಿದ್ದರೂ, ತಮ್ಮದೇ ಆದ ಅಸ್ತಿತ್ವವನ್ನು ಪಡೆದುಕೊಂಡಿದ್ದಾರೆ. 1947ರಿಂದ ಪ್ರಾರಂಭವಾದ ಇವರ ಸಾಹಿತ್ಯಕೃಷಿಯಲ್ಲಿ ರಾಷ್ಟ್ರಭಕ್ತಿ, ಮಾನವೀಯತೆ, ಆದರ್ಶ, ಸಾಂಕೇತಿಕತೆ, ಸಾಮಾಜಿಕ ಸವಾಲುಗಳಲ್ಲಿ ಎಲ್ಲಾ ಸಾಹಿತ್ಯದಲ್ಲಿ ಪ್ರತಿಬಿಂಬಿಸಿದ್ದಾರೆ.

ಸ್ವಾತಂತ್ರ್ಯ ನಂತರದ ಸಂದರ್ಭದಲ್ಲಿ ಸಾಹಿತ್ಯದಲ್ಲಿ ಅನೇಕ ಬದಲಾವಣೆಗಳು ಉಂಟಾದವು. ಪಾಶ್ಚಾತ್ಯದ ಪ್ರೇರಣೆ ಮತ್ತು ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಬೀರಲು ಆರಂಭಿಸಿದವು. ಪಾಶ್ಚಾತ್ಯ ಕಾವ್ಯ ಕಲ್ಪನೆಗಳಾದ ಪ್ರತೀಕಗಳು, ಸಂಕೇತಗಳು ಬಾಹ್ಯರಚನೆಯಾಗುವ ಬದಲಾವಣೆಗಳು. ಕನ್ನಡ ಕಾವ್ಯದಲ್ಲಿ ಕಾಣತೊಡಗಿದವು. ಈ ಪ್ರಭಾವ ಜಿ.ಎಸ್.ಎಸ್. ಕಾವ್ಯದಲ್ಲಿ ಕಾಣಬಹುದು. ಕಾವ್ಯಭಾಷೆಯಲ್ಲಿ ಅಗುವ ಮತ್ತು ಕವನ ರೂಪದಲ್ಲಿ ಆಗುವ ಬದಲಾಣೆಯನ್ನು ಕಾವ್ಯಶಿಲ್ಪ ಎಂದು ಗುರ್ತಿಸ ತೊಡಗಿದರು. ಇದರ ಅದ್ಯಯನ ಅಗತ್ಯತೆಯನ್ನು ನಾನು ಈ ಯೋಜನೆಯ ಅಡಿಯಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದೇನೆ.

**ವ್ಯಾಪ್ತಿ**

ಜಿ.ಎಸ್.ಎಸ್.ಕಾವ್ಯದ ಹೆಜ್ಜೆ ಗುರುತುಗಳನ್ನು ಅವಲೋಕಿಸಿದಾಗ ಜಿ.ಎಸ್.ಎಸ್. ವಿದ್ಯಾರ್ಥಿ ಆಗಿದ್ದಾಗಲೇ ಕಾವ್ಯ ರಚನೆಯಲ್ಲಿ ತೊಡಗಿಸಿಕೊಂಡವರು. ಕುವೆಂಪುರವರ ಗರಡಿಯಲ್ಲಿ ಪಳಗಿದ ಜಿ.ಎಸ್.ಎಸ್.ರವರು ನವೋದಯದ ಲಕ್ಷಣಗಳಾದ ರಾಷ್ಟ್ರೀಯತೆ, ಪ್ರಕೃತಿ, ಪ್ರೇಮ, ಆಧ್ಯಾತ್ಮ, ಆನಂದ, ನವ್ಯದ ಲಕ್ಷಣಗಳಾದ ಸಾಂಕೇತಿಕತೆ, ಆದರ್ಶ, ದಲಿತ ಬಂಡಾಯ ಅವೇಶ, ಆಕ್ರೋಶಗಳನ್ನು ಅವರ ಕಾವ್ಯದೂದ್ದಕ್ಕೂ ಗುರುತಿಸಬಹುದು. ಜಿ.ಎಸ್.ಎಸ್.ರವರು ಸಂವೇದನಾಶೀಲ ಗುಣವುಳ್ಳವರು. ಯಾವುದನ್ನು ಗಟ್ಟಿಧನಿಯಿಂದ ಮಾತಾಡಿದವರಲ್ಲ. ಬಹಳ ಸೌಮ್ಯವಾಗಿ ಅಂತರ್ಗಂಗೆಯಂತೆ ಒಳಗೊಳಗೆ ಧುಮ್ಮುಕ್ಕಿ ನಂತರ ನಿಧಾನವಾಗಿ ತಾಳ್ಮೆ, ಸಹನೆಯಿಂದ ವಿವರಸಿರುವುದನ್ನು ಅನೇಕ ಕವನಗಳಲ್ಲಿ ಕಾಣಬಹುದು.

ಜಿ.ಎಸ್.ಎಸ್ ರವರು ಹದಿನಾಲ್ಕ ಕವನ ಸಂಕಲನಗಳನ್ನು ಬರೆದಿದ್ದಾರೆ. “ಎಲ್ಲಾ ಕೇಳಲಿ ಎಂದು ನಾನು ಹಾಡುವುದಿಲ್ಲ ಹಾಡುವುದು ಅನಿವಾರ್ಯ ಕರ್ಮ ನನಗೆ” ಎಂಬ ಅರಿವು ಅವರಿಗಿದೆ. ಸಾಮಗಾನದಿಂದ ಅಗ್ನಿಪರ್ವದವರೆಗೆ (1951–2008) ಸುಮಾರು 500ಕ್ಕೂ ಹೆಚ್ಚು ಕವನಗಳನ್ನು ರಚಿಸಿರುವುದನ್ನು ಗಮನಿಸಿದರೆ ವಸ್ತು, ಭಾಷೆ, ಶೈಲಿ, ಛಂದಸ್ಸು– ನಿರೂಪಣೆ ಇವುಗಳಲ್ಲಿ ಆಗಿರುವ ಬದಲಾವಣೆಗಳನ್ನು ಎರಡು ಅಂಶಗಳಲ್ಲಿ ಗುರುತಿಸಬಹುದು.

1. ಬದಲಾಗುತ್ತಿರುವ ಸಾಹಿತ್ಯಕ್ಷೇತ್ರದ ಪ್ರೇರಣೆಗಳು.

2. ವೈಯಕ್ತಿಕ ಸಂವೇದನೆಗಳು ಮತ್ತು ಬೇರೆ ಬೇರೆ ಸಾಹಿತ್ಯದ ಹೊಳಹುಗಳು.

ಮೇಲಿನ ಎರಡು ಅಂಶಗಳ ಮೂಲಕ ಕವನಗಳ ಅನ್ವೇಷಣೆಗೆ ನಡೆಸಿದರೂ ಸಹ ಕಾವ್ಯದ ಮಜಲುಗಳನ್ನು ಕಾಲದ ಚೌಕಟ್ಟಿನಲ್ಲಿ ಹಿಡಿದಿಡುವುದು ಕಷ್ಟಸಾಧ್ಯವೆನಿಸುತ್ತದೆ. ಕಾರಣ ನವೋದಯದಲ್ಲಿ ಕವನದ ಅಸಾಹಾಯಕತೆ, ಬಂಡಾಯ ಧನಿಯನ್ನು ಗುರ್ತಿಸಲಾಗಿದೆ. ನವ್ಯ ಕವನ ಅಂದುಕೊಂಡರೆ ಅದು ಅಲೌಕಿಕತೆಗೆ ತಮ್ಮನ್ನು ಸೆಳೆಯುತ್ತದೆ ಎನ್ನಿಸುತ್ತದೆ. ಉದಾ: ಜಡೆ, ಹಣತೆ, ದೀಪಾವಳಿ ಇತ್ಯಾದಿ ಎಲ್ಲಿ ಹೇಗೆ ಕಾವ್ಯವಾಹಿನಿ ತನ್ನ ದಿಕ್ಕನ್ನು ಬದಲಾಯಿಸಿಕೊಳ್ಳುತ್ತದೆ ಎಂದು ಹೇಳುವುದು ಕಠಿಣವೆನಿಸುತ್ತದೆ.

‘ಸಾಮಗಾನದಿಂದ–ವ್ಯಕ್ತಮಧ್ಯ’–ಕವನ ಸಂಕಲನದವರೆಗೆ, ಕಾವ್ಯದ ಹಲವು ನೆಲೆಗಳು ವ್ಯಕ್ತವಾಗುತ್ತವೆ. ಇವುಗಳಲ್ಲಿ ಆಶಯ, ಬಂಧ, ಆದರ್ಶದಿಂದ ಕೂಡಿದ್ದರೂ ಪ್ರಕೃತಿ ದತ್ತವಾಗಿ ಸ್ವೀಕರಿಸಿದ ಹಲವು ವಿಷಯಗಳು ಗೋಚರವಾಗುತ್ತವೆ. ನವೋದಯ ಲಕ್ಷಣಗಳುಳ್ಳ ಈ ಕವನಗಳು

ಸುಗಮ ಸಂಗೀತದ ಮೂಲಕ ಜನಾದರವನ್ನು ಗಳಿಸಿವೆ. ಬದುಕಿನ ಸ್ವರೂಪ, ಜೀವನದ ಅದಮ್ಯ ಅಕರ್ಷಣೆ ಮಾನವೀಯತೆ ಮುಂತಾದ ಅಂಶಗಳನ್ನು ಕಾಣಬಹುದು. ಉದಾ: ತಾಯಿಗೆ, ರಥಯಾತ್ರೆ.

ಸಾಹಿತ್ಯ ನಿಂತ ನೀರಲ್ಲ; ಅದು ನಿರಂತರ ಬದಲಾವಣೆ ಹೊಂದುತ್ತಿರುತ್ತದೆ. ಎಂಬುದು ಅರಿತ ಜಿ.ಎಸ್.ಎಸ್. ನಿಸರ್ಗವು ಹಳೆ ಉಡುಪನ್ನು ಕಳಚಿ ಹೊಸ ಹೊದಿಕೆಯನ್ನು ಆಹ್ವಾನಿಸುವ ಹಾಗೇ ಸಹಜವಾಗಿ ಕಾವ್ಯಕ್ಕೆ ಹೊಸ ದಿಕ್ಕುಗಳನ್ನು ಕಂಡುಕೊಂಡಿದ್ದಾರೆ. ಕಾವ್ಯಮಾದ್ಯಮದಲ್ಲಿ ಶಿವರುದ್ರಪ್ಪನವರು ನಡೆಸಿದ ಹೊಸ ಅನ್ವೇಷಣೆಗೆ ಬಾಹ್ಯಾಲಂಕಾರಗಳ ನಾವೀನ್ಯತೆ, ವರ್ಣಸಂಯೋಜನೆ ಕವನಗಳಲ್ಲಿ ರೂಪುಗೊಂಡಿರುವುದನ್ನು ಕಾವ್ಯದುದ್ದಕ್ಕೂ ನೋಡಬಹುದು. ಇದರ ಸಂಪೂರ್ಣ ವಿವರಣೆ ಮುಂದೇ ನೀಡಲಾಗಿದೆ.

ಟಿ.ಎಸ್.ಇಲಿಮಟ್ ಹೇಳುವ ಹಾಗೆ "ಪರಂಪರೆ ಮತ್ತು ವ್ಯಕ್ತಿ ಪ್ರತಿಭೆ" ಅನ್ನುವುದು– ವ್ಯಕ್ತಿಗತವಾಗಿ ಜಿ.ಎಸ್.ಎಸ್ ರವರ ರಕ್ತದಲ್ಲಿ ಹರಿದು ಬಂದಿದೆ. ಕುವೆಂಪುರವರಿಂದ ಪ್ರಭಾವಿತರಾದರು. ಕನ್ನಡ ಸಂಸ್ಕೃತಿಯ ಚಿಂತಕರಾಗಿ ಕೆಲಸ ನಿರ್ವಹಿಸಿದ್ದಾರೆ. ಡಾ॥ ಶಿವರಾಮಕಾರಂತರ ವಾಸ್ತವದ ನೆಲೆಗಟ್ಟು, ಕುವೆಂಪುರವರ ನಿಸರ್ಗಪ್ರೀತಿ, ನನ್ನ ಮೇಲೆ ಬಹಳ ಪ್ರಭಾವ ಬೀರಿದ ಅಂಶಗಳು ಎಂದು ಅವರೆ ಹಲವಾರು ಸಂದರ್ಶನಗಳ'ಲ್ಲಿ ಹೇಳಿದ್ದಾರೆ. ಕುವೆಂಪುರವರು ಹೇಗೆ ಯಾವ ಪಂಥಕ್ಕೂ ಸೇರದೆ 'ವಿಶ್ವಮಾನವ ಪರಂಪರೆ'ಯನ್ನು ನಿರ್ಮಿಸಿದ್ದಾರೋ ಹಾಗೆ ಜಿ.ಎಸ್.ಎಸ್.ರವರು ಸಹ ಯಾವ ಪಂಥಕ್ಕೂ ಸೇರದೇ ಇಡಿ ಸಮಷ್ಟಿಯನ್ನೇ ತನ್ನ ಮನೆ ಎಂದು ಕರೆದುಕೊಂಡವರು. "ಉಡಗಣವೇಷ್ಠಿತ ಚಂದ್ರಸು ಶೋಭಿತ ದಿವ್ಯಾಂಬರ ಸಂಚಾರಿ" ಎಂದು ಕುವೆಂಪು ಸಹಜವಾದ ಮಾರ್ಗವನ್ನು ಅನುಸರಿಸಿದರೂ ನಮ್ಮ ಅಸ್ತಿತ್ವವನ್ನು ಬಹುಬೇಗ ಕಂಡುಕೊಂಡರು. ಸಹಜ ಪ್ರತಿಭೆಯೊಂದಿಗೆ ಸ್ವತಂತ್ರ ವಿಚಾರಶಕ್ತಿ ವಿಶಿಷ್ಟ ನಿರೂಪಣೆ, ಸರಳಭಾಷೆ, ಇವುಗಳನ್ನು ಮೈಗೂಡಿಸಿಕೊಂಡರು.

ನನ್ನ ಪುಸ್ತಕದ ವಿವರಣೆ ಎಂದರೆ ಕಾವ್ಯಶಿಲ್ಪವನ್ನು ಹೇಳುವುದು ಉಪಮೆ ರೂಪಕಗಳು ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಇದ್ದರೂ ಸಹ ಸಾಹಿತ್ಯ ಬೆಳೆದಂತೆಲ್ಲಾ ನಮ್ಮ ಕಲ್ಪನೆಗಳು ಬದಲಾವಣೆ ಪಡೆಯ ತೊಡಗಿದವು. ಈ ಬದಲಾವಣೆಯ ಪರಿಣಾಮವೇ 'ಕಾವ್ಯಶಿಲ್ಪ'. ಕಾವ್ಯಶಿಲ್ಪ ಎಂದರೆ ಏನು? ಎಂಬ ಪ್ರಶ್ನೆ ಬಂದಾಗ ಕವನದ ರೂಪ, ಫಾರಂ ಎಂದು ಹೇಳಬಹುದು. ಅಂದರೆ ಕಾವ್ಯ ರಚನೆಯಲ್ಲಿ ಪ್ರಾಸ, ಶಿಲ್ಪ, ಭಾಷೆ, ಪ್ರತಿಮೆಗಳು ಹೇಗೆ ವಸ್ತುವಿನ ಮೂಲಕ ಹೊರಹೊಮ್ಮಿದೆ ಎಂಬ ವಿವರಣೆಯನ್ನು ಕೊಡಬಹುದು. ಕಾವ್ಯಶಿಲ್ಪ ರಚನೆಯಲ್ಲಿ ತಂತ್ರ ಬದ್ಧತೆಗಳು ಮುಖ್ಯವಾಗುತ್ತದೆ.

ಜಿ.ಎಸ್.ಎಸ್.ರವರು ಸಾಮಗಾನದಿಂದ ಪ್ರೀತಿ ಇಲ್ಲದ ಮೇಲೆ ಕವನ ಸಂಕಲಗಳಲ್ಲಿ ಒಂದು ರೀತಿಯ ತಂತ್ರ ರಚನೆಯನ್ನು ಬಳಸಿದರೆ ವ್ಯಕ್ತಮಧ್ಯ, ಚಕ್ರಗತಿ, ಅಗ್ನಿಪರ್ವದಲ್ಲಿ ಮತ್ತೊಂದು ರೀತಿ ತಂತ್ರಗಾರಿಕೆಯನ್ನು ಬಳಸಿದ್ದಾರೆ. ಇದಕ್ಕೆ ಕಾರಣ ಬದಲಾಗುತ್ತಿರುವ ಸಾಹಿತ್ಯ ಸಂದರ್ಭಗಳು ಎನ್ನಬಹುದು. ಒಟ್ಟಿನಲ್ಲಿ ಜಿ.ಎಸ್.ಎಸ್.ರವರ ಕವನಗಳನ್ನು ಮಾನವ ನೆಲೆ ಮತ್ತು ಪ್ರಕೃತಿನೆಲೆ, ಸಮೂಹ ಎಂಬ ಈ ಮೂರು ಅಂಶಗಳಿಂದ ಗುರ್ತಿಸಬಹುದಾಗಿದೆ. ವ್ಯಕ್ತಮಧ್ಯ ಅಗ್ನಿಪರ್ವ– ಕವನ ಸಂಕಲನಗಳಲ್ಲಿ ಮುಕ್ತ ಛಂದಸ್ಸಿನಲ್ಲಿ ಬರೆಯತೊಡಗಿದ್ದಾರೆ. ಅವರ ಸಾಹಿತ್ಯದಲ್ಲಿ ಆದರ್ಶ ಮತ್ತು ಆಶಾವಾದ ಗುಣಗಳು ಪ್ರಧಾನವಾಗಿ ಕಾಣುತ್ತವೆ. ವ್ಯಕ್ತಿಗಿಂತ ಸಮಷ್ಟಿ ಗುಣಕ್ಕೆ ಹೆಚ್ಚು ಒತ್ತು ನೀಡಿರುವುದನ್ನು ಕಾಣುತ್ತೇವೆ. ನನ್ನ ಸಂಶೋಧನೆಯೇ ಅಂತಿಮವಲ್ಲ. ಇದೊಂದು ಸಂಶೋಧನೆಯ ವಿಧಾನ ಮಾತ್ರ.

ಜಿ.ಎಸ್.ಎಸ್.ರವರ ಕಾವ್ಯಗಳಲ್ಲಿ ಕಾವ್ಯ ಶಿಲ್ಪವನ್ನು ಕಾವ್ಯರೂಪ, ಕಾವ್ಯಶೈಲಿ, ಕಾವ್ಯವಸ್ತು, ಕಾವ್ಯಛಂದಸ್ಸು ಎಂಬ ನಾಲ್ಕು ಭಾಗಗಳನ್ನು ಮಾಡಿಕೊಂಡು ನನ್ನ ಅನುಭವದ ಮಿತಿಯಲ್ಲಿ ಕಾವ್ಯಶಿಲ್ಪವನ್ನು ವಿವರಿಸುವ ಪ್ರಯತ್ನ ಮಾಡಿದ್ದೇನೆ. ಇದರ ವಿವರಣೆ ಸಂಪೂರ್ಣವಾಗಿ ಮುಂದಿನ ಅಧ್ಯಾಯದಲ್ಲಿ ನೀಡಲಾಗಿದೆ. ಜಿ.ಎಸ್.ಎಸ್.ರವರ ಕಾವ್ಯಭಾಷೆಯನ್ನು ಕುರಿತು ಹೇಳುವುದಾದರೆ ಮೊದಲು ಅನೇಕ ಕವನಗಳಲ್ಲಿ ಸಂಸ್ಕೃತ ಪದಗಳನ್ನು ಹೆಚ್ಚು ಬಳಸುತ್ತಾರೆ. ಉದಾ: ಉಡುಗಣವೇಷಿತ, ಹಣತೆ ಇತ್ಯಾದಿ ನಂತರ ಸರಳಭಾಷೆಯನ್ನು ಮೈಗೂಡಿಸಿಕೊಂಡ ಕವಿ ಸಂಸ್ಕೃತದ ಕಟ್ಟಿನಿಂದ ಬಿಡಿಸಲು ಸಾಧ್ಯವಾಗಿಲ್ಲ. ಪುರಾಣ, ಇತಿಹಾಸ, ವಸ್ತು ಅರಿಸಿಕೊಂಡರೂ ವಾಸ್ತವತೆಯಲ್ಲಿ ಅವುಗಳನ್ನು ಕಾಣುವ ಹಂಬಲ ಇವರದ್ದಾಗಿದೆ. "ಶ್ರೀ ಅರವಿಂದರು" 'ಹುಟ್ಟುಹಬ್ಬ' 'ಗಾಂಧಿಶತಮಾನೋತ್ಸವ' ಇತ್ಯಾದಿ. ಈ ನನ್ನ ಅಧ್ಯಯನಕ್ಕೆ ಪೂರಕವಾಗಿರುವ ವಿಮರ್ಶಾಕೃತಿಗಳನ್ನು ಲೇಖನಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಇದರ ಆಧಾರದ ಮೇಲೆ ಈ ಪ್ರಬಂಧ ಸಿದ್ಧಪಡಿಸಿದ್ದೇನೆ.

**ಸಂಶೋಧನಾ ವಿಧಾನ:** ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಅದಕ್ಕೊಂದು ವಿಧಾನ ಅನುಸರಿಸಬೇಕಾಗುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಳಗಿನ ವಿಧಾನವನ್ನು ಅನುಸರಿಸಲಾಗುತ್ತದೆ.

1. ಜಿ.ಎಸ್.ಎಸ್. ಅವರ ಬಗ್ಗೆ ಬರೆದಿರುವ ಕೃತಿಗಳ ಸಂಗ್ರಹ.
2. ಇದುವರೆಗೂ ಬಂದಿರುವ ಮಾಧ್ಯಮಿಕ ದಾಖಲೆ ಸಂಗ್ರಹಿಸುವುದು.
3. ಕ್ಷೇತ್ರಕಾರ್ಯ ಕೈಗೊಳ್ಳುವುದು.

4. ಸಂಗ್ರಹಿಸಿದ ದಾಖಲೆಗಳನ್ನು ಅಧ್ಯಯನಕ್ಕೆ ತಕ್ಕಂತೆ ವಿಭಾಗಿಸಿಕೊಳ್ಳುವುದು.
5. ಸಂಗ್ರಹಿಸಿ ವಿಭಾಗಿಸಿದ ಮಾಹಿತಿಯನ್ನು ವಿವೇಚನೆಗೊಳಪಡಿಸಿ ಪ್ರಬಂಧ ರಚನೆ ಮಾಡುವುದು.

ಸಂಗ್ರಹಣೆ, ಜೋಡಣೆ, ವಿಶ್ಲೇಷಣೆ ಮಾದರಿಯ ಮೂಲಕ ಪ್ರಬಂಧ ರಚನೆಯನ್ನು ಮಾಡಲಾಗುವುದು.

## ಅಧ್ಯಾಯ–2

## ಜಿ.ಎಸ್.ಎಸ್.ಕಾವ್ಯ ರಚನೆಯ ಪ್ರವೇಶ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಗುಗ್ಗರಿ ಶಾಂತವೀರಪ್ಪನವರು ನಾಲ್ಕು ಮಕ್ಕಳಲ್ಲಿ ಜಿ.ಎಸ್.ಎಸ್. ಒಬ್ಬರು. ಮೂರು ಗಂಡು ಮಕ್ಕಳು ಒಬ್ಬಳು ಪುತ್ರಿ. 1926ರಲ್ಲಿ ಜನಿಸಿದ ಶಿವರುದ್ರಪ್ಪನವರನ್ನು ಎಲ್ಲರೂ ಶಿವಣ್ಣ ಎಂದೇ ಕರೆಯುತ್ತಿದ್ದರು. ಶಿವಮೊಗ್ಗ ಜಿಲ್ಲೆಯೆಂದರೆ ಜಿ.ಎಸ್.ಎಸ್.ರವರಿಗೆ ಅಭಿಮಾನ. ಏಕೆಂದರೆ ಗುರುಗಳಾದ ಕುವೆಂಪು ಮತ್ತು ಅವರ ನೆಚ್ಚಿನ ಕವಿಯಾದ ಪಂಪನ ಊರು ಇದಾಗಿರುವುದರಿಂದ ಬಹಳ ಪ್ರೀತಿ ಬಾಲ್ಯದ ದಿನಗಳನ್ನು ಮೆಲುಕು ಹಾಕುತ್ತಾ ಒಮ್ಮೆ ತಾವು ಮಗುವಾಗಿದ್ದಾಗ ತುಂಗಭದ್ರ ಹೊಳೆಯಲ್ಲಿ ಬಿದ್ದು ತಾಯಿ ರಕ್ಷಿಸಿದ್ದನ್ನು ಜ್ಞಾಪಿಸಿಕೊಂಡರು.(ಆಕಾಶದೀಪ, ಸಂದರ್ಶನ ಪು.114) ಇದನ್ನು ಸಾವನ್ನು ಕುರಿತ ಒಂದು ಪದ್ಯದಲ್ಲಿ ವಿವರಿಸಿದ್ದಾರೆ. "ನಿರಂತರ ಪ್ರವಾಹದೊಳಗೆ ಯಾವುದು ಎಷ್ಟು? ಎಷ್ಟು ಹೋಗುತ್ತೋ? ಎಷ್ಟು ಬರುತ್ತೋ? – ಹೊಳೆಯ ದಡದಲ್ಲಿ ಕೂತು ಬೆರಗಾದ ಮಗುವಿನ ಚಿತ್ರವನ್ನು ಚಿತ್ರಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರೂ ಅಲ್ಲಿನ ಪರಿಸರ ಜಿ.ಎಸ್.ಎಸ್.ರವರ ಮೇಲೆ ಗಾಢವಾದ ಪರಿಣಾಮವನ್ನು ಉಂಟುಮಾಡಿಲ್ಲ. ಇದಕ್ಕೆ ಕಾರಣ ಅವರ ತಂದೆ ಸರ್ಕಾರಿ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾರಾಗಿದುದರಿಂದ ವರ್ಗಾವಣೆ ಆಗುತ್ತಿದ್ದರು. ಒಂದು ಕಡೆ ನೆಲೆ ನಿಲ್ಲಲು ಆಗುತ್ತಿರಲಿಲ್ಲ. ನನ್ನ 13ನೇ ವಯಸ್ಸಿನಲ್ಲಿ ಹೈಸ್ಕೂಲು ಓದುತ್ತಿದ್ದಾಗ ಜಿ.ಎಸ್.ಎಸ್.ರವರ ಮೇಲೆ ಸಾಹಿತ್ಯದ ಪ್ರಭಾವ ಬೀರಿದ ಅಧ್ಯಾಪಕರೆಂದರೆ ಗಣಿತವನ್ನು ಪಾಠ ಮಾಡುತ್ತಿದ್ದ ರೇವಣ್ಣನವರು. ಇವರು ಜಿ.ಎಸ್.ಎಸ್.ರವರ ಹಾಸ್ಟೆಲ್‌ನ ವಾರ್ಡನ್ ಆಗಿದ್ದರು. ಅವರು ತೆಗೆದುಕೊಳ್ಳುತ್ತಿದ್ದ ಬದಲಿ ತರಗತಿಗಳಲ್ಲಿ ಕುವೆಂಪುರವರ ಕಾವ್ಯ ಮತ್ತು ನಾಟಕಗಳನ್ನು ತಂದು ಓದ್ತಾಇದ್ರು. ವಾರಕ್ಕೊಮ್ಮೆ ಹಾಸ್ಟೆಲ್‌ನಲ್ಲೂ ಸಹ ಕುಮಾರವ್ಯಾಸ ಭಾರತ, ಲಕ್ಷ್ಮೀಶನ ಭಾರತ, ಸರ್ವಜ್ಞನ ತ್ರಿಪದಿಗಳು, ಕುವೆಂಪು, ಬೇಂದ್ರೆ ಹೀಗೆ ಹಲವಾರು ಕಾವ್ಯಗಳನ್ನು ಓದುತ್ತಿದ್ದರು. ಕವಿಗೆ ಕುವೆಂಪುರವರ ಕಾವ್ಯಭಾಷೆ, ಲಯ, ಮಾದುರ್ಯ, ಮೋಡಿ ಬಹಳ ಇಷ್ಟವಾಯಿತು. ಇದರಿಂದ ಜಿ.ಎಸ್.ಎಸ್. ಬಹಳ ಪ್ರಭಾವಿತರಾದರು. ಇದರ ಪರಿಣಾಮವಾಗಿ ಒಂದು ಕವಿತೆ ರಚಿಸಿ ವಾರಕ್ಕೊಮ್ಮೆ ಹಾಸ್ಟಲ್ ನಡೆಯುವ ಸಾಹಿತ್ಯ ಸಭೆಯಲ್ಲಿ ಇದನ್ನು ವಾಚಿಸಿದರು.

“ಇರುವೆಯೊಂದು ತನ್ನದುರಿಗೆ

ನೀರೊಳೀಜು ಕಲಿಸಲೆಂದು

ಹರಿವ ತೊರೆಯ ಬಳಿಗೆ ಹೋಯಿತು”

ಹೀಗೆ ಜಿ.ಎಸ್.ಎಸ್.ರವರಿಗೆ ಮೊದಲು ಸಾಹಿತ್ಯಾಸಕ್ತಿಯನ್ನು ಹುಟ್ಟಿಸಿದವರು ಗಣಿತದ ಮೇಸ್ಟ್ರು ರೇವಣ್ಣ. ನಂತರ ತುಮಕೂರಿನಲ್ಲಿ ಇಂಟರ್‌ಮಿಡಿಯಟ್ ಓದಲು ಶ್ರೀ ಸಿದ್ಧಗಂಗಾ ಮಠದಲ್ಲಿ ಆಶ್ರಯ ಪಡೆದರು. ಅಲ್ಲಿನ ಆಧ್ಯಾತ್ಮಿಕ ವಾತಾವರಣ ನನಗೆ ಬಹಳ ಇಷ್ಟವಾಗಿತ್ತು. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಸಾಮಾಜಿಕ ಕೈಂಕರ್ಯ ಜಿ.ಎಸ್.ಎಸ್. ರವರ ಅನೇಕ ಕವನಗಳಿಗೆ ಪ್ರೇರಣೆ ನೀಡಿತು. ಇಂಟರ್‌ಮಿಡಿಯಟ್‌ನಲ್ಲಿ ಕನ್ನಡ ಕವಿಯಾದ ಜಿ.ಪಿ.ರಾಜರತ್ನಂರವರು ಬಹಳವಾದ ಪ್ರಭಾವ ಬೀರಿದರು. ಬಹಳ ಅದ್ಭುತವಾದ ಮನುಷ್ಯ. ಈ ವೇಳೆಗಾಗಲೇ ಶಿವರುದ್ರಪ್ಪನವರು ಅನೇಕ ಪದ್ಯಗಳನ್ನು ಬರೆದಿದ್ದೆ. ಜಿ.ಎಸ್.ಎಸ್. ಬರೆದ ಪದ್ಯಗಳನ್ನು ಜಿ.ಪಿ.ರಾಜರತ್ನಂಗೆ ತೋರಿಸುವ ಸಂದರ್ಭ ಒದಗಿಬಂದಿತು. ಒಮ್ಮೆ ತರಗತಿಯಲ್ಲಿ ಇಂಗ್ಲೀಷ್ ಕವಿ Thomas gray ರವರ Elegy returned on a country church yard ಕವಿತೆ ಬಹಳ ಪ್ರಸಿದ್ಧವಾದದ್ದು. ಇದರಲ್ಲಿ ಬರುವ ಒಂದು Stanza ನನ್ನ ಮೇಲೆ ತುಂಬಾ ಗಾಡವಾಗಿ ಹಿಡಿಸಿತು. ಅದ್ಯಾವುದು ಅಂದ್ರೆ Full many a gem of puniest receives the god confathomed the caves of the ocean bare, fully may a flowers born, bhush unseen ಈ ಪದ್ಯ ಎಂಥ ಗಾಢವಾದ ಪರಿಣಾಮ ಬೀರ್ತು ಅಂದ್ರೆ ಅವತ್ತು ರಾತ್ರಿ ಕೊಠಡಿಯಲ್ಲಿ ಕೂತ್ಕೊಂಡು ಅದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. (ಆಕಾಶದೀಪ ಸಂದರ್ಶನ ಪು 119)

ಕಡಲಿನ ಕತ್ತಲುಗವಿಯಲ್ಲಿ

ಅಡಗಿಹವೆಷ್ಟೋ ರತ್ನಗಳು

ಘೋರಾರಣ್ಯದ ತರುಗಳಲ್ಲಿ

ತುಂಬಿವಿಹವೆಷ್ಟೋ ಕುಸುಮಗಳು

ಎಸೆಯುವ ರನ್ನವ ಧರಿಸುವರಾರು?

ಕಡಲಿನ ಗವಿಯಂ ಹೊರತೆಗೆದು

ಕುಸುಮದ ಕಂಪನ್ನು ಸೇವಿಪರಾರು?

ತುಂಬಿದ ಕಾನನ ಮಧ್ಯದಲಿ (ಸ.ಕಾವ್ಯ.ಪು.64)

ಇದನ್ನು ನೋಡಿದ ಜಿ.ಪಿ.ರಾಜರತ್ನಂ ರವರು ಮಾಸ್ತಿ ಸಂಪಾದಕೀಯದಲ್ಲಿ ಬರುತ್ತಿದ್ದ 'ಜೀವನ' ಪತ್ರಿಕೆಯಲ್ಲಿ ಪ್ರಕಟವಾಯಿತು. ನಂತರ ಅವರು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಪ್ರಯಾಣ(ಮಹಾರಾಜ ಕಾಲೇಜಿನಲ್ಲಿಬಿ.ಎ. ಅನರ್ಸ)ಸೇರಿದರು. ಅದೃಷ್ಟವಶಾತ್ ಕುವೆಂಪುರವರು ಕನ್ನಡ ವಿಭಾಗದ ಮುಖ್ಯಸ್ಥರಾಗಿ ಮತ್ತು ಅಧ್ಯಾಪಕರಾಗಿ ಬಂದರು. ಇಲ್ಲಿಯವರೆ ದೂರದಿಂದ ನೋಡಿದ್ದ ಕುವೆಂಪುರವರನ್ನು ಹತ್ತಿರದಿಂದ ನೋಡುವ ಶುಭಯೋಗ ಇವರಿಗೆ ಒದಗಿತು. ಕುವೆಂಪುರವರನ್ನು ಕುರಿತು ಇವರು ಹೇಳುವ ಮಾತುಗಳಿವು. **"ಕುವೆಂಪು ಅವರು ಗ್ರೀಕ್ ಶಿಲ್ಪ ಕಲಾವಿಗ್ರಹದ ಮಾದರಿಯ ವ್ಯಕ್ತಿತ್ವ ನೋಡೋದಿಕ್ಕೆ ಒಂದು ಸಂತೋಷ"**. (ಆಕಾಶದೀಪ ಸಂದರ್ಶನ ಪು.119) (ಮೂರು ವರ್ಷ ಆನರ್ಸ್ ಮೂರು ವರ್ಷ ಎಂ.ಎ. ಅವರ ಮಾರ್ಗದರ್ಶನದಲ್ಲಿ ಪಿ.ಹೆಚ್.ಡಿ. ಪಡೆದರು). ಒಮ್ಮೆ ಇವರ ಪದ್ಯಕ್ಕೆ ಬಹುಮಾನ ಸಿಕ್ಕಿತು. ಜಿ.ಎಸ್.ಎಸ್.ಅವರನ್ನು ಕರೆದು ಎಲ್ಲಾ ಕವನಗಳನ್ನು ತೆಗೆದುಕೊಂಡು ಬಾ ಎಂದರು. ಎಲ್ಲವನ್ನು ತೆಗೆದುಕೊಂಡು ಹೋಗಿ ಕೊಟ್ಟು ನೋಡಿ ಇವು ಪರವಾಗಿಲ್ಲ ಚೆನ್ನಾಗಿವೆ' ಅಂತ ಅವರೇ ಆಯ್ಕೆ ಮಾಡಿ, ಪ್ರಬುದ್ಧ ಕರ್ನಾಟಕಕ್ಕೆ ಕಳುಹಿಸಿದರು. ಆ ಕಾಲದಲ್ಲಿ ಪ್ರಭುದ್ದ ಕರ್ನಾಟಕದಲ್ಲಿ ಕವನಗಳು ಪ್ರಕಟವಾಗಿದೆ ಅಂದ್ರೆ ಒಂದು ಡಿಗ್ರಿ ಸಿಕ್ಕ ಹಾಗೇ, ಹೀಗೆ ಜಿ.ಪಿ.ರಾಜರತ್ನಂ, ಮಾಸ್ತಿ, ಕುವೆಂಪು ಇವರನ್ನು ಸಾಹಿತ್ಯ ಕೃಷಿ ನಡೆಸಲು ಪ್ರೋತ್ಸಾಹಿಸಿದರು. ಕುವೆಂಪು ಕುಲಪತಿಗಳು ಆದ ಮೇಲೆ ತೀ.ನಂ.ಶ್ರೀಯವರು ಧಾರವಾಡದಿಂದ ಮೈಸೂರಿಗೆ ಬಂದರು, ಆ ವೇಳಗೆ ನಾನು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದರೂ ಸಹ ಅವರ ತರಗತಿಗೆ ಹೋಗಿ ವಿದ್ಯಾರ್ಥಿಯಾಗಿ ನೋಟ್ಸ್ ಮಾಡಿಕೊಳ್ಳುತ್ತಿದ್ದರು. ಜಿ.ಎಸ್.ಎಸ್.ರವರ ಕಾವ್ಯರ್ಥಚಿಂತನ, 'ಸೌಂದರ್ಯ ಸಮೀಕ್ಷೆ' 'ವಿಮರ್ಶೆಯ ಪೂರ್ವಪಶ್ಚಿಮ'–ಹೀಗೆ ಹಲವಾರು ತೌಲನಿಕ ಮೀಮಾಂಸಾ ಕೃತಿಗಳನ್ನು ಮತ್ತು ವಿಮರ್ಶಾಕೃತಿಗಳನ್ನು ರಚಿಸಲು ಪ್ರೇರಣೆ ಆಯಿತು. ಜಿ.ಎಸ್.ಎಸ್. ರವರ ಮೇಲೆ ಪ್ರಭಾವ ಬೀರಿದ ಮತ್ತೋರ್ವ ವ್ಯಕ್ತಿ ಎಂದರೆ ತ.ಸು.ಶಾಮರಾಯರು. ಇವರು ಶಿವರುದ್ರಪ್ಪನವರಿಗೆ ಪೋಷಕರು, ಗುರು, ಪ್ರೇರಕರು ಆಗಿದ್ದರು. ಅವರೇ ಹೇಳುವ ಹಾಗೇ " ನನ್ನ ವ್ಯಕ್ತಿತ್ವಕ್ಕೆ ತ.ಸು.ಶಾಮರಾಯರು ನೆಲನೀರು, ಕುವೆಂಪು ಅವರು ಗಾಳಿ ಬೆಳಕು (ಆಕಾಶದೀಪ–122) ಎಂದಿದ್ದಾರೆ. 'ಎದೆತುಂಬಿ ಹಾಡಿದೆನು ಅಂದುನಾನು– ಈ ಪದ್ಯ ತ.ಸು.ಶಾಮರಾಯರನ್ನು ಕುರಿತು ಬರೆದದ್ದು ಈ ಪದ್ಯ ಕನ್ನಡಿಗರ ಮನೆ ಮಾತಾಗಿದೆ. ಜಿ.ಎಸ್.ಎಸ್.ರವರು ಕಾವ್ಯ ರಚನೆಯ ಸಂದರ್ಭ ಒಂದು ರೀತಿ ಸಂಗ್ಧಿದ್ದವಾಗಿತು. ಒಂದು ಕಡೆ ನವೋದಯದ ಪ್ರಖ್ಯಾತ ಕವಿಗಳೂ ಮತ್ತೊಂದೆಡೆ ನವ್ಯ ಕವಿಗಳೂ, ಪ್ರಗತಿಶೀಲರು ಹೀಗೆ ಸಾಹಿತ್ಯ ಸಮೃದ್ದರಾಗಿತ್ತು. ಅಂತಹಕಾಲದಲ್ಲಿ ಕುವೆಂಪು ಪ್ರಭಾವಕ್ಕೆ ಒಳಗಾಗಿದ್ದರೂ ಅದರಿಂದ ಬಿಡಿಸಿಕೊಂಡು ಸ್ವಂತಿಕೆಯನ್ನು ಕಾಪಾಡಿಕೊಂಡು ಕಾವ್ಯ ರಚನೆಗೆ ತೊಡಗಿದರು. ಇವರ ಆಸಕ್ತಿ ಕಾವ್ಯವೇ ಆಗಿತ್ತೇ ವಿನಃ ಕಥೆ ಕಾದಂಬರಿ ಆಗಿರಲಿಲ್ಲ. ಕಾರಣ ಆ

ಕಾಲದ ಪ್ರಭಾವವೂ ಇರಬಹುದು. ಇದರ ಜೊತೆಗೆ ವೃತ್ತಿಜೀವನ, ವೈಯಕ್ತಿಕತೆ, ಸಾಮಾಜಿಕತೆ ಎಲ್ಲವನ್ನು ನಿಭಾಯಿಸುವ ಶಕ್ತಿ ಇವರದ್ದಾಗಿತ್ತು. ಮೈಸೂರು, ದಾವಣಗೆರೆ, ಉಸ್ಮಾನಿಯ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ – ಹೀಗೆ ಹಲವಾರು ಕಡೆ ವೃತ್ತಿ ಜೀವನ ನಡೆಸಿದರು. ಆದರೆ ಬೆಂಗಳೂರು ವಿಶ್ವವಿದ್ಯಾನಿಲಯ, 1966ರಿಂದ 1986ರವರೆಗೆ 20 ವರ್ಷಗಳ ಕಾಲ ನಿರಂತರವಾಗಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದ್ದು ಒಂದು ದಾಖಲೆ ಎನ್ನಬಹುದು. ಬಹುಶಃ ಇಂತಹ ದಾಖಲೆಯನ್ನು ಇಲ್ಲಿಯವರೆಗೆ ಯಾರೂ ಹಿಮ್ಮೆಟ್ಟಲು ಸಾಧ್ಯವಾಗಿಲ್ಲ.

ಹೀಗೆ ಜಿ.ಎಸ್.ಎಸ್.ರವರು ಹಂತ ಹಂತವಾಗಿ ಬೆಳೆದು ತಮ್ಮ ಪ್ರತಿಭೆ ಪಾಂಡಿತ್ಯದಿಂದ 14 ಕವನ ಸಂಕಲನಗಳು, ವಿಮರ್ಶಾಕೃತಿಗಳು, ನಾಟಕಗಳು, ಮಿಮಾಂಸಾಕೃತಿಗಳು, ಪ್ರವಾಸ ಸಾಹಿತ್ಯ ವ್ಯಕ್ತಿಚಿತ್ರಗಳು, ಜೀವನ ಚಿತ್ರಗಳು ಹೀಗೆ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡವರು. ಹಾಗೇ ಕಾವ್ಯದ ಬಗ್ಗೆ ಪ್ರೀತಿ ಇರಬೇಕು; ಗೌರವನೂ ಇರಬೇಕು, ಪರಂಪರೆಯಿಂದ ಕಲಿಯೋದು ಹೇಗಿದೆಯೋ ನಮ್ಮ ಸಮಕಾಲೀನರಿಂದ ಕಲಿಯುದು ಹಾಗೆ ಇದೆ ಎಂದು ಹೇಳುತ್ತಾ ಕಿರಿಯ ಕವಿಗಳಿಗೂ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ.

ನನ್ನ ಕಾರ್ಯಕ್ಷೇತ್ರ ಇವರ ಸಮಗ್ರ ಕಾವ್ಯದ ರೂಪವನ್ನು ಕುರಿತದ್ದು ಆಗಿದೆ. 1947 ರಿಂದ 2008ರವರೆಗೆ ಬಂದು 14 ಕವನ ಸಂಪುಟಗಳಲ್ಲಿ ಆಗಿರುವ ಬಾಹ್ಯ ಬದಲಾವಣೆ ಮತ್ತು ಆಂತರಿಕ ರಚನೆಯಲ್ಲಿ ಕವಿ ಹೇಗೆ ಸಮಕಾಲೀನತೆ ಸ್ಫಂದಿಸಿ ಅವನ್ನು ಅಳವಡಿಸಿಕೊಳ್ಳುತ್ತಾನೆ ಎಂದು ನೋಡುವುದು ಈ ಯೋಜನೆಯ ಉದ್ದೇಶವಾಗಿದೆ. ಇದನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

## ಅಧ್ಯಾಯ–3

## ಜಿ.ಎಸ್.ಎಸ್. ಕಾವ್ಯದ ಹೆಜ್ಜೆ ಗುರುತುಗಳು

ಕಾವ್ಯಚಿಂತನೆಯಲ್ಲಿ ಅಥವಾ ಕಾವ್ಯ ನಿರ್ಮಾಣ ಮಾಡುವಲ್ಲಿ ಕವಿಯೂ ವಿಮರ್ಶಕನಾಗಿ, ವಿಮರ್ಶಕ ಕವಿಯಾಗಿ ಬೆರೆತು ಹೋಗಿರುತ್ತಾನೆ. ಅಂತಹ ಅನೇಕ ಶ್ರೇಷ್ಠ ಕವಿ ಮತ್ತು ವಿಮರ್ಶಕರಲ್ಲಿ ಜಿ.ಎಸ್.ಎಸ್.ಒಬ್ಬರು. ಇವರ ಕಾವ್ಯ ರಚನೆಯ ಸಂದರ್ಭ ಸಂದಿಗ್ಧವಾಗಿದ್ದರೂ ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ನಿರ್ದಿಷ್ಟವಾದ ಸಂದರ್ಭದಲ್ಲಿ ಶಾಶ್ವತವಾಗಿ ನಿಲ್ಲುವಂತಹ ಕವಿ. ಇವರದ್ದು ಪ್ರಜಾಸತ್ತಾತ್ಮಕವಾದ ಗುಣವನ್ನು ಕಾವ್ಯದೂದ್ದಕ್ಕೂ ಕಾಣಬಹುದು. ನವೋದಯದಿಂದ ನಿರಂತರವಾಗಿ ಇಲ್ಲಿಯವರೆಗೂ ವೈಪರಿತ್ಯವಲ್ಲದ ಪ್ರಗತಿಪರ ಮತ್ತು ಪರಂಪರೆಯನ್ನು ಹದಗೊಂಡಿರುವ ಸೃಜನಶೀಲತೆಯನ್ನು ಕಾವ್ಯದಲ್ಲಿ ಕಾಣಬಹುದು. ಕಾವ್ಯ ಇವರಿಗೆ ವ್ಯಕ್ತಿತ್ವದ ಒಂದು ಭಾಗ. ಜಡಗೊಳ್ಳದ ನಿರಂತರ ಸಂವೇದನೆ ಆಧುನಿಕತೆ ತನಗೆ ತಾನೆ ಗೋಚರವಾಗುವುದಿಲ್ಲ. ಅದು ಹಳೆಯದರ ಗರ್ಭದಲ್ಲೇ ಬೆಳೆಯುತ್ತಿದ್ದು ನವೋದಯದಿಂದ ಇಲ್ಲಿಯವರೆಗೆ ಕಾವ್ಯ ವಿಕಾಸವಾಗಿರುವುದನ್ನು ಗುರುತಿಸಬಹುದು. ನವೋದಯದ ಆನಂದ, ಅಧ್ಯಾತ್ಮದ ನೆಲೆಗಳಿಂದ ದಲಿತ ಬಂಡಾಯದ ಆಕ್ರೋಶದವರೆಗೂ ಕಾವ್ಯ ಬೆಳೆದು ಬಂದಿದೆ.

ನಾನೇಕೆ ಬರೆಯುತ್ತೇನೆ
ಸುಮ್ಮನಿರಲಾರದ್ದಕ್ಕೆ;
ನನ್ನ ವೇದನೆ ಸಂವೇದನೆಗಳನ್ನು
ಕ್ರಿಯೆ ಪ್ರತಿಕ್ರಿಯೆಗಳನ್ನು
ದಾಖಲು ಮಾಡುವುದಕ್ಕೆ;
ನಿಂತ ನೀರಾಗದೆ ಮುಂದಕ್ಕೆ
ಹರಿಯುವುದಕ್ಕೆ,
ಎಲ್ಲದರ ೊಜೊತೆ ಬೆರೆಯುವುದಕೆ (ಸ.ಕಾ.ಪು.461)

ಇದೇ ಜಿ.ಎಸ್.ಎಸ್.ರವರ ವಿಶೇಷತೆ. ಎಲ್ಲದರ ಜೊತೆ ಅನುಸಂಧಾನಿಸುವುದರ ಮುಖೇನ, ಕವಿ ಎಲ್ಲಾ ಕಾಲಘಟ್ಟಗಳಲ್ಲಿ ಚಳುವಳಿಗಳಲ್ಲಿ ಸ್ಪಂದಿಸುತ್ತಲೇ ಯಾವ ಸಂಧಿಗ್ದತೆಗೂ ಒಳಗಾಗದೇ ಬೆಳೆದ ಕವಿ.

**ಸಾಮಗಾನದ** ಕವಿತೆಗಳಲ್ಲಿ ಕೆಲವು ಊರ್ಧ್ವಗಾಮಿಯಾದರೆ, ಜಗತ್ತಿನ ಶ್ರೇಯೋಕಾಂಕ್ಷಿಗಳೆಲ್ಲರ ಅಭಿನಂದನೆಗೂ ಪಾತ್ರವಾಗಬೇಕಾದ್ದೆ. ಅತಿಯಾದ ಲೌಕಿಕತೆ, ಭೋಗಾಕಾಂಕ್ಷೆ, ಸ್ವಾರ್ಥತೆ ಅನುರೀಚಾಪಲ್ಯ ಇತ್ಯಾದಿ ಲಕ್ಷಣಗಳಿಂದ ಕೂಡಿರುವ ನಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಒಂದು ಜೀವ ಆಕಾಶದ ಕತೆ ಕಣ್ಣೆತ್ತಿ ನೋಡಿದರೆ, ಆದರ್ಶದ ಅಭೀಷ್ಟೆ, ಸುಂದರವಾದದ್ದನ್ನೂ, ಸತ್ಯವಾದುದನ್ನು ಶಿವದಾದುದನ್ನೂ ರಸಚೇತನದಿಂದ ಆರಾಧಿಸುವ ಗುಣ ಇಲ್ಲವೆ, ಈ ಕವನಗಳಲ್ಲಿ ಅಚ್ಚುಕಟ್ಟಾದ ಭಾಷಾಶಯ್ಯ, ಪದಗುಚ್ಛಗಳಲ್ಲಿ ಕಂಡು ಬರುವ ಕಲ್ಪನಾಚಾತುರ್ಯ ಛಂದೋವಿಲಾಸ ಇವೆಲ್ಲವೂ ಹಿರಿಯ ಕವಿಗಳಿಂದ ಪಡೆದ ಪ್ರೇರಣೆ ಎನ್ನಬಹುದು. 'ಕರೆ' 'ಒಳದನಿ' 'ತೃಪ್ತಿ'– ಇತ್ಯಾದಿ ಕವನಗಳಲ್ಲಿ ಭಕ್ತಿ, ಎಚ್ಚರಿಕೆ, ಹಾರೈಕೆ ಮುಂತಾದುವುಗಳನ್ನು ಗುರುತಿಸಬೇಕಾಗುತ್ತದೆ.

**'ಚೆಲುವು–ಒಲವು'**–ಕವನಗಳು ಸುಸಂಸ್ಕೃತವಾದವು; ಕೋಮಲವಾದವು, ಪರಸರ ಸಂವೇದಿ ಯಾದದ್ದು ಮತ್ತು ರಸವನ್ನು ವಿಷಯಗಳ ಮೂಲಕ ತಿಳಿಸಿಕೊಡುವ ಸಾಮರ್ಥ್ಯವುಳ್ಳದ್ದು, ಈ ಸಂಗ್ರಹದಲ್ಲಿನ ಕೆಲವು ಪದ್ಯಗಳು ಓದುಗರ ಹೃದಯವನ್ನು ಸೆರೆಹಿಡಿದಿವೆ. 'ಮಲ್ಲಿಗೆ' 'ಅಲೆಗಳು' ಸುಂಟರಗಾಳಿ' 'ಜಡೆ' ಇತ್ಯಾದಿ 'ಕ್ರಾಂತಿಕಾರ' – ಪದ್ಯದ ಒಂದು ಉದಾಹರಣೆ.

ಅದೊಬಂದ ಇವನೊಂದು ಕಿರಿಯ ಬಿರುಗಾಳಿ
ಮನೆಯ ಒಳಗೂ ಹೊರಗೂ ಇವನದೇ ದಾಳಿ
................. ಹೊಳೆವೆಳೆಯ ಕಂಗಳಲ್ಲಿ ಬೆಳದಿಂಗಳುನು ತುಂಬಿ
ತಂದು ಮನೆಯಂಗಳಕೆ ಸುರಿವ ದೀರ. (ಸ.ಕಾ.ಪು–95)

ಪ್ರತಿಯೊಂದು ಸಾಲಿನಲ್ಲಿ ಸಮಗ್ರಭಾವ ಮಡುಗಟ್ಟಿ ನಿಂತಿದೆ. ಇಂತಹ ಪದ್ಯಗಳು ಸಾಕಷ್ಟಿವೆ. ಶಿವರುದ್ರಪ್ಪನವರ ಭಾವುಕಲೋಕ ಆಧರಿಸಿ ಅಭಿನಂದಿಸುವುದರಲ್ಲಿ ಸಹೃದಯರು ಹಿಮ್ಮೆಟ್ಟಿಲ್ಲ.

**'ದೀಪದಹೆಜ್ಜೆ'** ಕವನ ಸಂಕಲನದ ಕವನಗಳಲ್ಲಿ ಬದುಕಿನ ಎರಡು ಮುಖಗಳು ಗೋಚರವಾಗುತ್ತವೆ. ಒಂದು; ಮಾನವ ಮತ್ತು ಅವನ ಅಂತರಂಗ, ಎರಡು: ಮಾನವ ಮತ್ತು ಕಾಲ, ಮಾನವನ ಜಾಗೃತ ಜೀವನ ಮೊದಲು ಎದುರಿಸಬೇಕಾದ್ದು ತನ್ನನ್ನು; ತನ್ನ ಅಂತರಂಗದಲ್ಲಿ ಒಂದು ತಾಕಲಾಡುವ ವಿವಿಧ

ಭಾವಗಳನ್ನು ಘರ್ಷಣೆಗಳನ್ನು, ಹೋರಾಟವನ್ನು ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು. ಅಂದರೆ ಆತ್ಮಶೋಧನೆ ಮಾಡಿಕೊಳ್ಳುವುದು, 'ಹುಟ್ಟಿದ ಹಬ್ಬ', 'ಶೋದನೆ' 'ಪತಿತಿ' 'ಪ್ರಶ್ನೆಉತ್ತರ', 'ಹೂವುಗಳ ನಿಟ್ಟುಸಿರು' 'ನೆರಳಿಲ್ಲದದಾರಿ; ;ನ್ಯಾಯ ನಿಯಮ' ಹೀಗೆ ಹಲವಾರು ಪದ್ಯಗಳನ್ನು ಉದಾಹರಿಸಬಹುದು. ಮಾನವ ಮತ್ತು ಕಾಲ ಎಂದರೆ ತನ್ನನ್ನು ತಾನು ಬಿಡುಗಡೆ ಮಾಡಿಕೊಳ್ಳುವುದು ಅಂದರೆ ಕಾಲದ ಸೆರೆಯಿಂದ ಬಿಡಿಸಿಕೊಳ್ಳುವುದು ಮತ್ತು 'ಮಬ್ಬಿನಿಂದ ಮಬ್ಬಿಗೆ', ಅಮೃತಮಹೋರ್ತ' 'ಬಿಡುಗಡೆ' 'ಸಂಜೆದಾರಿ' 'ಅರೆಮುಗಿದ ಕವನ' 'ಗಡಿಯಾರದಡಿಯಲ್ಲಿ' ನಿರ್ಧಾರ 'ಬಿಡುಗಡೆಯ ನೆನಪು' ಇತ್ಯಾದಿ.

**<u>ದೇವಶಿಲ್ಪ:</u>** ಈ ಕವನ ಸಂಕಲನದಲ್ಲಿ ಒಟ್ಟು 45 ಕವನಗಳಿವೆ. ಇದರಲ್ಲಿ ಬಾಳಿಗೊಂದು ನಂಬಿಕೆ ಬಹಳ ಮುಖ್ಯ. ಆ ನಂಬಿಕೆಯಿಂದ ಲೋಕ ವ್ಯವಹಾರದೊಡನೆ ಸಂಪರ್ಕವನ್ನು ಕುರಿತು ವಿವೇಚನೆ ನಡೆಸಿದ್ದಾರೆ. ಅಲ್ಲದೆ ಹಂಪೆಯನ್ನು ಕುರಿತು ಮೂರು ಕವನಗಳನ್ನು ರಚಿಸಿದ್ದಾನೆ. ಅಲ್ಲಿನ ವೈಭವದ ವಿಡಂಬನೆಯನ್ನು ಚಿತ್ರಿಸಿದ್ದಾರೆ. ಇದರಲ್ಲಿ 'ಬೀಳ್ಕೊಡುಗೆ'– ಎಂಬ ಧೀರ್ಷ ಕವನಕ್ಕೆ 1682ರಲ್ಲಿ ರಾಜಸೇವಾಸಕ್ತ ಬಿ.ಎಂ.ಶ್ರೀಯವರ ರಜತೋತ್ಸವ ಸುವರ್ಣ ಪದಕವನ್ನು ಪಡೆದ ಕವಿತೆ. 'ರೈಲು' 'ಬಾಡಿಗೆ ಮನೆ' 'ಸಂಜೆ ಮೌನ', 'ಒಂದು ಕ್ಷಣ', ಕಾಣಿಕೆ'. 'ಅಂದು–ಇಂದು', 'ಎಚ್ಚರಿಕೆ' – ಹೀಗೆ ಹಲವಾರು ಕವನಗಳು ವಾಸ್ತವ ಬದುಕಿನ ಚಿತ್ರಣವನ್ನು ನೀಡಿವೆ.

**ಕಾರ್ತಿಕ:–** ಈ ಕವನ ಸಂಕಲನದಲ್ಲಿ ಕಾವ್ಯದ ಹೊಸ ಚಲನೆಯೊಂದಿಗೆ ಆಳ ಮತ್ತು ವಿಸ್ತಾರವನ್ನು ಗುರ್ತಿಸಬಹುದಾಗಿದೆ. ನಿರಂತರವಾಗಿ ಹರಿಯುವ ಸಾಹಿತ್ಯ ವಾಹಿನಿಯಲ್ಲಿ ಕೆಲವು ನಿರ್ಧಿಷ್ಟ ಅವಧಿಯ ಅನುಭವಗಳನ್ನು, ಭಾವನಾವಿಶೇಷಗಳನ್ನು ಕಡೆದು ನಿಲ್ಲಿಸುವ ಕ್ರಿಯೆ ಆಗಿದೆ. ಆಗಾಧವಾದ ಜೀವನಪ್ರೀತಿ, ಸುಖವಿಲ್ಲದ ಕಲ್ಪನೆಯನ್ನು ರಾಜಿಯಾಗದ ಮನಃಸ್ಥಿತಿ, ಆಧುನಿಕ ಪಲ್ಲಟಗಳಿಂದಾಗುವ ದುಷ್ಪರಿಣಾಮಗಳು, ಪರಂಪರೆಯ ಪುನರ್‌ರಚನೆ, ಜೀವನವನ್ನು ನೋಡು ರೀತಿ–ಇವುಗಳನ್ನು 'ಕನಸಿನಿಂದ–ಕನಸಿಗೆ', 'ನನ್ನ ಪ್ರೀತಿ', 'ಪ್ರಾರ್ಥನೆ', 'ಕಾರ್ತಿಕದ ಇರುಳು', –ಹೀಗೆ ಅನೇಕ ಕವನಗಳನ್ನು ವಿವರಿಸಲಾಗಿದೆ.

**ಅನಾವರಣ:–** ಇಲ್ಲಿನ ಕವನಗಳಲ್ಲಿ ಮೌಲ್ಯಗಳ ಅಧಃಪತನ, ನಗರ ಪ್ರಜ್ಞೆಯ ಸೂಕ್ಷ್ಮಗಳನ್ನು ಉಪಮೆಗಳ್ನು, ಸಂಕೇತಗಳನ್ನು 'ಹಳೇಪೇಪರ್–ಖಾಲಿಶೀಶೆ' 'ನಾಯಿಗಳಿವೆ ಎಚ್ಚರಿಕೆ', 'ಅನಾವರಣವಾಯಿತಂತೆ', 'ಶನಿದೇವರ ವಿಗ್ರಹ' ಇದುನಗರ' ಇಂತಹ ಅನೇಕ ಕವಿತೆಗಳಲ್ಲಿ ವಿಡಂಬಿಸಿದ್ದಾರೆ. 'ಕುಲುಮೆಯೊಳಗೆ ಕಿಡಿಯಿಲ್ಲ' – ಕವಿಯ ವಿಚಲಿತ ಪ್ರಜ್ಞೆಗೆ ಸಾಕ್ಷಿ. ಕಾವ್ಯ ವರ್ತಮಾನ ಕಾಲದ ಒತ್ತಡಗಳಿಗೆ ಮಣಿಯುತ್ತವೆ ಎಂಬುದನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ.

**ತೆರೆದ ದಾರಿ:–** ಸುಮಾರು 67 ಪದ್ಯಗಳನ್ನು ಒಳಗೊಂಡ ಕವನ ಸಂಕಲನ, ಆಧುನಿಕತೆ ಮತ್ತು ನಾಗರೀಕತೆಗೆ ಸಿಕ್ಕ ಮಾನವ ಬದುಕಿನ ಮೂಲದ್ರವ್ಯ ಪ್ರೀತಿಯ ಸೆಲೆಯನ್ನು ಕೊಚ್ಚಿಹಾಕಿದೆ ಎಂಬುದನ್ನು ಚಿತ್ರಿಸಿದ್ದಾರೆ. ಒಂಟಿತನದ ವಿಷಾದದ ಛಾಯೆ 'ತೆರೆದ ದಾರಿ', 'ವಾಲ್ಮೀಕಿ' ಅಂಥ ಪರಿಣಾಮಕಾರಿ ಕವನಗಳಲ್ಲಿ ಚಿತ್ರಿಸಿದ್ದಾರೆ. ನವೋದಯದ ನಂತರ ವೈಯಕ್ತಿಕ ಸಂಬಂಧಗಳನ್ನು ಕುರಿತು ಕಾವ್ಯದಲ್ಲಿ ಚಿತ್ರಿಸಿರುವುದನ್ನು ಮೆಚ್ಚಬೇಕಾದ ವಿಷಯವಾಗಿದೆ. ವೈಯಕ್ತಿಕ ಸಂಬಂಧಗಳ ಪಾವಿತ್ರ್ಯತೆಯನ್ನು ಉಳಿಸಲಾಗಿದೆ. ಹೃದಯ ಹೀನ ಜಗತ್ತ ಇದಾಗಿದೆ. ಸುತ್ತಲೂ ಅಂಧಕಾರ ಕವಿದು, ಹೃದಯಗಳು ಸಂಬಂಧ ಕಡಿದು ಬಿದ್ದಂತಹ ಸನ್ನಿವೇಶವನ್ನು ಹಲವಾರು ಕವಿತೆಗಳಲ್ಲಿ ಚಿತ್ರಿಸಿದ್ದಾರೆ. 'ಸೋಲಿನ ಹಾಡು' 'ಸಂಕ್ರಮಣ' ಪ್ರೀತಿಯ ಗರಗಸ', 'ಎರಡು ಕತ್ತಲ ನಡುವೆ', 'ದುರಂತ', 'ಪ್ರೇಮದಹನ', 'ಕಂಬನಿ ಕವಿತೆ' – ಇತ್ಯಾದಿ.

**ಗೋಡೆ:–** ಈ ಕವನ ಸಂಕಲನದಲ್ಲಿ ಕಾವ್ಯದಲ್ಲಿ ಬರುವ ಮನುಷ್ಯ ಅಖಂಡವಾದವನು ಎಂದು ಹೊರಟರೇ ಕೊನೆಗೆ ಅಲ್ಲಿಸಿಗುವುದು ಸಾಮಾಜಿಕ ಮನುಷ್ಯನೇ, ಮನುಷ್ಯ ನಡುವಿನ ಸಂವಹನ ಸಮಸ್ಯೆ ಇಲ್ಲಿ ಬಹಳ ತೀವ್ರತೆಯೊಂದಿಗೆ ಪ್ರಕಟವಾಗಿದೆ. ಜೀವನದ ಹೊಸ ಸವಾಲು, ಸರಳ ವ್ಯಂಗ್ಯ, ತನ್ನ ಜೀವನದಲ್ಲಿ ಅಶಾಂತಿಯ ಸುತ್ತ ಎದ್ದಿರುವ ಗೋಡೆಯನ್ನು ದಾಟಿ ಮತ್ತೆ ಕಾವ್ಯದಲ್ಲಿ ಸಮತೆಯನ್ನು ಸಾಧಿಸಬೇಕು. 'ಗಾಂಧೀಶತಮಾನೋತ್ಸವ' 'ನನ್ನ ನಿನ್ನ ವಿಚಾರ', ನಮ್ಮವರು', ಅನ್ವೇಷಣೆ', 'ಖಾಲಿಸೈಟಿನ ಕೆಳಗೆ', ಇತ್ಯಾದಿ.

**ಕಾಡಿನ ಕತ್ತಲಲ್ಲಿ:–** ಸಾಮಾಜಿಕ ವಾಸ್ತವಗಳನ್ನು ಕುರಿತದ್ದು ಜೀವನದಲ್ಲಿಯ ಮೂಲಭೂತ ಘರ್ಷಣೆಗಳ ಅಂತರ್ಮುಖೀ ಅರಿವಿನಿಂದ ಈ ಕವನಗಳು ಬಂದಿಲ್ಲ ಎಂದರೂ ಭಾವಾಗೀತಾತ್ಮಕವಾಗಿ ಯಶಸ್ಸು ಪಡೆದಿವೆ. ಕೆಲವು ಸಲ ಒತ್ತಡದಿಂದ ಕಾವ್ಯ ರಚಿಸಿದ್ದಾರೆ ಎನಿಸಿದರೂ ಕವಿ ತನ್ನನ್ನು ಪುನರುಜ್ಜೀವಸಿಕೊಳ್ಳುವುದರ ಒಂದು ಮಾರ್ಗ ಎನಿಸುತ್ತದೆ. ಸಾಮಾಜಿಕ ಜೀವನವನ್ನು ದಾಟಿ ನಿಗೂಢವಾದ ಅನುಭವಗಳನ್ನು ಹೇಳುವ ಕವನಗಳು ಇವು ಅಗಿವೆ. "ಸಾಲುಮರದ ಕೆಳಗೆ" – 'ಕೇರಳದಲ್ಲಿ' 'ನಿಶ್ಯಬ್ದ', 'ಕರೆಯಸೆಳೆತ', 'ನಿನ್ನ ನಗು 'ದುಸ್ವಪ್ನ' ಇತ್ಯಾದಿ ಇಂತಹ ಅರ್ಥಪೂರ್ಣ ನವೋದಯ ಕಾವ್ಯ ರಚಿಸಲು ಜಿ.ಎಸ್.ಎಸ್. ಅವರಿಗೆ ಸಾಧ್ಯ ಎನಿಸುತ್ತದೆ.

**ಪ್ರೀತಿ ಇಲ್ಲದ ಮೇಲೆ:–** ಬದುಕಿನ ಅರ್ಥಹೀನತೆಯನ್ನು, ಅಸಮಾನತೆಯನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು 'ಪ್ರೀತಿ ಇಲ್ಲದ ಮೇಲೆ', 'ಯಾವ ಹಾಡ ಹಾಡಲಿ' 'ಹೀಗೊಂದು ಪ್ರೇಮಗೀತೆ' –ಮುಂತಾದ ಕವನಗಳನ್ನು ವಿವರಿಸದ್ದಾರೆ. ಆದರೂ ಕವಿ ಕಾವ್ಯ ರಚನೆಯ ಸ್ಫೂರ್ತಿಯನ್ನು ಕವಿತೆ ಚೆನ್ನಾಗಿ ಚಿತ್ರಿಸುತ್ತದೆ. ಉದಾಹರಣೆ 'ನಾನು ಬರೆಯುತ್ತೇನೆ'.

**ಚಕ್ರಗತಿ:–**ಈ ಕವನ ಸಂಕಲನದಲ್ಲಿ ಹಳೆಯ ಕಾವ್ಯ ಪ್ರಯೋಗಳಲ್ಲಿದರಿಂದ ಹೊಮ್ಮಿದ ಹೊಸ ಎಚ್ಚರ, ಕೌಶಲ್ಯಗಳ ಸ್ಪಷ್ಟ ಸೂಚನೆಗಳನ್ನು ಕಾಣಬಹುದು ವ್ಯಕ್ತಿಯ ಸಂಬಂಧವನ್ನು ನಂಬಿಕೆಯ ನೆಲೆಯಲ್ಲಿ ಒಪ್ಪಿಕೊಂಡು ವ್ಯಕ್ತಿ ಮತ್ತು ಸಮಾಜ ನಡುವಣ ಸಂಬಂಧದ ಅನ್ವೇಷಣೆಗೆ ತಿರುಗಿ ಬೆರಗಾಗಿ ನಿಲ್ಲುವ ಸನ್ನಿವೇಶವನ್ನು ಇಲ್ಲಿನ ಬಹಳಷ್ಟು ಕವನಗಳು ಚಿತ್ರಿಸಿವೆ. 'ಸಂಭವ' "ಪ್ರಾಣಪಕ್ಷಿ' ನೀವೇ ಹೇಳಿ', ನಾವು ಮತ್ತು ಮರಗಳು' ಒಂದು ಸಂಗತಿ', 'ಒಂದು ಹಾಡು' 'ದುಃಖ', ಇತ್ಯಾದಿ ಇದರಲ್ಲಿರುವ ಇನ್ನೊಂದು ವಿಶೇಷತೆ ಎಂದರೆ **"ಪದಬಂಧಗಳ ಪ್ರಯೋಗಗಳು"**.

**ವ್ಯಕ್ತಮಧ್ಯ:–** ನವ್ಯ ಕಾವ್ಯ ರಚನೆಯ ಸಂದರ್ಭದಲ್ಲಿ ಹೇಳುವುದಾದರೆ, ಬರವಣಿಗೆ ತನ್ನ ಬಂಧವನ್ನು ನಿಯಮಿತವಾಗಿ ಬಳಸುವುದು ಎಂದರ್ಥ. ಆ ನಿಯಮ ಬದ್ದ ಗುಣವನ್ನು ಜಿ.ಎಸ್.ಎಸ್.ರವರು ಈ ಕವನ ಸಂಕಲನದಲ್ಲಿ ತಂದಿದ್ದಾರೆ. 'ಚಕ್ರಗತಿ'ಯ ಕೆಲವು ಪದ್ಯಗಳಲ್ಲಿ ಇದರ ಸುಳಿವು ಸಿಕ್ಕರೂ ಸಂಕಲನದಲ್ಲಿ 'ಮುಕ್ತಛಂದಸ್ಸು' ಎಂಬ ಛಂದಸ್ಸನ್ನು ಬಳಸಿದ್ದಾರೆ. ಕವನಗಳಲ್ಲಿ ಚತುಷ್ಪದಿ ಪದ್ಯಬಂದವನ್ನು ಕಂಡರೂ ಅದು ಅಲ್ಲಿಗೆ ನಿಲ್ಲದೆ ಪದ್ಯದಿಂದ ಪದ್ಯಕ್ಕೆ ಕಾವ್ಯ ಹೊರಳುತ್ತಾ ಸಾಗುತ್ತದೆ. ಇದನ್ನು 'ಮುಕ್ತಬಂಧ' ಎಂದು ಸ್ವತಃ ಕವಿಗಳೆ ಕರೆದಿದ್ದಾರೆ. ಇದೊಂದು ಕಾವ್ಯ ರಚನಾ ವಿಧಾನ. ಉದಾ 'ಪಂಪೋತ್ಸವ', 'ಪೂರ್ಣಾನದಿಯ ಮೊಸಳೆ', 'ಸಿಂಡರಲಾ', 'ಚರಿತ್ರೆ ಅಂದರೆ' – ಇತ್ಯಾದಿ.

**ಅಗ್ನಿಪರ್ವ**: ಈ ಕವನ ಸಂಕಲನದಲ್ಲಿ ಹೊಸ ಹೊಸ ಪ್ರತಿಮೆಗಳು ಹೊಸ ಹೊಸ ಬೆಳಕಿನೊಂದಿಗೆ ಪುನರ್ ಅವತರಿಸಿವೆ. 'ಮೋಡಗಳು', 'ಆಕಾಶ–ನೆಲ', 'ಉರಿವ ಒಲೆಗಳ ಮುಂದೆ' 'ಅಗ್ನಿಪರ್ವ', ಪಿತಾರಿ ಇತ್ಯಾದಿ.

**ತೀರ್ಥವಾಣಿ**: ಇಲ್ಲಿರುವ ಐವತ್ತು ಕವನಗಳ ಶ್ರೀರಾಮಕೃಷ್ಣರ ಉಪದೇಶವನ್ನು ಪಡೆದ ನಂತರ ರಚಿಸಿದ ಗೀತೆಗಳಾಗಿವೆ. ಭಕ್ತಿರಸದ ನೆಲೆಯಿಂದ ಈ ಗೀತೆಗಳು ಸಾಹಿತ್ಯ ದೃಷ್ಟಿಯಿಂದಲೂ ಅಪೂರ್ವವಾದವು. ಉದಾ 'ಮಹಾಮಯೆ', 'ಮುಳುಗುತಿದೆ ನೌಕೆ', 'ನವೋಗೌರಿ', 'ತಪಸ್ಸು', 'ಆಹ್ವಾನ', 'ಪ್ರಾರ್ಥನೆ' ಇತ್ಯಾದಿ.

ಹೀಗೆ ಜಿ.ಎಸ್.ಎಸ್. ಕನ್ನಡ ನವೋದಯ ಕವಿಗಳ ಕಾವ್ಯಮಾರ್ಗ ಪ್ರೇರಿತರಾಗಿ ತಮ್ಮ ನಲವತ್ತು ವರ್ಷಗಳಲ್ಲಿ ಕವಿತೆ ಹಾದು ಬಂದ ನೆಲೆಗಳನ್ನು ಕಂಡರಿಸಿದ್ದಾರೆ. ತಮ್ಮದೇ ಆದ ರೀತಿಯಲ್ಲಿ ಇದಕ್ಕೆ ಪ್ರತಿಕ್ರಿಯಿಸಿಯೂ ಇದ್ದಾರೆ. ನವ್ಯ ಬಂಡಾಯ ಮಾರ್ಗಗಳು ಜಿ.ಎಸ್.ಎಸ್.ಕವಿತೆಗಳ ಪರಿವಲಯದಲ್ಲಿ ನುಗ್ಗಿ ಬಂದಿರುವುದಕ್ಕೆ ಸಾಕ್ಷಿಯಾಗಿ ಅನೇಕ ಕವಿತೆಗಳಿವೆ. ಕಾವ್ಯ ರಚನೆಯ ಉದ್ದೇಶ, ಪರಿಶ್ರಮಗಳ ಬಗೆಗೆ ಬಹಿರಂಗ ಘೋಷಿತವದಲ್ಲದಿದ್ದರೂ ಆಂತರಿಕ ಒತ್ತಡಗಳಿಂದ ಖಚಿತವಾಗಿದ್ದ ಕವಿ ತಾವು ಹಿಡಿದ ಹಾದಿಯಲ್ಲಿ ಮುನ್ನೆಡೆದಿದ್ದಾರೆ.

ಒಟ್ಟು 14 ಕವನ ಸಂಕಲಗಳಲ್ಲಿ ಕವಿತೆಗಳ ಮೂಲಕ ಕವಿ ಓದುಗ ಸಮುದಾಯದೊಡನೆ ಮುಖಾಮುಖಿ ಆಗಿದ್ದಾರೆ. ಕಾವ್ಯಾಭ್ಯಾಸಿಗಳು ಅವರ ಕಾವ್ಯದ ಅಧ್ಯಯನವನ್ನು ಮಾಡುತ್ತಲೇ ಇದ್ದಾರೆ. ಕವಿಯ ಕಾವ್ಯ ಸಮೃದ್ದಿಯೊಡನೆ ಸಾಫಲ್ಯವನ್ನು ಕಾಣುತ್ತೇವೆ.

ಹೊಸಗನ್ನಡ ಕಾವ್ಯದ ಎಲ್ಲಾ ಪ್ರಮುಖ ಕವಿಗಳು ತಮ್ಮ ಹಿಂದಿನ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಪರಂಪರೆಗೆ ತಮ್ಮ ಪ್ರತಿಕ್ರಿಯೆಗಳನ್ನು ದಾಖಲು ಮಾಡುತ್ತಲೇ ತಮ್ಮ ತಮ್ಮ ಕಾವ್ಯಕಲ್ಪನೆಗಳನ್ನು ಕಂಡುಕೊಂಡಿದ್ದಾರೆ. ಈ ಕಾವ್ಯ ಕಲ್ಪನೆಯ ಹಿಂದೆ ಭಾರತೀಯ ಚಿಂತನೆಗಳಿರುತ್ತವೆ. ಇದರ ಜೊತೆಗೆ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ. ತೀರ ಸ್ಥೂಲವಾಗಿ ಹೇಳುವುದಾದರೆ ಶಿಲ್ಪವು ಸಂವಿಧಾನ ಕಥೆ, ಧೋರಣೆಗಳನ್ನು ಒಳಗೊಂಡು ಕೃತಿಯ ಅಸ್ಥಿಪಂಜರದಂತೆ ಇರುವಂಥದು. ಹಾಗೆಯೇ ಛಂದಸ್ಸು ಭಾಷೆ, ವಾಕ್ಯರಚನೆಗಳನ್ನು ಒಳಗೊಳ್ಳುವ ಬಂಧ, ಅಥವಾ ನೆಯ್ಗೆ ಕೃತಿಯ ಧರ್ಮ ಇದ್ದ ಹಾಗೆ ಶಿಲ್ಪ ವಸ್ತುವಿಗೆ ಸಂಬಂಧಿಸಿದ್ದುದರಿಂದ 'ಕಾಲ'ದ ಪ್ರಶ್ನೆ ಬರುತ್ತದೆ. 'ಕಾಲ'ವನ್ನು ಹೀಗೆ ಯಾವ ರೂಪದಲ್ಲಿ ಕೃತಿ ನಿರೂಪಿಸುತ್ತದೆ ಎಂಬ ಪ್ರಶ್ನೆ. ಕಾಲಘಟಕ್ಕನುಗುಣವಾಗಿ ಕಾವ್ಯಗಳ ರೂಪ ಸಿದ್ಧವಾಗುತ್ತದೆ. ಚಂಪೂ, 12ನೇ ಶತಮಾನದ ವಚನ 14 ಶತಮಾನದಲ್ಲಿ ಷಟ್ಪದಿ 20ನೇ ಶತಮಾನದಲ್ಲಿ ಎಲ್ಲಾ ಸಾಹಿತ್ಯ ಪ್ರಕಾರಗಳು ರೂಪ ಪಡೆದಿರುವುದನ್ನು ಕಾಣಬಹುದು. ಶಿಲ್ಪವನ್ನು ಕುರಿತು ಎಲ್ಲ ಬಗೆಯ ವಿಮರ್ಶಾತತ್ವಗಳೂ ಚಿಂತನೆ ನಡೆಸುತ್ತವೆ. 'ಕೃತಿಯೊಂದರ ಐಕ್ಯತೆಯ ಬೆಳವಣಿಗೆ" ಎಂದು ಶಿಲ್ಪವನ್ನು ವಿವರಿಸಬಹುದು. ಈ ಐಕ್ಯತೆಗೆ ಕಾರಣವಾಗುವ ಹಲವಾರು ಅಂಶಗಳಲ್ಲಿ ಸಂವಿಧಾನ, ಕಥೆ, ಉದ್ದೇಶ, ಭಾಷೆ, ಅಲಂಕಾರ ವಿರೋಧಾಭಾಸ, ಮಿಥ್, ರೂಪಕ, ಇತ್ಯಾದಿ ಇವುಗಳನ್ನು ಶಿಲ್ಪದ ಲಕ್ಷಣಗಳು ಎಂದು ಗುರುತಿಸಬಹುದು. ಕೃತಿಯ ಐಕ್ಯತೆ ಕಾರಣವಾಗುವ ಶಿಲ್ಪವನ್ನು ಆಂತರಿಕ ಮತ್ತು ಬಾಹ್ಯ ಎಂದು ಗುರುತಿಸಬಹುದು. ಈ ಗುಣಗಳನ್ನು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಗುರುತಿಸಲು ಸಾಧ್ಯ. ನಾಟಕ ಕಾದಂಬರಿ, ಗದ್ಯ ಸಾಹಿತ್ಯ ಈ ಶಿಲ್ಪಬಂಧದಿಂದ ಗುರುತಿಸಲು ಸಾಧ್ಯತೆ ಇದೆ. ಇದರ ನಡುವೆ ಭಾಷೆಗೂ ಮತ್ತು ಸಂಸ್ಕೃತಿಗೂ ಇರುವ ನಿಕಟ ಸಂಬಂಧವನ್ನು ಗುರುತಿಸಲಾಗುತ್ತದೆ.

ಕಾಲದಿಂದ ಕಾಲಕ್ಕೆ ಸಾಹಿತ್ಯವು ಪಶ್ಚಿಮದ ಪ್ರೇರಣೆ ಪ್ರಭಾವಗಳ ಮೂಲಕ ಪಡೆದುಕೊಂಡ ವಿಚಾರಗಳೂ, ರಾಜಕೀಯ, ಸಾಮಾಜಿಕ, ಐತಿಹಾಸಿಕ, ಮಾನಸಿಕ ಶಾಸ್ತ್ರೀಯ ಆಲೋಚನೆಗಳೂ ಇವೆ. ಆಗ ರಚನೆಗೊಂಡ ಕವಿಗಳ ಕಾವ್ಯಕಲ್ಪನೆ ಹಲವು ವಿಶಿಷ್ಟತೆಗಳಿಂದ ನಿರೂಪಿಸಲ್ಪಟ್ಟಿವೆ. ಅದರಲ್ಲಿಯೂ ಮುಖ್ಯವಾಗಿ ಕವಿಯ ಸೃಜನಶೀಲತೆ, ಕಾವ್ಯ ನಿರ್ಮಾಣ ಪೂರ್ವದ ಹಾಗೂ ಕಾವ್ಯ ನಿರ್ಮಿತಿಯ ಸಂದರ್ಭ ಒಂದು ವಿಶೇಷದ ಸಂಗತಿಯಾಗಿದೆ.

ನವೋದಯ ಕಾವ್ಯದ ಲಕ್ಷಣಗಳಾದ ಪ್ರಕೃತಿ, ಪ್ರೇಮ, ಸಾಮಾಜಿಕ ವಿಷಮತೆ, ದೇಶಭಕ್ತಿ ಧರ್ಮ, ವ್ಯಕ್ತಿನಿಷ್ಠತೆ, ವಸ್ತುನಿಷ್ಠತೆ, ಹೊಸಭಾಷೆ, ಲಯ, ಬಂಧ ಹೀಗೆ ಹಲವಾರು ಅವಿಷ್ಕಾರಗಳನ್ನು ಕಾವ್ಯಗಳಲ್ಲಿ ನಿರ್ಮಾಣವಾಗಿರುವುದನ್ನು ಕಾಣಬಹುದು. ಜಿ.ಎಸ್.ಎಸ್. ಸಹ ತಮ್ಮ ಕಾವ್ಯಗಳಲ್ಲಿ ಇವೆಲ್ಲಾ ರಚಿಸಿದ್ದರೂ ಸಹ ಇಂತದ್ದೇ ಕಾಲಘಟ್ಟದಲ್ಲಿ ಕಾವ್ಯರಚಿಸಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ.

ಜಿ.ಎಸ್.ಎಸ್. ಅವರಿಗೆ ತುಂಬಾ ಪ್ರಭಾವ ಬೀರಿದ ಕವಿ ಕುವೆಂಪು. ಇವರ ಪ್ರಭಾವ ಕಾವ್ಯದೂದ್ದಕ್ಕೂ ಕಾಣಬಹುದು. ಒಬ್ಬ ಕವಿ ಇಡೀ ಪರಂಪರೆಯನ್ನು ಗ್ರಹಿಸಿ, ಸ್ವೀಕಾರ ಮಾಡುವಾಗಲೂ ಅವರ ನಿರ್ಧಿಷ್ಟ ಭಾವಗಳಿಗೆ ಒಲಿಯುವ ಆಯ್ಕೆಯ ಸ್ವಾತಂತ್ರವಿರುತ್ತದೆ. ನವೋದಯ ಕವಿಗಳು ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯ ಪರಂಪರೆಗಳೊಂದಿಗೆ ಸಂಪರ್ಕ ಪಡೆಯುವ ಅವಕಾಶವಿತ್ತು. ಕವಿ ಸಾಹಿತ್ಯ ಪರಂಪರೆಯಲ್ಲಿ ತನಗೆ ಇಷ್ಟವಾದ ಮಾದರಿಗಳನ್ನು ಸಾಹಿತ್ಯ ಪರಂಪರೆಯಿಂದ ಹುಡುಕಿ ತೆಗೆಯುತ್ತಾನೆ. ನಂತರ ತನ್ನ ಸ್ವೋಪಜ್ಞತೆಯಿಂದ ಅದನ್ನು ನವನವವಾಗಿ ಸೃಷ್ಟಿಸುತ್ತಾನೆ. ಇದು ಕವಿಗೆ ಮಾತ್ರವಲ್ಲ. ಸಾಹಿತ್ಯಕ್ಕೂ ಸಹ ಅನ್ವಯಿಸುತ್ತದೆ. ಹಳೆಗನ್ನಡದಿಂದ – ನಡುಗನ್ನಡ, ನಂತರ ನಡುಗನ್ನಡದಿಂದ ನವೋದಯ, ದಲಿತ ಬಂಡಾಯ ಸಾಹಿತಿಗಳು ಪ್ರತಿಕ್ರಿಯಿಸಿರುವುದನ್ನು ಕಾಣಬಹುದು. ಜಿ.ಎಸ್.ಎಸ್.ರವರ ಕವಿತೆಯ ರೂಪಾಂತರ ಬದಲಾದ ಸಂದರ್ಭವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ನವೋದಯದ ಕಾವ್ಯದಲ್ಲಿ ಹೊಸ ರೂಪ ಲಯಗಾರಿಕೆ ಮತ್ತು ಬಂಧಗಳು ಆವಿಷ್ಕಾರಗೊಂಡಿದೆ ಎಂಬುದನ್ನು ತೀ.ನಂ.ಶ್ರೀಯವರು ತಮ್ಮ ಸಮಾಲೋಕನದಲ್ಲಿ ಅವಲೋಕನ ಮಾಡಿದ್ದಾರೆ. ಕ.ವೆಂ. ರಾಜಗೋಪಾಲ.

ಅವರ "ನವೋದಯ ಕಾವ್ಯದಲ್ಲಿ ಶಿಲ್ಪ" ಎಂಬ ಲೇಖನದಲ್ಲಿ ಛಂದಸ್ಸನ್ನು ಕೇಂದ್ರವಾಗಿಟ್ಟುಕೊಂಡು ಪ್ರತಿಪಾದಿಸಿದ ಕೆಲವು ಮೌಲಿಕ ಅಂಶಗಳನ್ನು ಗುರ್ತಿಸಿದ್ದಾರೆ. ಆದರೂ ಆಧುನಿಕ ವಿಚಾರಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನವು ಸ್ವಲ್ಪಮಟ್ಟಿಗೆ ಆದರೂ ನಡೆದಿದ್ದರೆ ಛಂದಸ್ಸಿಗೆ ಸಂಬಂಧಪಟ್ಟ ಹಾಗೆ ಅಂತರ್ಗಾಮಿಯಾಗಿ ನಾವು ಸಾಂಪ್ರಾದಾಯಿಕವಾದ ಅಧ್ಯಯನದ ವಿಧಾನವನ್ನೇ ಇಂದಿಗೂ ಬಳಸುತ್ತಿದ್ದರೂ ಪಾಶ್ಚತ್ಯದ ಪ್ರಭಾವಕ್ಕೆ ಒಳಗಾಗಿರುವುದಂತೂ ಸತ್ಯ.

# ಅಧ್ಯಾಯ–4

## ಕುವೆಂಪು ಪರಂಪರೆ ಮತ್ತು ಜಿ.ಎಸ್.ಎಸ್.

"ಹಿಂದಣ ಹೆಜ್ಜೆಯಂ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು" ಎಂಬ ಅಲ್ಲಮಪ್ರಭುವಿನ ನುಡಿಯಂತೆ ಪರಂಪರೆ ಮತ್ತು ಆಧುನಿಕತೆ ಎರಡನ್ನು ಸಮಾನವಾಗಿ ಕಾಣುವ ರಾಷ್ಟ್ರಕವಿ ಜಿ.ಎಸ್.ಎಸ್. ಅವರ ಮೇಲೆ ಪ್ರಭಾವ ಬೀರಿದ ಹಲವಾರು ಕವಿಗಳಲ್ಲಿ ಕುವೆಂಪು ಒಬ್ಬರು. ಕುವೆಂಪು ಪರಂಪರೆಯ ಚಲನಶೀಲ ಪ್ರವರ್ತಕರಾಗಿ, ಜೊತೆಗೆ ಕನ್ನಡ ಸಂಸ್ಕೃತಿಯ ಚಿಂತಕರಾಗಿ ಕಂಡುಬರುತ್ತಾರೆ. 20ನೇ ಶತಮಾನದ ಮೊದಲ ನಾಲ್ಕು ದಶಕಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೂ ಅತ್ಯಂತ ಅನನ್ಯಕಾಲ. ಏಕೆಂದರೆ ಕನ್ನಡ ಸಾಹಿತ್ಯ ಚರಿತ್ರೆಯ ಯಾವ ಸಂದರ್ಬದಲ್ಲೂ ಕೂಡ ಇಷ್ಟೊಂದು ಎತ್ತರದ ಸಾಹಿತಿಗಳು ನಮ್ಮಲ್ಲಿ ಕಂಡಿಲ್ಲ. ಮಾಸ್ತಿ, ಬೇಂದ್ರೆ, ಕಾರಂತ, ಕುವೆಂಪು ಇಂತಹವರಿದ್ದು ಕಾಲವೇ ಸಮೃದ್ಧ ಕಾಲ ಇದನ್ನು ನವೋದಯ ಕಾಲ ಎಂದು ಗುರುತಿಸಲಾಗಿದೆ. ಈ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಮಹತ್ವದ ಸಾಧನೆಯನ್ನು ವಿಸ್ತಾರ ಆಳಗಳಲ್ಲಿ ದೊಡ್ಡ ಕೆಲಸ ಮಾಡಿದ ಸಾಹಿತಿಗಳಲ್ಲಿ ಕುವೆಂಪು ಬಹಳ ಮುಖ್ಯವೆನಿಸಿದ್ದಾರೆ. ಜಿ.ಎಸ್.ಎಸ್.ರವರು ಹೇಳುವಂತೆ ಶಿವರಾಮಕಾರಂತರು ಮತ್ತು ಕುವೆಂಪು ಇಬ್ಬರೂ ನನ್ನ ಸಾಹಿತ್ಯವನ್ನು ರೂಪಿಸಿದ ಶಕ್ತಿಗಳು ಎಂದಿದ್ದಾರೆ. ಶಿವರಾಮಕಾರಂತರ ಬಾಲಪ್ರಪಂಚದ ಮೂಲಕ ವಾಸ್ತವದ ದಟ್ಟ ಅನುಭವಗಳು, ಕುವೆಂಪುರವರ ಕಾವ್ಯದ ಮೂಲಕ ತೆರೆದುಕೊಂಡ ನಿಸರ್ಗಾನುಭೂತಿ, ಅನುಭವಗಳು ಜಿ.ಎಸ್.ಎಸ್.ರವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿವೆ. ಕುವೆಂಪು ಸಹ್ಯಾದ್ರಿಯ ಅರಣ್ಯಪ್ರದೇಶದ ದಟ್ಟವಾದ ಅನುಭವಗಳನ್ನು ತಮ್ಮ ಕವಿತೆಗಳಲ್ಲಿ ಹೇಳುತ್ತಾರೆ. ಕುವೆಂಪು ದುರ್ಗಮ ದಟ್ಟ ಅರಣ್ಯ ಅನುಭವಗಳನ್ನು ಬಳಸಿದಷ್ಟು ಬೇರೆ ಯಾರು ಅಷ್ಟು ಆಳವಾಗಿ ಬಳಸಲು ಸಾಧ್ಯವಾಗಿಲ್ಲ. ಆರಣ್ಯ ಸಂಸ್ಕೃತಿಯಿಂದ ಒಬ್ಬ ವ್ಯಕ್ತಿಗೆ ಬರುವ ಸಂಸ್ಕೃತಿ ದೃಷ್ಟಿಕೋನ ಇವುಗಳನ್ನು ಕಾವ್ಯದಲ್ಲಿ ಕಾಣಬಹುದು. ಕುವೆಂಪುರವರು ಯಾವ ಸಿದ್ದ ಪರಂಪರೆಗೆ ಸೇರದೆ ಸಮಸ್ತ ಅನುಭವಗಳನ್ನು ಅರಣ್ಯದ ಮಡಿಲಲ್ಲಿ ಪಡೆದುಕೊಂಡಿದ್ದು ಬಹಳಮುಖ್ಯ. ಕುವೆಂಪುರವರು ಪ್ರತಿಪಾದಿಸಿದ ನಿಸರ್ಗ "ಪ್ರೀತಿ" – ಬಹುದೊಡ್ಡ ಮೌಲ್ಯವಾಗಿದೆ.

ಜಿ.ಎಸ್.ಎಸ್. ಬರೆಯ ತೊಡಗಿದ ಕಾಲಕ್ಕೆ ಹೊಸ ಚಿಂತನೆಯ ಕಾವ್ಯ ಕನ್ನಡದ ನೆಲದಲ್ಲಿ ಗಟ್ಟಿಯಾಗಿ ಬೇರೂರಿತ್ತು. ಕುವೆಂಪು–ಬೇಂದ್ರೆಯವರ ಛಾಪು ಜನಮಾನಸದ ಮೇಲೆ ದಟ್ಟವಾಗಿ ಮೂಡಿತ್ತು. ತರುಣ ಕವಿಗಳು ಉಳುಮೆಗೆ ಆಗ ಕನ್ನಡದ ನೆಲ ಹಸನಾಗಿ ಇತ್ತಾದರೂ ಬೆಳೆಯಲ್ಲಿ

ಹೊಸತನ ತಮ್ಮತನಗಳನ್ನು ತರುವುದು. ಕುವೆಂಪು-ಬೇಂದ್ರೆಯವರ ಪ್ರಭಾವದಿಂದ ದೂರಬಂದು ಸ್ವೋಪಜ್ಞತೆಯನ್ನು ತೋರುವುದು ಶ್ರಮ ಸಾಧ್ಯವಾಗಿತ್ತು. ಶಿವರುದ್ರಪ್ಪನವರು ಆರಂಭದಲ್ಲಿ 'ಉಡುಗಣವೇಷ್ಠಿತ ಚಂದ್ರಸುಶೋಭಿತ ದಿವ್ಯಾಂಬರಸಂಚಾರಿ' (ಸ,ಕಾ.,ಪು.4)-ಎಂದು ಕುವೆಂಪು ಸಹಜವಾದ ಮಾರ್ಗಾನುಸರಣ ಮಾಡಿದರೂ ಬಹುಬೇಗ ತಮ್ಮದೇ ದಾರಿಯನ್ನು ಕಂಡುಕೊಂಡರು. 'ಹಾರದಿರು, ಹಾರದಿರು ಈಗಲೇ ಹಾರದಿರು ಆನಂತ ವಿಸ್ತಾರದ ನೀಲನಭಕೆ" (ಸ.ಕಾ.ಪು 63) ಎಂದು ಉತ್ಸಾಹದ ಕುದುರೆಗೆ ಸಂಯಮದ ಕಡಿವಾಣವನ್ನು ಹಾಕಿದರು ಅನುಸರಣೆಯಿಂದಲ್ಲ. ಆತ್ಮ ನಿರೀಕ್ಷಣೆಯಿಂದಲೇ ಕವಿಯ ಬೆಳವಣಿಗೆ ಸಾಧ್ಯ ಎಂಬುದನ್ನು ಮನಗಂಡರು. ಕಾವ್ಯ ಪಥದಲ್ಲಿ ಅವರು ನಿಧಾನವಾಗಿ ಎಣಿಸಿ, ಎಣಿಸಿ ಹೆಜ್ಜೆ ಇರಿಸಿದರು. ಅವರ ಹೆಜ್ಜೆ ಗುರುತನ್ನು-ಸಾಮಗಾನದಿಂದ ಹಿಡಿದು ವ್ಯಕ್ತ-ಮಧ್ಯದವರೆಗೂ ದಿಟ್ಟ ಸ್ವತಂತ್ರ ನಿಲುವುಗಳಿಂದ ಅವರೊಬ್ಬ ದಿಟ್ಟ ಕವಿಯೆಂದು ಸಂಮಾನಿತ ಸ್ಥಾನವನ್ನು ಪಡೆದರು.

ಸಹಜ ಪ್ರತಿಭೆಯೊಂದಿಗೆ, ಸ್ವತಂತ್ರ ವಿಚಾರಶಕ್ತಿ, ವಿಶಿಷ್ಟ ನಿರೂಪಣಾ ಕ್ರಮ ಸರಳ ಭಾಷಾಶೈಲಿಗಳನ್ನು ಮೈಗೂಡಿಸಿಕೊಂಡಿರುವ ಜಿ.ಎಸ್.ಎಸ್.ರವರ ಕಾವ್ಯದಲ್ಲಿ ನವೋದಯ ಕಾಲದ ಉದ್ವೇಗ, ಉತ್ಸಾಹ ಕಲ್ಪನಾಲಹರಿಗಳಾಗಲೀ, ನವ್ಯ ಪಂಥದ ವ್ಯಂಗ್ಯ ವಿಡಂಬನೆ ವಸ್ತು ನಿಷ್ಠತೆಗಳಾಗಲೀ ವಿಷಯಾನುಗುಣ ಭಾಷಾಶೈಲಿಯಲ್ಲಿ ಛಂದೋಬಂಧ ಅಥವಾ ಮುಕ್ತಛಂದಸ್ಸುಗಳಲ್ಲಿ ಸಹಜವಾಗಿ, ಸಶಕ್ತವಾಗಿ ವರ್ಣಿತವಾಗುತ್ತದೆ. "ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ" (ಸ.ಕಾ.ಪು 51) "ಎದೆ ತುಂಬಿ ಹಾಡಿದೆನು ಅಂದು ನಾನು" (ಸ.ಕಾ.ಪು 65) "ನೋಡು ಇದೊ ಇಲ್ಲರಳಿ ನಗುತಿದೆ" (ಸ.ಕಾ.ಪು 71) "ಯಾವ ಹಾಡಹಾಡಲಿ" (ಸ.ಕಾ.ಪು 468) -ಇಂತಹ ಅನೇಕ ಕವಿತೆಗಳು ಸಹೃದಯದ ಹೃದಯದಲ್ಲಿ ನೆಲೆನಿಂತಿವೆ. ಕವಿ ಕುವೆಂಪುರವನ್ನು ಕುರಿತು ಮೊದಲಾದ ಕವಿತೆಗಳ ಉಕ್ತಿ ವಿಲಾಸ, ರೂಪಕಸೌಂದರ್ಯ ಆಸಾಮಾನ್ಯವಾದದ್ದು. ಸಮಾಜಜೀವನದ ಸಂಕೀರ್ಣ ಸಮಸ್ಯೆಗಳನ್ನು ಶಿವರುದ್ರಪ್ಪನವರು ಸಮರ್ಥವಾಗಿ ನಿರೂಪಿಸಬಲ್ಲರು. ಮನೋಜ್ಞವಾಗಿ ವಿಶ್ಲೇಷಿಸಬಲ್ಲರು. ಶಿವರುದ್ರಪ್ಪನವರು ಹೇಗೆ ವ್ಯಂಗ್ಯ ವಿಡಂಬನೆಗಳ ಮಚ್ಚಿನಿಂದ-ಕೊಚ್ಚಬಲ್ಲರೋ ಹಾಗೆಯೇ ಪ್ರೀತಿ-ವಿಶ್ವಾಸ ಸತ್ಯ-ಸೌಂದರ್ಯಗಳಿಗೆ ಕರಗಿ ಒಲಿದು ಸುಕುಮಾರ ಶೈಲಿಯನ್ನು ಬರೆಯಬಲ್ಲರು. 'ಅನಾವರಣವಾಯಿತಂತೆ" 'ನಾಯಿಗಳಿವೆ ಎಚ್ಚರಿಕೆ' "ಕನ್ನಡ ಕುಲಭಾಂದವರ ಸ್ವಾಗತಗೀತೆ" 'ಗಾಂಧೀಶತಮಾನೋತ್ಸವ' 'ಜನಗಣ ಮನ ಅದಿನಾಯಕ'- ಇಂತಹ ಕವಿತೆಗಳ ವ್ಯಂಗ್ಯ ವೈವಿಧ್ಯಗಳೂ, 'ಕೈಹಿಡಿದ ಸರಪಳಿಯ ಜಗ್ಗುತಿದೆ' 'ಕರಿನಾಯಿ;' 'ಆರು ಗಂಟೆಯ ಮೊಳಗು' 'ಮೂಡಣದ ಹೆರಿಗೆ ಮನೆಯಲ್ಲಿ ಸಡಗರವೂ ಸಡಗರ' ಇಂತಹ ಕವನ ಪಂಕ್ತಿಯಲ್ಲಿ ವ್ಯಕ್ತವಾಗುವ ಉಲ್ಲಾಸ, ಕುತೂಹಲ, ವಾತ್ಸಲ್ಯ, ವಿಷಾಧ, ಗಂಭೀರ ಭಾವಗಳೂ ಅಷ್ಟೇ ಮನೋಜ್ಞವಾಗಿವೆ.

ಶಿವರುದ್ರಪ್ಪನವರ ಕವನಗಳಲ್ಲಿ ಪದಗುಂಚನ ಸುದೀರ್ಘ ಅಲಂಕಾರಗಳೂ ಬಂದಿವೆ. "ಯಾರು ಕೊಟ್ಟರೋ ಬಾನಿಗೊಂದು ಬಂಗಾರದ ಮೆಡಲು" (ಸ.ಕಾ.ಪು 202) ಸಂಜೆ ಬಾನಿನ ತುಂಬ ಹಗಲ 'ನೆನಪಿನ ಚಿತ್ರ' ಸಂಶಯದ ಕಡಲಲ್ಲಿ ಗೋಪುರದ ದೀಪ;–ಹೀಗೆ ನಿರರ್ಗಳವಾಗಿ, ನಯನ ಮನೋಹರವಾಗಿ ಪ್ರತಿಮೆಗಳನ್ನು ಕಡೆಯಬಲ್ಲದು. Poetry speaks in images – ಎಂಬುದಕ್ಕೆ ಶಿವರುದ್ರಪ್ಪನವರ ಕಾವ್ಯ ಉತ್ತಮ ಉದಾಹರಣೆಯಾಗುತ್ತದೆ. ಯಾವುದೇ ಕವಿ ಅನೇಕ ಚಳುವಳಿಗಳ ಮೂಲಕ ಹಾದು ಬಂದರೂ ಕೂಡ ಆ ಚಳುವಳಿಗಳ ಮೌಲಿಕವಾದ ಅಂಶಗಳ ಬಗ್ಗೆ ಅವನು ಸ್ಪಂದಿಸದೆ ಇರೋದು ಒಳ್ಳೇದಲ್ಲ. ಜಿ.ಎಸ್.ಎಸ್.ರವರು ಯಾವುದೇ ಚಳುವಳಿಗೆ ಬದ್ಧನಾಗದೆ ಇದ್ದು ಒಂದೊಂದು ಚಳುವಳಿಯ ಕೆಲವು ಅಂಶಗಳನ್ನು ತಮ್ಮ ಅಭಿವ್ಯಕ್ತಿಗೆ ಬಳಸಿರುವುದುಂಟು. ಹಾಗೇ ನವ್ಯಕಾವ್ಯದ ಸಂದರ್ಭದಲ್ಲಿ ಕಾಲ ಮತ್ತು ಮನುಷ್ಯ, ಭೂಮಿ ಮತ್ತು ಮನುಷ್ಯ ಈ ಎರಡು ಮುಖ್ಯ ವಿಷಯಗಳನ್ನು ಅಳವಡಿಸಿಕೊಂಡು ಕವಿತೆಗಳನ್ನು ಬರೆದಿದ್ದಾರೆ.

ಹೀಗೆ ನವೋದಯ ಕಾವ್ಯದಿಂದ ಪ್ರಭಾವಿತರಾಗಿ ಬರೆಯತೊಡಗಿದ ಶಿವರುದ್ರಪ್ಪ ನವ್ಯತೆಯ ಹೊಸಗಾಳಿಯನ್ನು ತಮ್ಮ ಎದೆಯಂಗಳಕ್ಕೆ ಬರಮಾಡಿಕೊಂಡರು; ಆದರೆ ನವ್ಯದ ಲಕ್ಷಣಗಳಾದ ಭಾಷಾ ಸಂಕೀರ್ಣತೆ, ಅಷ್ಟಾಗಿ ಇವರ ಕವಿತೆಗಳಲ್ಲಿ ಕಾಣಸಿಗುವುದಿಲ್ಲ. ಶಿವರುದ್ರಪ್ಪನವರ ರಚನೆಗಳನ್ನು ಓದುತ್ತಿದ್ದಂತೆಯೇ "ಅರ್ಥಮುಕ್ತ, ಭಾವದೀಪ್ತ, ಧ್ವನಿಪ್ರಚುರ"ವಾದ ಸುಂದರ ಕಾವ್ಯ ಪ್ರಪಂಚವೊಂದು ಕಣ್ಣಮುಂದೆ ತೆರೆದುಕೊಳ್ಳುತ್ತದೆ. (ಹಾಡೇ ಹಾದಿಯ ತೋರಿತು ಹೆಚ್.ಎಸ್.ಆರ್.)

ಕುವೆಂಪು ಪರಂಪರೆಯ ಒಳ್ಳೆಯದೆಲ್ಲವನ್ನು ಹೀರಿಕೊಂಡು ಪರಿಪುಷ್ಟರಾಗಿದ್ದ ಜಿ.ಎಸ್.ಎಸ್. ಆ ಪರಂಪರೆಯನ್ನು ದಾಟಿ ನಿಂತವರು ಎಂಬುದನ್ನು ಗಮನಿಸಬೇಕಾಗಿದೆ. ಕುವೆಂಪುರವರ ದಿಕ್ಕು ಆಕಾಶವಾದರೆ, ಶಿವರುದ್ರಪ್ಪನವರ ದಿಕ್ಕು ಭೂಮಿ ಇದರಿಂದಾಗಿ ಅವರ ವ್ಯಕ್ತಿತ್ವ ಒಂದು ಅತ್ಯಂತ ಭವ್ಯತೆಯನ್ನು ಪಡೆದುಕೊಂಡಿದೆ. ಕುವೆಂಪುರವರ ಆಪಾರಪ್ರೀತಿ ಎಲ್ಲದರಲ್ಲೂ ದೈವತ್ವವನ್ನು ಕಾಣುವುದರಲ್ಲಿ ಕೊನೆಗೊಂಡರೆ, ಜಿ.ಎಸ್.ಎಸ್.ರವರ ಭೂಮಿ, ಪ್ರೀತಿ ಎಲ್ಲದರಲ್ಲೂ ಮನುಷ್ಯತ್ವವನ್ನು ಕಾಣುವುದರಲ್ಲಿ ಕೊನೆಗೊಳ್ಳುತ್ತದೆ. ಹೀಗಾಗಿ ಜಿ.ಎಸ್.ಎಸ್.ರವರ ಸುತ್ತಲಿನ ಸಾಂಸ್ಕೃತಿಕ ಲೋಕ. ಒಂದು ಸಾಮಾಜಿಕ ಪ್ರಯೋಗ ಲೋಕವು ಹೌದು. ಇಂತಹ ಸಾಂಸ್ಕೃತಿಕ ಲೋಕದ ನಿರ್ಮಾಣಕ್ಕಾಗಿ ಜಿ.ಎಸ್.ಎಸ್. ಮಾಡಿಕೊಂಡ ರಾಜಿಗಳು ಅವರ ಸಾಹಿತ್ಯ ಚಿಂತನೆಯಲ್ಲಿ ಕಾಣಬಹುದು! ಅಲ್ಲದೇ ಅವರೇ ಹೇಳುವ ಹಾಗೆ **'ಪರಂಪರೆಯ ಜೊತೆ ಅನುಸಂದಾನ ಮಾಡಿಕೊಳ್ಳದೆ ಇದ್ದರೆ ಒಬ್ಬ ಲೇಖಕ ಲೇಖಕನಲ್ಲ'**. ಜಿ.ಎಸ್.ಎಸ್ ಒಬ್ಬ ಬರಹಗಾರನಾಗುವುದು ಅಂದರೆ ಪರಂಪರೆಯನ್ನೂ ಪ್ರವೇಶಿಸುವುದು ಅಂತಾನೇ ಅರ್ಥ. ಆ ಪರಂಪರೆ ನಮ್ಮ ದೇಶದ್ದೇ ಆಗಿರಬೇಕಿಲ್ಲ. ಒಂದು

ಪಶ್ಚಿಮದ್ದು – ಪೂರ್ವದ್ದಾಗಿರಬಹುದು. ನಮ್ಮ ಪರಿಸರದ್ದಾಗಿರಬಹುದು. ಹೀಗೆ ಪರಂಪರೆಯೊಂದಿಗೆ ನಿರಂತರವಾದ ಸಂವಾದ ಏರ್ಪಡಿಸಿಕೊಳ್ಳುವುದರಿಂದ ಲೇಖಕ ತಾನು ಹೊಸದಾಗೋದಿಕ್ಕೆ ಸಾಧ್ಯ. ಅನ್ನೋದು ನನ್ನ ತಿಳುವಳಿಕೆ. ಪರಂಪರೆಯೊಂದಿಗೆ ನನಗೆ ತಕರಾರು ಏನೂ ಇಲ್ಲ. ಸಂಪ್ರದಾಯದೊಂದಿಗೆ ತಕರಾರಿದೆ. ಸಂಪ್ರದಾಯ ನಮ್ಮನ್ನೂ ಸ್ಥಗಿತಗೊಳಿಸಿದರೆ, ಪರಂಪರೆ ನಮ್ಮನ್ನು ಚಲನಶೀಲರನ್ನಾಗಿ ಮಾಡುತ್ತದೆ. ಹೀಗೆ ಸಂಪ್ರದಾಯದ ಜಡತೆಯನ್ನು ಪರಂಪರೆಯನ್ನು ಚಲನಶೀಲರನ್ನಾಗಿ ಮಾಡೋ ಕೆಲಸವನ್ನೇ ನಾವು ಮಾಡಬೇಕಾಗುತ್ತದೆ. ಹಾಗೆ ಮಾಡಿದಾಗ ಮಾತ್ರ ನಾವು ಜೀವಂತವಾಗಿ ಉಳಿಯೋದಕ್ಕೆ ಸಾಧ್ಯ ಎಂಬ ಮಾತುಗಳು ಅಕ್ಷರಶಃ ಸತ್ಯ. ಎಂದಿದ್ದಾರೆ.ಜಿ.ಎಸ್.ಎಸ್.

# ಅಧ್ಯಾಯ–5

## ಕಾವ್ಯಶಿಲ್ಪದ ವಿವರಣೆ

ಕಾವ್ಯ ಶಿಲ್ಪದ ವಿವರಣೆಯನ್ನು ಕೂಡುವುದು ಸ್ವಲ್ಪಕಷ್ಟಸಾಧ್ಯ. ಏಕೆಂದರೆ ಪ್ರಾಚೀನ ಅಲಂಕಾರದಲ್ಲಿ ಉಪಮೆ, ರೂಪಕಗಳು ಇದ್ದರೂ, ಸಾಹಿತ್ಯ ಬೆಳೆದಂತೆಲ್ಲಾ ನಮ್ಮ ಕಲ್ಪನೆಗಳು ಬದಲಾವಣೆಯ ರೂಪ ಪಡೆಯಿತು. ಪಾಶ್ಚಾತ್ಯ ಸಾಹಿತ್ಯ ಸಂಪರ್ಕದಿಂದ ಪ್ರತೀಕಗಳು ಪ್ರತಿಮೆಗಳು ನಮ್ಮ ಸಾಹಿತ್ಯದಲ್ಲಿ ಪ್ರವೇಶ ಮಾಡಿದವು. ನಂತರ ಕಾವ್ಯಶಿಲ್ಪದ ಬಗ್ಗೆ ಅನೇಕ ವಿದ್ವಾಂಸರು ಚರ್ಚಿಸಿದರು. ಎಲ್ಲಾ ವಿವರಗಳ ಸಾರವನ್ನು ಇಲ್ಲಿ ಕೊಡುವ ಪ್ರಯತ್ನ ಮಾಡಲಾಗಿದೆ.

ಶಿಲ್ಪ ಬಂಧ, ಫಾರಂ, ಸ್ಟ್ರಚ್ಚರ್, ಟೆಕ್ಸಚರ್, ರೂಪ ಈ ಪದಗಳು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಕೆಲವು ಬಾರಿ ಸಮಾನಾರ್ಥಕಗಳಾಗಿ ಬಳಕೆಯಗುತ್ತಿದ್ದು, ವಿಮರ್ಶಕರು ತಮ್ಮದೇ ಆದ ವಿಶಿಷ್ಟ ಅರ್ಥದಲ್ಲಿ ಬಳಸುತ್ತಿದ್ದು ಕೆಲವೊಮ್ಮೆ ಸಹೃದಯರಿಗೆ ಗೊಂದಲ ಉಂಟಾಗುವುದು ಸಹಜ. ಫಾರಂ ಅಥವಾ ರೂಪ ಶಾಬ್ದಿಕ ರಚನೆಯ ಎಲ್ಲಾ ಅಂಶಗಳನ್ನು ಒಳಗೊಳ್ಳುತ್ತದೆ. ರೂಪದ ಅಂಗಗಳು ಯಾವುವೆಂದರೆ ಒಂದು ತತ್ವ, ಲಯ, ಛಂದಸ್ಸು ಪ್ರಾಸ ಶಿಲ್ಪ, ಭಾಷೆ, ಪ್ರತಿಮೆಗಳು ಎನ್ನಬಹುದು. ರೂಪ ಎಂಬುದು ಒಂದು ತತ್ವಶೈಲಿ ಎಂದಾಯಿತು. ರಸಗಳನ್ನು ವರ್ಣಿಸುವಲ್ಲಿ ಶುದ್ಧಕಥೆಯನ್ನು ಗುರುತಿಸಲು ರೂಪವನ್ನು ಮಾನದಂಡವನ್ನಾಗಿಟ್ಟು ಕೊಳ್ಳುತ್ತಾರೆ. ಆಸ್ಕರ ವೈಲ್ಡ್ ಹೇಳುವಂತೆ "ರೂಪವೇ ಸರ್ವಸ್ವ ಅದೇ ಬದುಕಿನ ರಹಸ್ಯ" ಎಂದಿದ್ದಾರೆ. ಸಾಹಿತ್ಯ ಬೆಳೆದ ಹಾಗೆ ಇದರ ವಿಸ್ತಾರ ಸಂಗೀತ ದೃಶ್ಯ ಕಲೆಗಳವರೆಗೂ ಬೆಳೆಯಿತು. ಅರಿಸ್ಟಾಟಲ್ ಇದನ್ನು ವಸ್ತು ಭಾಷೆ, ಸಂಗೀತ ವಿಧಾನಗಳನ್ನು ಒಳಗೊಳ್ಳುತ್ತದೆ ಎಂದಿದ್ದಾನೆ. ರೂಪ ಎಂಬ ಪದದ ಬಳಕೆ ಪಾಶ್ಚಾತ್ಯರಲ್ಲಿ ನಾನ್ನೂರು ವರ್ಷಗಳಿಂದ ಆಗುತ್ತಿದೆ. ಪುರಾತನ ವಿಮರ್ಶಕರು ಕೃತಿಯ ವಸ್ತುವಿಗೆ ಹೊರತಾಗಿದ್ದು, ವಸ್ತುವಿಗೆ ತೊಡಿಸಿದ ಉಡುಪು ಎಂದು ಭಾವಿಸಿದ್ದರು. ಎಲ್ಲಾ ಸಂಕೀರ್ಣತೆ ಮತ್ತು ಶೈಲೀಕರಣಗಳನ್ನು ರೂಪ ಎಂಬ ಪದ ಸೂಚಿಸುತ್ತದೆ. ಭಾವಗೀತೆಗಳಲ್ಲಿ ವಸ್ತು ಮತ್ತು ರೂಪ ಬೇರ್ಪಡಿಸಲಾಗದಂತಿರುತ್ತದೆ. **"ಕಾವ್ಯ ವಸ್ತುವಿನ ಪರಿಚಯ ನಮಗಾಗುವುದು ಅದಕ್ಕೊಂದು ಸಿದ್ಧರೂಪವಿರುವುದರಿಂದ" (ಹಾಡೇ ಹಾದಿಯ ತೋರಿತು ಹೆಚ್.ಎಸ್.ಆರ್.)** ವೈವಿಧ್ಯ ವಸ್ತುಗಳನ್ನೊಳಗೊಂಡ ಭಾವಗೀತೆಗಳಲ್ಲಿ ರೂಪದ ವಿಭಜನೆ ಅನಿವಾರ್ಯವೆನಿಸುತ್ತದೆ. ಹೀಗಾದಾಗ ರೂಪವು ಕೆಲವೊಮ್ಮೆ ಯಾಂತ್ರಿಕವಾಗಿ ಕೆಲವೊಮ್ಮೆ ಸಹಜವಾಗಿ ಮೂಡಿ ಬರುತ್ತದೆ.

ರೂಪವು ಯಾಂತ್ರಿಕವೇ ಆಗಿರಲಿ ಸಹಜವೇ ಆಗಿರಲಿ ಅದು ಶಿಲ್ಪಾತ್ಮಕ ಅಥವ ವಿನ್ಯಾಸಾತ್ಮಕ, ಸಂರಚನಾತ್ಮಕ (Struchrul) ಆಗಿರಬೇಕು. ಇಲ್ಲಿ ಶಿಲ್ಪ ಅಥವಾ ವಿನ್ಯಾಸ ವಿಶಾಲವಾದ ಶಿಲ್ಪವನ್ನು ಕುರಿತು ಆಲೋಚಿಸುವಾಗ ಕೃತಿಯಲ್ಲಿನ ಸಾಮಾಚಿಕ ಸಂಬಂಧಗಳು ಬಹಳ ಮುಖ್ಯವಾಗುತ್ತವೆ. ಸಾಮಾಜಿಕ ಮೌಲ್ಯಗಳು, ಧೋರಣೆ, ಬದ್ಧತೆಗಳು, ತಂತ್ರ ಶಿಲ್ಪರಚನೆಯು ಭಾಷೆಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಓದುಗ ಕೃತಿಯೊಳಗೆ ಪ್ರವೇಶ ಮಾಡುತ್ತಿದ್ದಂತೆಯೇ ಆಯ್ಕೆಗಳಿಂದ ಹೊಮ್ಮುವ ತರ್ಕವನ್ನು ಗುರುತಿಸುತ್ತಾನೆ. ತರ್ಕ ಕೇವಲ ಟೋನ್, ತಂತ್ರ, ಕಥೆ ಅಥವಾ ರೂಪಕಗಳನ್ನು ಕುರಿತ ತರ್ಕವಲ್ಲ. ಇದು ಸಾಹಿತ್ಯವನ್ನು ಒಳಗೊಳ್ಳುತ್ತದೆ. ಹಾಗಾಗಿ ಸಾಹಿತ್ಯಕ್ಕೆ ವಿಶಿಷ್ಟವಾದ ಶಿಲ್ಪವನ್ನು ಕುರಿತ ಚರ್ಚೆ ಸಾಹಿತ್ಯೇತರ ಶಿಲ್ಪಗಳನ್ನು ಒಳಗೊಳ್ಳುವುದು ಅನಿವಾರ್ಯ. ವಿಶಾಲಾರ್ಥದಲ್ಲಿ ಭಾಷೆಯಶಿಲ್ಪ, ವಿಶಿಷ್ಟ, ಸಮಾಜವೊಂದರ ಪ್ರಜ್ಞೆಯ ಅಥವಾ ಅಭಿವ್ಯಕ್ತರೂಪಗಳ ಶಿಲ್ಪ ಮತ್ತು ಮಾನವ ಮನಸ್ಸಿನ ಶಿಲ್ಪಗಳನ್ನು ಗಮನಿಸಬೇಕಾಗುತ್ತದೆ. ಕಾವ್ಯದಲ್ಲಿ ಶಿಲ್ಪ ಮತ್ತು ಬಂಧ ಎರಡೂ ಇವೆ. ಕವಿತೆ ಮುಂದುವರೆದಂತೆಲ್ಲ ಅದು ವಿಶಿಷ್ಟ ನೆಯ್ಗೆಯ ಮತ್ತು ಪ್ರತ್ಯೇಕತೆಗಳ ಹಾಗೂ ಗಹನ ತೊಡಕುಗಳ ಮೂಲಕ ಹಾಯ್ದು ಹೋಗುವಂತೆ ಮಾಡುತ್ತದೆ.

ಹೀಗೆ ಹೊಸಗನ್ನಡ ಕವಿಗಳು ಪಾಶ್ಚಾತ್ಯ ಛಂದೋಬಂಧಗಳ (ಸಾನೆಟ್, ಓಡ್, ಬ್ಲ್ಯಾಂಕ್‌ವಸ್) ಹೀಗೆ ಬಾಹ್ಯಶರೀರ ಮತ್ತು ಕನ್ನಡ ಛಂದೋಬಂಧಗಳ ಒಳನೆಯ್ಗೆಗಳೆಡರನ್ನು ಏಕತ್ವ ಉಪಯೋಗಿಸಿ ಹೊಸ ನಿರೂಪಣಾ ವಿಧಾನವನ್ನು ಆವಿಷ್ಕರಿಸಿದ್ದು ನವೋದಯ ಕವಿಗಳ ಮಹತ್ವದ ಸಾಧನೆ. ಇದನ್ನು ಇವರ ಕವಿತೆಗಳಲ್ಲಿ ಕಾಣಬಹುದು. ಹೊಸಗನ್ನಡ ಕವಿತೆಗಳಲ್ಲಿ ಶಬ್ದಲಯ, ಮತ್ತು ಅರ್ಥಲಯಗಳೆರಡನ್ನು ಪ್ರಧಾನವಾಗಿಟ್ಟುಕೊಂಡರು. ಸರಳವಾದ ಭಾಷೆಯಲ್ಲಿ ವಿಶೇಷಾರ್ಥವನ್ನು ಹೇಳುವುದು ಸಾರ್ಥಕವಾಯಿತು. ಹಾಗಾಗಿ ಕಾವ್ಯಾಲಂಕಾರ ಬಳಕೆಯಲ್ಲಿ ರೂಪಕಗಳ ಉಪಯೋಗ, ಚಿತ್ರಕವಿತ್ವಗಳನ್ನು ಕೈಬಿಡಲಿಲ್ಲ. ಹಾಗೆ ಪ್ರತಿಮೆಗಳನ್ನು ಪ್ರತೀಕಗಳನ್ನು ಬಳಸಿದರು.

ಪ್ರಸ್ತುತ ಅಧ್ಯಯನವು ಜಿ.ಎಸ್.ಎಸ್.ರವರ ಕಾವ್ಯಶಿಲ್ಪದ ಅನನ್ಯತೆಯನ್ನು ಗ್ರಹಿಸುವುದು ಈ ಗ್ರಹಿಕೆಯ ಮೂಲಕ ಕಾವ್ಯಶಿಲ್ಪ' ವಿಶಿಷ್ಟತೆಯನ್ನು ಕಾಣುವುದು. ಕವಿತೆಯೊಳಗೆ ಮೂಡಿಬರುವ ಆಶಯಗಳ ಅನನ್ಯತೆ ಯಾವುದೇ ಇರಲಿ. ಇತರರ ಬರವಣಿಗೆಗಿಂತ ಭಿನ್ನತೆಯನ್ನು ತೋರಿಸುವುದು. ಹಾಗೆ ಕವಿತೆಯ ವಿಶಿಷ್ಟಾಂಶಗಳನ್ನು ಗುರ್ತಿಸುವುದು. ಸುಮಾರು 40 ದಶಕಗಳಿಂದ ಕಾವ್ಯ ನಿರ್ಮಿತಿಯಲ್ಲಿರುವ ಜಿ.ಎಸ್.ಎಸ್.ನೂರಾರು ಬಿಡಿ ಕವಿತೆಗಳು ವೈವಿಧ್ಯದಿಂದ ಕೂಡಿವೆ. ಇವುಗಳಲ್ಲಿ ಪ್ರಾಚೀನಕಾವ್ಯ ಪರಂಪರೆ, ಅಭಿವ್ಯಕ್ತಿ ವಿಧಾನ, ಅದರ ಬೆಳವಣಿಗೆ ಹಾಗೂ ಬದಲಾವಣೆಯೂ ನಮಗೆ ಮುಖ್ಯವೆನಿಸುತ್ತದೆ. ಕಾವ್ಯಶಿಲ್ಪವನ್ನು ಅಳೆಯುವ ಮೌಲ್ಯಮಾಪನಗಳು ಯಾವುವೆಂದರೆ ,

1. ಕಾವ್ಯರೂಪ
2. ಕಾವ್ಯಶೈಲಿ
3. ಕಾವ್ಯವಸ್ತು
4. ಕಾವ್ಯ ಛಂದಸ್ಸು

ಇವುಗಳ ಮುಖಾಂತರ ಕಾವ್ಯಶಿಲ್ಪವನ್ನು ಅರಿಯುವ ಸಾಧ್ಯತೆಯನ್ನು ನೋಡಬಹುದು.

# ಅಧ್ಯಾಯ–6

## ಜಿ.ಎಸ್.ಎಸ್–ರವರ ಕವನಗಳಲ್ಲಿ ಕಾವ್ಯಶಿಲ್ಪಗಳು

ಶಿವರುದ್ರಪ್ಪನವರು ಸುಮಾರು ಐದು ನೂರಕ್ಕೂ ಹೆಚ್ಚು ಕವಿತೆಗಳನ್ನು ರಚಿಸಿದ್ದಾರೆ. ಅವುಗಳನ್ನು ನನ್ನ ಅಧ್ಯಯನಕ್ಕನುಸಾರವಾಗಿ ಕೆಲವು ಕವಿತೆಗಳನ್ನು ತೆಗೆದುಕೊಂಡಿದ್ದೇನೆ. ಅವುಗಳ ಮುಖೇಣ ರೂಪ, ಶೈಲಿ, ವಸ್ತು, ಛಂದಸ್ಸು ನೋಡುವ ಪ್ರಯತ್ನ ಇದಾಗಿದೆ.

**ಕಾವ್ಯರೂಪ:–** ಕವಿ ತನಗಾದ ಅನುಭವ ಜಗತ್ತನ್ನು ಸೂಕ್ಷ್ಮ ಮನಸ್ಸಿನ ಅವಲೋಕನದಿಂದ ಅನನ್ಯವಾದ ಕವಿತೆಯ ರೂಪದಲ್ಲಿ ಕಟ್ಟಿ ಕೊಡುತ್ತಾನೆ. ಕವಿಯ ಕಲ್ಪನೆಗೆ ಜಗತ್ತಿನ ಯಾವುದೇ ಪರಿಕರ ಕಾವ್ಯ ವಸ್ತು ಆಗಬಹುದು. ಆಗ ಅದಕ್ಕನುಗುಣವಾಗಿ, ಕಥನಕವನ, ನೀಳ್ಗವನ, ಚತುಷ್ಪಾದ, ಅಷ್ಟಷಟ್ಪದಿ ಯಾವ ಕಾವ್ಯ ಶರೀರವನ್ನಾದರೂ ಅದು ಒಳಗೊಳ್ಳಬಹುದು. ಇದು ಕೇವಲ ಬಾಹ್ಯ ಶರೀರ. ಆದರೆ ಆಂತರ್ಯದಲ್ಲಿ ಇದನ್ನು ಮೀರಿದ ಅರ್ಥವು ಒಳಗೊಂಡಿರುವುದು ಸಹೃದಯನ ಇಂದ್ರಿಯ ಜಗತ್ತಿಗೆ ಅರಿವಾಗುತ್ತದೆ.

ಕಾವ್ಯವು ತನ್ನ ಸಮಗ್ರತೆಯಲ್ಲಿಯೇ ಒಂದು ಸಾಹಿತ್ಯ ಪ್ರಕಾರ ಎನಿಸಿದರೂ ಅದರೊಳಗಿರುವ ಹಳೆಯ ಹೊಸ ಛಂದೋ ರೂಪಗಳು ತಮ್ಮದೆ ಆದ ಸಾಧ್ಯತೆಗಳನ್ನು ಹುದುಗಿಸಿಕೊಂಡಿರುತ್ತದೆ. ಪ್ರಾಚೀನವಾದ ಕನ್ನಡ ಕಥನ ಪರಂಪರೆಯ ಒಳಗೆ ಪಾಶ್ಚಾತ್ಯ ಪ್ರಭಾವದಿಂದ ಆಧುನಿಕ ಕಲಿಕೆಗಳು ವಿಶಿಷ್ಟವಾದ ನೆಲೆಗಳನ್ನು ಕಂಡುಕೊಂಡಿವೆ.

ಜಿ.ಎಸ್.ಎಸ್.ರವರು ಕವಿತೆಗಳು, ಚಿಂತನಶೀಲ ಮತ್ತು ಜನಪರ ನಿಲುವು ಎಂದು ಕರೆದರೂ ಅಥವಾ ಕಥನಗೀತೆ, ಭಾವಪರವಶತೆಯ ಗೀತೆಗಳು ಎಂದು ಕರೆದರೂ ಅವುಗಳ ಅಕೃತಿ ಮತ್ತು ಆಶಯಗಳ ನಡುವಿನ ಸಂಬಂಧವನ್ನು ನೋಡುವುದು ಸೂಕ್ತವೆನಿಸುತ್ತದೆ.

ಕವಿತೆಯು ಆಕಾರವನ್ನು ಪಡೆಯುವ ಪ್ರಕ್ರಿಯೆಯಲ್ಲಿ ಅದರ ಆಶಯವೂ ಸಹ ನಿರ್ಮಾಣವಾಗುತ್ತದೆ ಎಂಬ ಸಂಗತಿ ತಿಳಿಯುತ್ತವೆ. ಕವಿತೆಯ ಬಾಹ್ಯಸ್ವರೂಪವೂ ಕವಿ ಏನನ್ನು ಹೇಳುತ್ತಿದ್ದಾನೆ ಎಂಬ ಸೂಚನೆಯ ಮನದಟ್ಟಾಗುತ್ತದೆ.

'ನಾನು ಬರೆಯುತ್ತೇನೆ' ಕವಿತೆಯಲ್ಲಿ

ನಾನು ಬರೆಯುತ್ತೇನೆ
ಕಾಳರಾತ್ರಿಗಳಲ್ಲಿ ಬಂದು ಕದ ತಟ್ಟುವ
ಧ್ವನಿಗಳನ್ನು ಕುರಿತು
..........................................
ನಾನು ಬರೆಯುತ್ತೇನೆ
ಶತಮಾನಗಳ ಕತ್ತಲನ್ನೊಡೆದು
ಮೆತ್ತಗೆ ತಲೆಯೆತ್ತುವ ಮೊಳಕೆಗಳನ್ನು ಕುರಿತು
ನಾನು ..............................
ಕೊನೆಯಿರದ ಬೀದಿಗಳ ಮೇಲೆ
ಕೀರ್ತಿಗೆ ಕಚ್ಚಾಡುವವರನ್ನು ಕುರಿತು
(ಸ.ಕಾ.ಪು.465)

ಕವಿತೆಯ ಭಾಷೆಗೆ ಶರೀರವು, ಕವಿತೆಯ ವಿಚಾರಗಳನ್ನು, ಭಾವನೆಗಳನ್ನು ಹೇಳುವ ಪ್ರಯತ್ನ. ಹೀಗೆ ಕವಿಯು ಲೋಕದ ವಸ್ತುವನ್ನು ಆಧಾರವಾಗಿಟ್ಟುಕೊಂಡು ಭಾಷೆಯ ಜೊತೆಯಲ್ಲಿ ಸಂವಹನ ನಡೆಸುತ್ತಾನೆ. ಕವಿತೆಯ ರಚನಾಕ್ರಮವೇ ವಸ್ತುವಿನ ಬೆಳವಣಿಗೆಯನ್ನು ಕಣ್ಣಿಗೆ ಕಟ್ಟಿದಂತೆ ಇರುತ್ತದೆ. ಉದಾ: ಬೇಂದ್ರೆಯವರ ಸಖೀಗೀತ, ಪುಟ್ಟವಿಧವೆ, ಜಿ.ಎಸ್.ಎಸ್.ರವರ ನನ್ನನಿನ್ನ ನಡುವೆ, ಕುವೆಂಪುರವರ ದೇವರು ರುಜು ಮಾಡಿದನು ಇತ್ಯಾದಿ. ಇಂಥ ಕವಿತೆಗಳು ಕವಿತೆಯ ಚೌಕಟ್ಟಿನಲ್ಲಿ ಅಧ್ಯಯಿಸಲು ಸಾಧ್ಯವಾಗುತ್ತದೆ. ಕಾವ್ಯ ಮೂಲತಃ ಒಂದು ಸಂವಾದ ಮೊದಲು ಜಗತ್ತಿನೊಂದಿಗೆ, ನಂತರ ಸಹೃದಯದೊಂದಿಗೆ ಎನ್ನಬಹುದು.

ಇಲ್ಲಿ ಪ್ರಸ್ತಾಪಿಸಿರುವ ಹಲವು ಸಂಗತಿಗಳೆಂದರೆ ಕವಿತೆ ಎನ್ನುವುದು ಕೆಲವು ವೇಳೆ ಬೇರೆ ಸಾಹಿತ್ಯದ ಪ್ರೇರಣೆಯಿಂದ ಕೆಲವು ವೇಳೆ ಲೋಕಘಟನೆಗಳಿಗೆ ತೋರುವ ಪ್ರತಿಕ್ರಿಯೆಗಳಿಂದ ಆಳವಾದ ಚಿಂತನೆಯಿಂದ ಸಂದರ್ಭಕ್ಕೆ ಅನುಗುಣವಾಗಿ, ನಮ್ಮ ಅನುಭವ ಸಾಮರ್ಥ್ಯ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ಒಂದು ಪರಿ ಎನ್ನಬಹುದು. ಕವಿತೆಯ ರಚನೆಯಲ್ಲಿಯೇ ಕಥನವು ಒಳಗೊಂಡಿರುತ್ತದೆ. 'ಭಗ್ನ ಚೆಲುವೆ' ಕವಿತೆಯ ಸಾಲುಗಳು ಹೀಗಿವೆ.

ಓ ಭಗ್ನ ಚೆಲುವೆ
ನಿನ್ನನ್ನು ಕಂಡು ಮರುಗಿ ನಿಲುವೆ
ಯುಗಯುಗದ ಸಂಸ್ಕೃತಿಯ ನಾಗರೀಕತೆಯ
ಪುನರುಜ್ಜೀವನದ ಕಥೆಯನು ನೆನೆದು
ನಿಡು ಸುಯ್ಯುವೆ. (ಸ.ಕಾ.ಪು.104)

ಮನುಷ್ಯನಿಗೆ ಕಾಲವನ್ನು ಕುರಿತಾದ ಭಯ ಮತ್ತು ವಿಷಾದವನ್ನು – ಈ ಕವಿತೆ ನಿರೂಪಿಸುತ್ತದೆ. ಇಂಥ ಕವಿತೆಗಳಲ್ಲಿ ಸಹೃಯದನಿಗೆ ಲಭ್ಯವಾಗುವುದು ಎಂದರೆ ಪ್ರತಿಮೆಗಳು ಈ ಕವಿತೆಯ ಭಾಷೆಗೆ ಸಂಬಂಧಪಟ್ಟ ನಾದದ, ಪ್ರಾಸದ ಸಹಚರ್ಯದಿಂದ ಒಂದು ಪ್ರತಿಮೆಯಿಂದ ಇನ್ನೊಂದು ಪ್ರತಿಮೆಯನ್ನು ಪ್ರಚೋದಿಸುವ ಕವಿತೆಯಾಗಿರುತ್ತದೆ. 'ಹಣತೆ' 'ದೀಪಾವಳಿ' ಮುಂತಾದ ಕವನಗಳಲ್ಲಿ ಗುರುತಿಸಬಹುದು. ಇವರ 'ಹೊಸಹುಟ್ಟು' ಕವಿತೆಯಲ್ಲಿ ಪುರಾಣದ ಕತೆಯನ್ನು ವಾಸ್ತಾವ ನೆಲೆಗಟ್ಟಿನಲ್ಲಿ ನೋಡುವುದು.

ದಾರಿ ಒಂದೇ; ಇರುವೆಲ್ಲವನ್ನೊ ಕೊಚ್ಚಿ
ಮತ್ತೆ ಕಟ್ಟಬೇಕಾಗಿದೆ ಹೊಸಜಗತ್ತ
ನೀನೋ ಅದಕ್ಕೆ ಬರಿ ನಿಮಿತ್ತ
ಕಟ್ಟು ಹಡಗೊಂದನು, ಶೇಖರಿಸು ಒಂದು ಕಡೆ
ನಾಳೆ ಬಿತ್ತಲು ತಕ್ಕ ಬೀಜಗಳನ್ನು
ನೀನು, ನಿನ್ನ ಪರಿವಾರ, ಮತ್ತು ಒಂದಷ್ಟು
ಉತ್ತಮದ ತಳಿಯನ್ನು
ಬರುತ್ತದೆ ನಾಳೆ ಜಲಪ್ರಳಯ; ಕೊಚ್ಚುತ್ತದೆ
ಇರುವುದೆಲ್ಲವನ್ನೊ ನಿಶ್ಶೇಷವಾಗಿ
ನಾ ಹಿಡಿದು ರಕ್ಷಿಸುತ್ತೇನೆ ನೀ ಕೂತ
ಹಡಗನ್ನುಹೊಸಹುಟ್ಟಿಗಾಗಿ (ಸ.ಕಾ.ಪು.461)

ಇವತ್ತಿನ ಮನು –ಪ್ರಾಚೀನ ಕಾಲದ ಮನು ಅಲ್ಲ. ಬದುಕಿನಲ್ಲಿ ಬದಲಾವಣೆಯಲ್ಲಿ ನಂಬಿಕೆ ಇಟ್ಟಿರುವ ಮನುಷ್ಯ ಈ ಕವಿತೆಗೆ ಬೈಬಲ್ ಕತೆ ಪ್ರೇರಣೆ ನೀಡಿದೆ ಎನ್ನುವುದು ಜಿ.ಎಸ್.ಎಸ್. ಅವರ ಅಭಿಪ್ರಾಯ. ಜಗತ್ತು ಕೆಟ್ಟು ಹೋಗಿದೆ – ಎನ್ನುತ್ತಲೆ ಹೊಸ ಜಗತ್ತನ್ನು ಸೃಷ್ಟಿಸಲು ತಯಾರಾಗಬೇಕು. ದೇವರು ಮನುಷ್ಯನಿಗೆ ಹೇಳುತ್ತಾನೆ. ಜಗತ್ತು ಪ್ರಳಯಕ್ಕೆ ಒಳಗಾಗುತ್ತದೆ. ಜಗತ್ತಿನಲ್ಲಿ ಉತ್ತಮವಾದದ್ದನ್ನು ಸಂಗ್ರಹಿಸಿಕೊಂಡು ಸಿದ್ದನಾಗಿರು ನಾವು ಕೂಡ ಹಡಗನ್ನು ರಕ್ಷಿಸಿಕೊಳ್ಳೋಣ ಎಂದು ಆಶ್ವಾಸನೆ ಕೊಡುತ್ತಾನೆ. ಆದರೆ ಮನು 'ನಾನೊಲ್ಲೆ....ನನಗಿಲ್ಲ ನಾನೊಬ್ಬನೆ ಬದುಕುವ ದಾಹ'

ನಾಳೆ ಬೆಳೆದೀತು ಹೊಸಮಣ್ಣಿನಲ್ಲಿ ಬೇರೂರಿ

ನನ್ನಲ್ಲಿರುವ ಒಳ್ಳಿತೇನಾದರೂ

ಕೊಂಬೆ–ರೆಂಬೆಗೆ ಪುಟಿದು ಹೊಸ ಹೂವು (ಸ.ಕಾ.ಪು.461)

ಜಗತ್ತು ಬದಲಾಗಬೇಕು ಅನ್ನದಾತರು ಮೊದಲು ಅವರು ಬದಲಾಗಬೇಕು ಪುರಾಣವನ್ನು ಒಡೆದು ಕಟ್ಟುವ ರೀತಿ ಬಹಳ ಚೆನ್ನಾಗಿ ಮೂಡಿಬಂದಿದೆ. ಒಂದು ಪದ್ಯ ಸಂವಹನವಾಗುವುದು ಅರ್ಥೈಸಬೇಕಾಗಿರುವ ಅನುಭವದಿಂದ ಎಂದು ಹೇಳಬಹುದು. ಹೀಗೆ ಇನ್ನು ಹಲವಾರು ಕವಿತೆಗಳನ್ನು ಉದಾಹರಿಸಬಹುದು. 'ಗಡಿಯಾರದಡಿಯಲ್ಲಿ ' ಮಬ್ಬಿನಿಂದ ಮಬ್ಬಿಗೆ, 'ಕಾಡಿನ ಕತ್ತಲಲ್ಲಿ' 'ಚರಿತೆಅಂದರೆ' 'ಕಿಷ್ಕಿಂದೆಯ ಕತ್ತಲು' ಇತ್ಯಾದಿ–ಕಾಲದ ಜೊತೆಗೆ ಅನುಸಂಧಾನ ಮಾಡಿಕೊಂಡಿದ್ದಾರೆ. "ಜಿ.ಎಸ್.ಎಸ್.ರವರು ಕಾಲಾನುಸಂಧಾನದ ಕವಿ" ಬದುಕಿನ ರೂಪಕವನ್ನು ಕಟ್ಟು ಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಜಿ.ಎಸ್.ಎಸ್. ಅವರ ಹಲವಾರು ಕವಿತೆಗಳಲ್ಲಿ ಪ್ರಾಸ ಸಂಯೋಜನೆ ಹಾಗೂ ನಾದ ಸಂಯೋಜನೆಗಳು ಅನಿಯತವಾಗಿ ಕವಿತೆಯ ರಚನೆಯನ್ನು ನಿಯಂತ್ರಿಸುವುದನ್ನು ಗಮನಿಸಬಹುದು.

ಮನೆ ನೀನೆ ಮಠನೀನೆ, ಆತ್ಮೀಯ ಬಂಧು ಪರಿವಾರ ನೀನೆ,

ನನ್ನಿಂದು ಮುಂದುಗಳು ನೀನೆ, ಸ್ವರ್ಗಮೋಕ್ಷವು ನೀನೆ,

ವೇದಾದಿಶಾಸ್ತ್ರಗಳು ನೀನೆ ಪರಮ ಗುರುನೀನೆ

ಅನಂತಸುಖದ ನೆಲೆವೀಡು ನೀನೆ (ಸ.ಕಾ.ಪು.659)

ಒಂದೇ ವಸ್ತುವನ್ನಾಧರಿಸಿ ಐದು ಆರು ಕವನಗಳನ್ನು ರಚಿಸಿದ್ದಾರೆ. ಉದಾ:'ಯುಗಾದಿ' ಯನ್ನು ಕುರಿತು ದೀಪಾವಳಿಯನ್ನು ಕುರಿತು, ವೈವಿಧ್ಯತೆಯೊಂದಿಗೆ ಗೀತೆಗಳನ್ನು ರಚಿಸಿದ್ದಾರೆ. ಹೊಸತನ, ಹೊಸ ಆಯಾಮಗಳು, ಉಲ್ಲಾಸ, ಆನಂದ, ಉದ್ವಿಘ್ನತೆಯನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ

ಕಟ್ಟಿಕೊಟ್ಟಿರುವುದು ಇವರ ವಿಶೇಷತೆ ಎನ್ನಬಹುದು. "ಯುಗಾದಿಯಂದು" – ಹೂ ಚಿಗುರಿನ ಹಿಗ್ಗು' – ಕಾಲೊರೆಸುವ ರಗ್ಗೊ' (ಸ.ಕಾವ್ಯ)

ಯುಗಾದಿಯ ಹಾಡು–ಚತುಷ್ಪಾದದಲ್ಲಿ ದ್ವಿತೀಯ ಪಾದದಲ್ಲಿ ಪ್ರಾಸ ಜೋಡಣೆಯಿಂದ ಕಾವ್ಯದ ಸೊಗಸು ಹೆಚ್ಚಿದೆ. 'ಬಣ್ಣ ಬಣ್ಣದ ಮೋಡಿಗೆ ' – ಬೇವು ಬೆಲ್ಲದ ಬೇಡಿಕೆ – 'ಅಂತರಂಗದ ನಂಬಿಕೆ' ಯಾವುದೋ ಆನಂದಕೆ' ಇತ್ಯಾದಿ ಮುಂತಾದವು ಪ್ರಾಸಬದ್ದ ಜೋಡಿಗಳು ಛಂದಸ್ಸಿನ ಯಾಂತ್ರಿಕ ಆವಶ್ಯಕತೆಯನ್ನು ಪೂರೈಸುವುದಕ್ಕಿಂತ ಹೆಚ್ಚಿನ ಕಾವ್ಯಾನಂದವನ್ನು ಪಡೆದಿವೆ. ಹಾಗೂ ಕಾವ್ಯದ ಹಲವು ಲಕ್ಷಣಗಳನ್ನು ಕಾಣಬಹುದು. ಭಾವಗೀತೆಗಳಲ್ಲಿ ಸಾಂಪಾದ್ರಾಯಿಕ ಮತ್ತು ಅಪೂರ್ವವಾದ ನಾಟಕೀಯತೆ ಯನ್ನು ತಂದರು. ಉದಾ: 'ಕೆಲವು ಪ್ರಶ್ನೆಗಳು',ಇತ್ಯಾದಿ. ನವೋದಯ ಕವಿಗಳಷ್ಟು ವ್ಯಾಪಕವಾಗಿ ಅಲ್ಲದಿದ್ದರೂ ಭಾವಗೀತೆಯಲ್ಲಿ ವೈಚಾರಿಕತೆಯನ್ನು ಸರಳವಾಗಿ ನಿರೂಪಿಸಿದವರಲ್ಲಿ ಜಿ.ಎಸ್.ಎಸ್.ಒಬ್ಬರು. ಸಾಮಾನ ದಿಂದ ವೈವಿಧ್ಯಮಯವಾದ ಕವನಗಳನ್ನು ಭಾವನೆಗಳ ಅಭಿವ್ಯಕ್ತಿಗಿಂತ ಅವುಗಳ ವಿಶ್ಲೇಷಣೆಯೇ ಕವಿಗೆ ಮುಖ್ಯವಾಗುತ್ತದೆ. ಕುವೆಂಪು ಅವರ ಗರಡಿಯಲ್ಲಿ ಬೆಳೆದ ಜಿ.ಎಸ್.ಎಸ್. ಅವರ ಕವನಗಳ ಅನುಭವ–ಅನುಭಾವ–ಚಿಂತನೆಗಳನ್ನೂ ಕವಿತೆಗೆ ಬೇಕಾದ ಭಾಷಾ ಶರೀರವನ್ನು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿ ತಮ್ಮ ಕವನದಲ್ಲಿ ಒಳಗೊಳ್ಳುವುದನ್ನು ಕಾಣಬಹುದು. ಹೀಗೆ ರಚಿತವಾದ ಕವನಗಳನ್ನು ಓದುವ ಸಹೃದಯನು ಬಹಳ ಮುಖ್ಯ. ಹೀಗೆ ಸಹೃದಯನೂ ಕವಿತೆಗಳನ್ನು ವಾಕ್ಯಾರ್ಥಕ್ಕಿಂತ – ವ್ಯಂಗ್ಯಾರ್ಥದ ಕಡೆಗೆ ಸಾಗುವುದು ಹಾಗೂ ಕವಿತೆಯ ಆಶಯವನ್ನು ಧ್ವನಿಸುವುದು ಬಹಳ ಮುಖ್ಯ

ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು
ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಆದುವೆ ಬಹುಮಾನ
ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ? (ಸ.ಕಾ.ಪುಟ.65)

ಕವಿತೆಯ ಬಂಧದಿಂದಲೇ ತೀರ್ಮಾನವಾಗುವ ವಿಸ್ತೃತವಾದ ವಿವರಣೆಯನ್ನು ಕಾಣುತ್ತೇವೆ. ಇಲ್ಲಿ ಬರುವ ಹಾಡುಹಕ್ಕಿ(ಕವಿಗೆ) ಸಹಜ ಕ್ರಿಯೆಯನ್ನು ಯಾವ ಬಂಧವೂ ಇಲ್ಲದೇ ನಡೆಯುವಂತಹದ್ದು. ಕವಿಯ ಧ್ವನಿಯು ಛಂದಸ್ಸಿಗೆ ಸರಿಯಾಗಿ ಮಣಿದು "ಬೇಕೆ ಬಿರುದು ಸನ್ಮಾನ'

ಈ ಸಾಲುಗಳು ಅತ್ಯಂತ ಸಮರ್ಪಕವಾಗಿ ಮೂಡಿ ಬಂದಿರುವುದನ್ನು ಕಾಣಬಹುದು.ಕವಿಗೆ ಸ್ಫೂರ್ತಿ ಬಂದಾಗ ಅಮೂರ್ತಭಾವನೆಗಳು ಮೂರ್ತರೂಪದಲ್ಲಿ ಹೊರಹೊಮ್ಮುತ್ತವೆ

ವಿಸ್ತೃತ ರೂಪದ ಬಂಧದ ಮತ್ತೊಂದು ಲಕ್ಷಣ ಒಂದು ಪದ್ಯದಲ್ಲಿ ನಿಲುಗಡೆ ತಲುಪಿದ ಭಾವ ಅಲ್ಲಿಗೆ ನಿಲ್ಲದೆ ಬೇರೆ ಇನ್ನೊಂದು ಪದ್ಯದಲ್ಲಿ ಮುಂದುವರಿದು ಪರಿಪೂರ್ಣತೆಯನ್ನು ಕಂಡುಕೊಳ್ಳುವುದು. ಕಣ್ಣಿಗೆ ಕಾಣುವ ವಸ್ತುವಿಗೂ ಮನಸ್ಸಿಗೂ ಸಂಬಂಧವಿದೆ. ಹೀಗೆ ಕವಿತೆಯಲ್ಲಿ ಓದುಗ ಹಾಗೂ ಕವಿ ಇಬ್ಬರ ದೃಷ್ಟಿಯಿಂದಲೂ ವಿಸ್ತೃತವಾದ ಒಂದು ಬಗೆಯ ರಹಸ್ಯವನ್ನು ಉಳಿಸಿಕೊಳ್ಳುತ್ತದೆ.

ಜಿ.ಎಸ್.ಎಸ್.ರವರ ಕವನಗಳ ಮೂಲದಲ್ಲಿ ರಸಸ್ಥಿತಿಯನ್ನು ರಚಿಸುವ ಸತತ ಪ್ರೇರಣೆಯಿದೆ. ಅನೇಕ ಕವನಗಳು ಮನಸ್ಸನ್ನು ಅಕರ್ಷಿಸುತ್ತವೆ. 'ಮಳೆ', 'ಮನದನ್ನೆ ತಾಯಿ ಮಗುವಿಗೆ'. 'ಕ್ರಾಂತಿಕಾರ', 'ಬಂಡೆ–ಹೂವು' 'ಸಂಕ್ರಾಂತಿ', 'ಜಡೆ', ಇತ್ಯಾದಿ

ಎಲ್ಲವೂ ರಮ್ಯವಲ್ಲ!
ಜಡೆಯಾಚೆ ತಿರುಗಿಸಿದ ತಾಯ ಮುಖಮಾತ್ರ ಇಂದಿಗೂ
ಕಾಣದಲ್ಲ! (ಸ.ಕಾ.ಪುಟ.110)

ಇಂಥ ಸಂಖೇದಾಶ್ಚರ್ಯಭಾವದಲ್ಲಿ ಮುಗಿಯುವ ಭವ್ಯೋಪಮೆ ಪೂರ್ಣವಾದ 'ಜಡೆ' ಕವಿಗೆ ರಸಪದಕ್ಕೇರುವ ಅನೇಕ ಕವಿತೆಗಳಲ್ಲೊಂದು. ಆಧುನಿಕ ಕನ್ನಡ ಕವಿತೆ ಅನೇಕ ಸ್ಥಿತ್ಯಂತರಗಳನ್ನು ಅದಕ್ಕೆ ಕಾರಣವಾದ ಸಮಾಜದ ಚಲನಶೀಲತೆಯನ್ನು ಜಿ.ಎಸ್.ಎಸ್. ರವರ ಕವಿತೆಗಳನ್ನು ಕಾಣಬಹುದು. "ದೀಪದ ಹೆಜ್ಜೆ' ಕವನಸಂಕಲನಗಳು– ಕಾವ್ಯಶಿಲ್ಪದ ದೃಷ್ಟಿಯಿಂದ ಬಹಳ ಮುಖ್ಯ. ಇಲ್ಲಿ ಕವನಗಳು ಬಹಳಷ್ಟು ಬದಲಾವಣೆ ಪಡೆದಿವೆ. ಅಲ್ಲದೇ 'ಚಕ್ರಗತಿ'– ಕವನಸಂಕಲನದಲ್ಲಿ ಬಂದಿರುವ 'ಮುಕ್ತಬಂಧ' ವನ್ನು ಜಿ.ಎಸ್.ಎಸ್.ರವರಿಗೆ ಮೆಚ್ಚುಕೊಳ್ಳುತ್ತಾರೆ. ಚುತುಷ್ಪಾದಗಳಾದರೂ ನಿರಂತರವಾಗಿ ಒಂದು ಚತುಷ್ಪಾದದಿಂದ ಮತ್ತೊಂದಕ್ಕೆ ಮುಂದುವರೆಯುತ್ತದೆ. ನಂತರ ಬಂದ 'ವ್ಯಕ್ತಮಧ್ಯ' – ಕವನ ಸಂಕಲನದಲ್ಲೂ ಸಹ–ಕಾವ್ಯರೂಪದಲ್ಲಿ ಆಗಿರುವ ಬದಲಾವಣೆಗಳನ್ನು ಗುರ್ತಿಸಬಹುದು. ಇದನ್ನು ಟಿ.ವಿ.ವೆಂಕಟಾಚಲಶಾಸ್ತ್ರೀಗಳು ಒಪ್ಪಿಕೊಳ್ಳುತ್ತಾರೆ. ಹೀಗೆ ರೂಪದ ದೃಷ್ಟಿಯಿಂದ 'ಚಕ್ರಗತಿ ಮತ್ತು ವ್ಯಕ್ತಮಧ್ಯ' – ಬಹಳ ಮುಖ್ಯವೆನಿಸುತ್ತವೆ.

**ಕಾವ್ಯಶೈಲಿ:**–ಕಾವ್ಯ ಶೈಲಿ ಎನ್ನುವುದು ಪೌರ್ವಾತ್ಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆಯಲ್ಲಿ ಬೆಳೆದು ಬಂದಿದೆ. ಕವಿ ತನ್ನ ಭೌಗೋಳಿಕ ಸಂದರ್ಭಕ್ಕೆ ಅನುಗುಣವಾಗಿ ಮತ್ತು ತನ್ನ ಪರಂಪರೆಯ ವಿಶಿಷ್ಟ

ಸಂಯೋಜನೆಯಿಂದ ಸೂಕ್ತವಾದ ಕಾವ್ಯ ಶೈಲಿಯನ್ನು ರೂಢಿಸಿಕೊಳ್ಳುತ್ತಾನೆ. ಆಯಾ ಕಾಲಘಟ್ಟಗಳಲ್ಲಿ ಬಳಕೆಯಾಗುತ್ತಿರುವ ಕಾವ್ಯ ಭಾಷೆ ಮತ್ತು ರೂಢಿಸಿಕೊಳ್ಳುವುದು ಕವಿಯ ಭಾಷೆಯಾಗಿರುತ್ತದೆ. ಕಾವ್ಯ ಭಾಷೆಯು ತನ್ನ ಪರಿಸರದ ಆಡು ಮಾತಿಗೆ ಎಷ್ಟು ನಿಕಟಸಂಪರ್ಕ ಉಂಟು ಮಾಡುತ್ತದೆ ಎನ್ನುವುದು ಸಹ ಮುಖ್ಯವಾಗುತ್ತದೆ. ಆಗ ಶೈಲಿಯಲ್ಲಿ ಕಾವ್ಯಾತ್ಮಕವಾದ ಲಯ ವಿಭಿನ್ನ ನೆಲೆಗಳನ್ನು ರೂಪಿಸಿಕೊಳ್ಳುತ್ತದೆ. ಶೈಲಿಯು ಪದ ರಚನೆ, ವಾಕ್ಯರಚನೆ, ಧ್ವನಿ, ಅಲಂಕಾರ, ರಸ, ಆಶಯ ಮುಂತಾದವುಗಳನ್ನು ಒಳಗೊಳ್ಳುತ್ತದೆ. ಜಿ.ಎಸ್.ಎಸ್.ರವರು ಶಿವಮೊಗ್ಗ ಪರಿಸರದಲ್ಲಿ ಹುಟ್ಟಿ ಬೆಳೆದು ನಗರ ಜೀವನದಲ್ಲಿ ವಿದ್ಯಾಭ್ಯಾಸ, ಉದ್ಯೋಗವನ್ನು ಮಾಡುವಲ್ಲಿ ಸುಶಿಕ್ಷಿತ ಮಧ್ಯಮ ವರ್ಗದ ಶಿಷ್ಟಭಾಷೆಯನ್ನು ಅವರ ಕಾವ್ಯ ಸಾಹಿತ್ಯದಲ್ಲಿ ಕಾಣಬಹುದು. ಇದರ ಜೊತೆಗೆ ಅಂದಿನ ಕಾಲದ ನವೋದಯ ಕವಿಗಳ ಪ್ರಭಾವ ಮತ್ತು ಪ್ರೇರಣೆಯನ್ನು ಹಾಗೂ ಚಳುವಳಿಗಳ ಪ್ರೇರಣೆಯನ್ನು ಪಡೆದಿದ್ದಾರೆ ಎನ್ನಬಹುದು. ಹೀಗೆ ನವೋದಯ ಭಾಷೆ, ನವ್ಯಭಾಷೆ, ಬಂಡಾಯ ಹೀಗೆ ಹಲವು ದಾಟಿಯಲ್ಲಿ ಕಾವ್ಯಕ್ಕೆ ತಕ್ಕ ಭಾಷೆಯನ್ನು ಬಳಸಿದ್ದಾರೆ ಎನ್ನಬಹುದು ಕಾವ್ಯದಲ್ಲಿ ವರ್ಣನೆ. ಸಂಭಾಷಣೆ, ನಾಟಕೀಯತೆ, ಚಿಂತನೆ, ಆಶಯ, ಇವುಗಳನ್ನು ಕವಿಯಾದವನು ಕಾವ್ಯದಲ್ಲಿ ನಿರೂಪಿಸುವಾಗ ಅತ್ಯಂತ ಸಮರ್ಥವಾದ ಭಾಷೆಯನ್ನು ಬಳಸುತ್ತಾನೆ. ಆಗ ಕವಿತೆಯಲ್ಲಿ ವೈವಿಧ್ಯ ಉಂಟಾಗಲು ಕಾರಣವಾಗುತ್ತದೆ.

"ಜಗದೊಲವಿನ ನಂಟತನ
ಲಭಿಸಿತು ಅದಕಾಗಿಯೆ ಕಾವ್ಯಕ್ಕೆ ನಮನ (ಸ.ಕಾ.ಪು 113)
ಹರಿದಾರಿ ಹರಿದಾರಿ ಹರಿದಿರುವ ದಾರಿ
ಅಲ್ಲಿಯೂದಾರಿ ಇಲ್ಲಿಯೂದಾರಿ
ಇಲ್ಲಿಯೂನೂರುದಾರಿ (ಸ.ಕಾ.ಪ.155)

ಒಂದು ಪದದಿಂದ ಪ್ರಾರಂಭವಾಗುವ ಪದ್ಯ ಅನೇಕಾರ್ಥಗಳನ್ನು ಬಿಡಿಬಿಡಿಯಾಗಿ ಧ್ವನಿಸುತ್ತದೆ.

ನನಗೆ ಹುಟ್ಟಿದ ಹಬ್ಬ?
ನನಗೆಷ್ಟು ವರುಷ?
"ನಾ ತೊಟ್ಟ ದೇಹಗಳ ಲೆಕ್ಕ
ಇಡುವದಾ ಸೊಕ್ಕ
ಯಮಮೋಡಿ ನಕ್ಕ"

ಆದರೂ ಸುರಿದಿತ್ತು ಹರಕೆಗಳ ವರುಷ: (ಸ.ಕಾ.ಪು 175)

ಹುಟ್ಟಿದ ಹಬ್ಬದ ಚಿಂತನೆಯಲ್ಲಿ ಹಲವಾರು ಅಂಶಗಳನ್ನು ಮೈಗೂಡಿಸಿಕೊಂಡು ಬೆಳೆದ ದೇಹ, ಯಾವುದನ್ನು ಮಿತಿ ಎಂದು ಹೇಳಲಿ ಸಾಧ್ಯವಿಲ್ಲ. ಎಲ್ಲವನ್ನೂ ಮೀರಿದ್ದು ಎಂಬ ಭಾವನೆ ವ್ಯಕ್ತವಾಗುತ್ತದೆ. ಕವಿಯೇ ನಿರೂಪಕನಾಗುವುದು ಮುಖ್ಯ. ಗದ್ಯ ಶೈಲಿಯನ್ನು ಒಳಗೊಂಡಂತಿದೆ.

ಅರುಣ ನಭವನು ಹೊದ್ದು ಬಂದು ನಿಂತಿದೆ ಇದಕೂ
ಭವ್ಯಧನ್ಯ!
ಕೈಯ ಕಿರಣವ ಚಾಚಿ ಕೇಳುತಿದೆ;
ಭವತಿ ಭಿಕ್ಷಾಂದೇಹಿ: (ಸ.ಕಾ.ಪು 202)

ಸಂಸ್ಕೃತ ಭೂಯಿಷ್ಟವಾದ ಶೈಲಿ. ಇಲ್ಲಿ ವ್ಯಾಕ್ಯಾರ್ಥಗಳು ಪದಪುಂಜಗಳು ಪುಂಪಾನುಪುಂಖವಾಗಿ ಬಂದಿವೆ. ಭವ್ಯತೆಯಲ್ಲಿ ಪ್ರಾರಂಭವಾದ ಪದ್ಯ ಸರಳವಾಗಿ ಮುಕ್ತಾಯಗೊಂಡಿದೆ.

ನೋಡು ಇದೊ ಇಲ್ಲರಳಿ ನಗುತಿದೆ
ಏಳುಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರ ಗಿಡದಿಂ
ದೆಂತು ಮೂಡಿದು ಬೆಳ್ಳಗೆ! (ಸ.ಕಾ.ಪು71)

ಪ್ರಾದೇಶಿಕತೆಯ ಸೊಗಡು ಇಲ್ಲಿ ಮೈತುಂಬಿ ನಿಂತಿದೆ ಬೆರಗು ಮುಗ್ಧತೆಯನ್ನು ನೋಡುವ ದೃಷ್ಟಿಕೋನವೊಂದಿದೆ

ಇದ್ದಕ್ಕಿದ್ದಂತೆ ಗಾಲಿಗಳ ಕಳಚಿ ಧಡಾರನೆ ಎಸೆದು
ನೀಲಿಯಲಿ ನಸುನಕ್ಕು ನಿಲ್ಲುವ
ಭಂಗಿಯೇ ಭಂಗಿ.
ಸಂಗದೊಳಗಿದ್ದೂ ಸದಾ ನಿಸ್ಸಂಗಿ
ಯಾವ ಕ್ಷಣವಾದರೂ ಕಟ್ಟಿಕೊಂಡಿದ್ದಲ್ಲಿ
ಬಿಟ್ಟು ನಿಲ್ಲಲು ಸಿದ್ದ
ನೆನಪಾಗುವರು ಕ್ರಿಸ್ತ ಬುದ್ಧ (ಸ.ಕಾ.ಪು 370)

ಸ್ವಗತನುಡಿ ಪ್ರಾದೇಶಿಕ ಭಾಷೆಯಲ್ಲಿಯೇ ಲೌಕಿಕದಿಂದ ಎತ್ತರೆತ್ತರಕೆ ಬೆಳೆದ ಸಮಾಜ ಚಿಂತಕರು ನೆನಪಾಗುವ ಸನ್ನಿವೇಶ ಅಪರೂಪವಾದದ್ದು ಎನ್ನಬಹುದು.

ಒಂದು ಚೂರು ಬಟ್ಟೆಯಿಲ್ಲ ಅವರ ಮೈ ಮೇಲೆ
ಬಾನಿನಂತೆ ಬೆಟ್ಟದಂತೆ, ಹಕ್ಕಿಯಂತೆ ಪ್ರಾಣಿಯಂತೆ
ಲಜ್ಜೆಯರಿಯದಿದ್ದರೂ ಆ ಇಬ್ಬರೇ ಇಬ್ಬರು! (ಸ.ಕಾ.ಪು..566.)

ನಡುಗನ್ನಡ'ನಡ ರೂಪದಲ್ಲಿ ಮೂರು ಮಾತ್ರೆಯ ಗಣ ಹಾಗೂ ಪ್ಲುತ ಸ್ವರವೂ ಜೊತೆಗೆ ಮೌನ ಆವರಿಸಿದೆ. ಪುರಾಣ ಪ್ರಸಂಗಗಳನ್ನು ವಾಸ್ತವ ನೆಲೆಗಟ್ಟಿನಲ್ಲಿ ನೋಡುವುದು.

ಮಟ ಮಟ ಮಧ್ಯಾಹ್ನದುರಿ ಬಿಸಿಲಲ್ಲಿ
ಇಬ್ಬರೇ; ರಾಮ ಮತ್ತು ಲಕ್ಷಣ
ಸುತ್ತ ದಂಡಕಾರಣ್ಯ
ಸೀತಾವಿರಹಶೋಕತಪ್ತಶ್ರೀರಾಮನಿಗೆಬಾಯಾರಿಕೆ
(ಸ.ಕಾ.ಪು.516.)'

ಕಥನ ಕವನವನ್ನು ಹೇಳುವ ರೀತಿ ಪಾದಗಳಲ್ಲಿ ಆಗಿರುವ ಬದಲಾವಣೆ ಹಾಗೂ ಶಿಷ್ಟ ಭಾಷೆಯನ್ನು ಬಳಸಿರುವುದು ಕಾಣುತ್ತೇವೆ.

ಚರಿತ್ರೆ ಅಂದರೆ ನಡೆದುದಷ್ಟೇ ಅಲ್ಲ ನಡೆಯು
ತ್ತಿರುವುದೂ ಕೂಡ ಎಲ್ಲಾ ಪಾಠಗಳಿಗೂ ಮರೆತು
ಮತ್ತೆ ಚಿತ್ತವಿಕಾರ, ಈ ಮಾನವತೆಯ ಹೃದ
ಯದ ಮೇಲೆ ಎಷ್ಟೊಂದು ಗಾಯಗಳ ಗುರುತು!
ಚರಿತ್ರೆ ಅಂದರೆ (ಸ.ಕಾ.ಪು.583.)

"ಚತುಷ್ಪಾದಗಳ ನಡುಗನ್ನಡ ಗದ್ಯ ಶೈಲಿಯನ್ನು ಹೇಳುವ ಪರಿ. ಸ್ವಗತ ಸಂಭಾಷಣೆಯ ದಾಟಿ, ಕವಿಯ ಆಲೋಚನೆಗಳು ಮುಖ್ಯವೆನಿಸಿದೆ.

ಲಕಲಕಿಸುವ ಮೊಮ್ಮಗಳು
ಗರಿಗೆದುರುತ ಕುಣಿವ ನವಿಲು
ಎಲ್ಲಿಂದಲೊ ಇವಳು ಬಂದು
ಮನಮಂದಿಯ ಕೇಂದ್ರಬಿಂದು (ಸ.ಕಾ.ಪು.531.)

ಕವಿಯು ಕೊಡುವ ಪ್ರತಿಮೆಗಳು ಓದುಗನ ಹೃದಯದಲ್ಲಿ ಶಾಶ್ವತವಾಗಿ ನಿಲ್ಲುತ್ತದೆ. ಪಾದಗಳಲ್ಲಿ ಕವಿಯ ಸ್ವಗತ ನುಡಿ ಒಳಪ್ರಾಸಗಳು, ಅರ್ಥವನ್ನು ಹೆಚ್ಚಿಸುವಲ್ಲಿ ಸಾರ್ಥಕವೆನಿಸಿದೆ.

ದಿಗ್ಭ್ರಾಂತನಾದ ದೊರೆಗುವರನಪ್ಪಣೆಗೆ, ಸುತ್ತ
ಹತ್ತೂ ಕಡೆಯ ಕತ್ತಲಲ್ಲಿ ಚಲಿಸಿದವು ದೀಪ
ಹುಡುಕಾಡಿದರೆ ಎಲ್ಲೂ ಇಲ್ಲ, ಅವಳಿಲ್ಲ; ಬದಲು
ಕಂಡಿತ್ತು ಹೊಸ್ತಿಲ ಹೊರಗೆ ಬಲು ಅಪರೂಪ
ವಾದ ಒಂದೇ ಒಂದು ಹೊಳೆಯುವ ಬೂಡ್ಸು, ಆ
ನಾಥವಾಗಿ! (ಸ.ಕಾ.ಪು...)

ಹೀಗೆ ಪಾದದಿಂದ–ಪಾದಕ್ಕೆ–ಕಥನಕವನ ಬೆಳೆಯುವ ರೀತಿ ವೈಚಾರಿಕವಾದರೂ ಲಯಗಾರಿಕೆಯಿಂದ ಕೂಡಿದೆ. ಹೀಗೆ ಚರಿತ್ರೆಯ ಕಥೆಯನ್ನು ಆಡುಮಾತಿನಲ್ಲಿ ಕಟ್ಟಿಕೊಡುವ ಮಾತುಗಳು ಅನೇಕ ಕವಿತೆಗಳಲ್ಲಿ ಕಾಣಬಹುದು. ಮೇಲಿನ ಅನೇಕ ಉದಾಹರಣೆಗಳು ಕವಿತೆಯ ಭಾಷಾ ಶೈಲಿಯನ್ನು ಕುರಿತಿದ್ದೆ ಆಗಿದೆ ವಿನಾಃ ಕವಿತೆಯ ವಸ್ತುವನ್ನು ಅವಲೋಕನ ಮಾಡಿರುವುದಿಲ್ಲ.

ಹೊಸಗನ್ನಡ ಕವಿಗಳು ತಮ್ಮ ಕಾವ್ಯಭಾಷೆಗೆ ನಡುಗನ್ನಡ ಭಾಷೆಯನ್ನು ಸಮಕಾಲೀನವಾದ ಪ್ರಾದೇಶಿಕ, ಪ್ರಭೇದಗಳನ್ನು ಹಾಗೂ ಪ್ರಕಾರಗಳನ್ನು ಉಪಯೋಗಿಸಿಕೊಂಡರು. (ನವ್ಯಕವಿಗಳನ್ನು ಹೊರತುಪಡಿಸಿ) ಅಲ್ಲದೆ ಪಾಶ್ಚಾತ್ಯ ಪ್ರೇರಣೆಯಿಂದಲೂ ಹಲವು ಪ್ರಕಾರಗಳನ್ನು ರೂಪಾಂತರ ಮಾಡಿ ತಮ್ಮ ಕಾವ್ಯಶೈಲಿಯ ಅನನ್ಯತೆಯನ್ನು ರೂಪಿಸಿಕೊಂಡಿರುವುದನ್ನು ಕಾಣುತ್ತೇವೆ. ನವೋದಯ, ನವ್ಯ ಕಾವ್ಯಗಳಲ್ಲಿ ಸಮುದಾಯದ ಪ್ರಾದೇಶಿಕವಾದ, ಆಡುಮಾತಿಗಳಿಗಿಂತ, ವಿಭಿನ್ನವಾದ ಕಾವ್ಯಭಾಷೆಯನ್ನು ಬಳಸಿರುವುದನ್ನು ಕಾಣುತ್ತೇವೆ. ಕವಿಯ ಭಾವನೆಗಳು ಕವನವಾಗುವಲ್ಲಿ ಮಾತ್ರಲಯ, ಅಂಶಲಯ, ಅಕ್ಷರಗಳನ್ನು ಗಮನಿಸಿದೆ. ಮೂರು ನಾಲ್ಕು ಐದು, ಆರು ಮೂರು+5, 4+2 2+4, 2+5, 3+3, 5+2 ಅನೇಕಾನೇಕ ವೈವಿಧ್ಯದೊಂದಿಗೆ ಅವರ ಕಾವ್ಯವನ್ನು ನೋಡುವುದು ಸಾಧ್ಯ ಲಯಗಾರಿಕೆಯಿಂದ ಹಿಗ್ಗಿಸುವುದು ಮತ್ತು ಕುಗ್ಗಿಸುವುದು ಸಾಧ್ಯವಾಗಿವೆ ಎನ್ನಬಹುದು. ಒಂದು ಸಂಗತಿ ಪದ್ಯ.ಉದಾ.

ಮಟ ಮಟ ಮಧ್ಯಾಹ್ನದುರಿ ಬಿಸಿಲಲ್ಲಿ 2/5/2/5
ಇಬ್ಬರೇ; ರಾಮ ಮತ್ತು ಲಕ್ಷಣ 5/3/3/4

ಸುತ್ತ ದಂಡಕಾರಣ್ಯ 3/3/5

ಸೀತಾವಿರಹ ಶೋಕತಪ್ತ ಶ್ರೀರಾಮನಿಗೆ 4/3/3/3/2/5

ಬಾಯಾರಿಕೆ 6 (ಸ.ಕಾ.ಪು.516)

ಒಟ್ಟಿನಲ್ಲಿ ಜಿ.ಎಸ್.ಎಸ್. ಕವಿತೆಗಳಲ್ಲಿ ಬಹುಮುಖವಾದ ಶೈಲಿಯನ್ನು ಕಾಣಬಹುದು. ವರ್ಣನೆಗಳಲ್ಲಿ ಸಂಭಾಷಣೆಯಲ್ಲಿ ಆಲೋಚನೆಯಲ್ಲಿ ನಿರೂಪಣೆಯಲ್ಲಿ ಸಹೃದಯ ಹೃದಯಕ್ಕೆ ವೇದ್ಯವಾಗುವ ಹಾಗೇ ಅವರ ಶೈಲಿಯಲ್ಲಿಯೂ ಅನನ್ಯತೆಯಿದೆ. ಯಾವ ಕಾವ್ಯದಲ್ಲಿ ಶಬ್ದಗಳ ವಿಜೃಂಭಣೆ ಎಲ್ಲಿಯೂ ಇಲ್ಲ. ಸರಳವಾದ ಕನ್ನಡದಲ್ಲಿ ನೆಲದ ಬದುಕನ್ನು ಮಾನವೀಯತೆಯನ್ನು, ವಾಸ್ತಾವಾಂಶಗಳನ್ನು ಕಾವ್ಯದಲ್ಲಿಯೂ ಕಾಣಬಹುದು. ಪುರಾಣ, ಚರಿತ್ರೆ, ಇತಿಹಾಸ, ಯಾವುದೇ ಇರಲಿ ಇವತ್ತಿನ ಸ್ಥಿತಿಯನ್ನು ಚೆನ್ನಾಗಿ ಗ್ರಹಿಸುವ ಮತ್ತು ಅದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಅಂಶವನ್ನು ಕಾಣಬಹುದು.

ಜಿ.ಎಸ್.ಎಸ್. ರವರ ಸಮಗ್ರ ಕಾವ್ಯ–ಇಷ್ಟು ಯಶಸ್ವಿಯಾಗಲು ಮತ್ತು ಮರುಮುದ್ರಣವಾಗಲು ಸರಳವಾದ ನಿರೂಪಣೆ ಮತ್ತು ಸಾಮಾಜಿಕ ಬದಲಾವಣೆ ಸಂದರ್ಭ, ಯಾವುದಕ್ಕೂ ಕಟ್ಟುಬೀಳದ ಅವರ ವ್ಯಕ್ತಿತ್ವ ಎನ್ನಬಹುದು. ಕಾವ್ಯ ಶೈಲಿಯಲ್ಲಿ ಸಾಮಗಾನದಿಂದ ಚಕ್ರಗತಿಯವರೆಗೆ ಹಲವು ರೀತಿಯಲ್ಲಿ ಕಾವ್ಯ ರಚಿಸಿದ್ದರೂ ವ್ಯಕ್ತಮಧ್ಯ ಚಕ್ರಗತಿಯಲ್ಲಿ ನಾದವಿನ್ಯಾಸಗಳನ್ನು ವ್ಯಾಪಕವಾಗಿ ಬಳಸಿರುವುದನ್ನು ಕಾಣಬಹುದು. ಇದಕ್ಕೆ ಹಿನ್ನೆಲೆಯಾಗಿ ಪರಂಪರೆಯಿಂದ ಬಂದ ಸಾಂಗತ್ಯ, ಸೀಸಪದ್ಯ ಷಟ್ಪದಿ ಮುಂತಾದವು ತಳಹದಿಯ ಮೇಲೆ ಕಾವ್ಯ ರಚಿತಗೊಂಡಿವೆ. ಸುಮಾರು 650 ಕವಿತೆಗಳಲ್ಲಿ ಪ್ರತಿಯೊಂದು ಕವನಕ್ಕೂ ಅದರದ್ದೆ ಆದ ಬಂಧ, ಲಯ, ಪ್ರಾಸಗಳು ಮೂಡಿದೆ ಎನ್ನಬಹುದು. ಇದಕ್ಕೆ ಉದಾಹರಣೆಯಾಗಿ 'ಸರಸ್ವತಿ' ಕನಸಿನಿಂದ ಕನಸಿಗೆ' ಇದು ಲೋಕವಂತೆ' 'ದಾರಿ' 'ಸಂಜೆದಾರಿ' 'ಕೆಲವುಪ್ರಶ್ನೆಗಳು' ಚರಿತ್ರೆ ಅಂದರೆ, 'ತೃಪ್ತಿ', 'ಸಿಂಡರಲಾ', 'ಮುಖಾಮುಖಿ ಅವಲೋಕನ' ಮುಂತಾದ ಕವಿತೆಗಳಲ್ಲಿ **ವೈವಿಧ್ಯತೆಯನ್ನು** ಕಾಣಬಹುದು.

ಇದನ್ನು ಗಮನಿಸುತ್ತಾ ಹೋದಂತೆ ಕುವೆಂಪುರವರ ದಟ್ಟವಾದ ಪ್ರಭಾವ ಆಗಿದೆ ಎನ್ನುವುದಕ್ಕೆ 'ಉದಯರಾಗ' ಸಾಕ್ಷಿಯಾಗಿ 'ಸಾಮಾಗಾನ'ದ ಮೂಡುವನದೋ ಈ ಹೊಸವರುಷದ ರವಿ – (ಸ.ಕಾ.ಪು.9) ಮುಂತಾದವುಗಳನ್ನು ಉದಾಹರಿಸಬಹುದು. ಭಾಷೆ ಮತ್ತು ಆಕೃತಿಗಳಲ್ಲಿ ಅವರನ್ನೆ ಅನುಸರಿಸುತ್ತಿದ್ದರು. ನಂತರ 'ಸ್ವಪ್ರಜ್ಞೆಯನ್ನು ಕಂಡುಕೊಂಡ ಕವಿ ನವ್ಯ ಕಾವ್ಯದ ಭಾಷೆಯನ್ನು ತಮ್ಮದಾಗಿಸಿಕೊಂಡರು. ಭಾಷೆಯ ಬದಲಾದ ಸಂದರ್ಭ, ವಿಮರ್ಶೆಯ ಎಚ್ಚರ, ಆರಾಧನೆ, ವಿಷಾದ, ಇವುಗಳನ್ನು 'ಕಾಡಿನ ಕತ್ತಲೆಯಲ್ಲಿ' 'ಚಕ್ರಗತಿ' ಮುಂತಾದ ಕವನಗಳಲ್ಲಿ ಕಾಣಬಹುದು.

ಜಿ.ಎಸ್.ಎಸ್.ರವರು 'ಚಕ್ರಗತಿ', 'ವ್ಯಕ್ತಮಧ್ಯ', 'ಅಗ್ನಿಪರ್ವ'– ಈ ಕವನ ಸಂಕಲನಗಳಲ್ಲಿ ರಚಿಸಿರುವ ಚತುಷ್ಪದಿ ಕವಿತೆಗಳಲ್ಲಿ ಒಂದು ಚೌಕಟ್ಟನ್ನು ದಾಟಿಸಿ ಪದ್ಯದಿಂದ ಪದ್ಯಕ್ಕೆ ಮುಂದುವರೆಯುವ ಪ್ರಯತ್ನ. ಈ ತಂತ್ರವನ್ನು "ಮುಕ್ತಬಂಧ'–ಎಂದು ಕರೆಯುತ್ತಾರೆ.(Enjambement to stride over –ದಾಟುವಿಕೆ) ಇಂತಹ ಕವನಗಳನ್ನು ಓದುವಾಗ 'ಸಿಂಡರಲಾ; ಚರಿತ್ರೆ ಅಂದರೆ' ಓದುಗನಿಗೆ ಎಷ್ಟು ಪರಿಣಾಮ ಉಂಟು ಮಾಡುತ್ತದೆ ಎನ್ನುವುದೂ ಕೂಡ ಮುಖ್ಯವಾಗುತ್ತದೆ. ಕಾವ್ಯಶೈಲಿಯ ಮತ್ತೊಂದು ವಿಶಿಷ್ಟವೆಂದರೆ ಅಲಂಕಾರಗಳನ್ನು ಕಾವ್ಯದಲ್ಲಿ ಸಮರ್ಥವಾಗಿ ಬಳಸುವುದು 'ಪೂರ್ಣಾನದಿಯ ಮೊಸಳೆ'

ನೋಡುತ್ತೇನೆ; ಇಡೀ ನದಿ ಭಾರೀ ಮೊಸಳೆ–
ಯೊಂದರ ನಾಲಗೆಯಂತೆ ನಿಡಿದಾಗಿ ಚಾಚಿ
ಕೊಂಡಿದೆ, ಮೇಲೆ ತೆರೆದಾಕಾಶ, ಕೆಳಗೆ
ಹಾಸಿದಭೂಮಿ, ನಿಜವಾಗಿಯೂ ನಾವೆಲ್ಲಾ
ಮೊಸಳೆಯೊಂದರೆ ಬಾಯೊಳಗೆ ಇದ್ದೇವೆ.
ಎಂದಿನಿಂದಲೋ ಎನೋ ನಮಗೆ ಬಿಡುಗಡೆಯಿಲ್ಲ (ಸ.ಕಾ.ಪು.563)

ಶ್ಲೇಷಾಲಂಕಾರ ಬೇರೆ ಬೇರೆ ಅರ್ಥವನ್ನು ಕೊಡುವ, ಎರಡು ಪದಗಳನ್ನು ಸೇರಿಸಿ ಒಂದು ಅರ್ಥವನ್ನು ಕೊಡುವ ಪದ ವಿಶೇಷತೆಯನ್ನು ಹೊಂದಿರುತ್ತದೆ. ಕವನದ ಪದಗಳು ನಾನಾರ್ಥಗಳೊಂದಿಗೆ ಅನೇಕಾರ್ಥಗಳ ಅನಾವರಣವಾಗುತ್ತದೆ. ಪದಗಳು, ಪದಗುಚ್ಛಗಳು ಇವುಗಳಲ್ಲಿ ಶ್ಲೇಷೆಯ ಜೊತೆ ಧ್ವನಿಯನ್ನು ಗುರ್ತಿಸಬಹುದು. ಕಿಷ್ಕಿಂದೆಯ ಕತ್ತಲು' 'ಚರಿತ್ರೆಯ ಕಾಲಜ್ಞಾನ' 'ಅವಸ್ಥೆ' – ಹೂವುನಕ್ಷತ್ರ' ವ್ಯಕ್ತ–ಮಧ್ಯ' 'ಮನೆಕಟ್ಟುವ ಮಂದಿ'–ಚರಂಡಿಗಳು ಮತ್ತು ನಾಯಿಗಳು' 'ಬೆಂಗಾಡಿ ಗುಲಾಮರು' – ಹೀಗೆ ನೂರಾರು ಕವಿತೆಗಳನ್ನು ಉದಾಹರಿಸಬಹುದು. ಇದರ ರಚನೆಯನ್ನು ಗಮನಿಸಿದಾಗ ಕವನಗಳಲ್ಲಿ ಎಷ್ಟು ಪದಗಳ ಅವಶ್ಯಕತೆ ಇದೆಯೋ ಅಷ್ಟನ್ನು ಸಂದರ್ಭಕ್ಕನುಗುಣವಾಗಿ ಬಳಸಬಹುದು. ಇದನ್ನು ವಾಕ್ಯದ ಮೇಲು ರಚನೆ ಉಳಿಸಿಕೊಂಡು 'ತಳ ರಚನೆಗೂ ಪದಗಳ ವಿನ್ಯಾಸದೊಂದಿಗೆ ಅಲಂಕಾರಗಳನ್ನು ಬಳಸುವುದು ಮುಖ್ಯವೆನಿಸಿದೆ. ಇದರಲ್ಲಿ ಹೇಳಬೇಕಾದ ಅಂಶಗಳನ್ನು ಯಾವ ತರ್ಕ, ಕ್ಲಿಷ್ಟತೆ ಇಲ್ಲದೆ ಸರಳವಾಗಿ ಹೇಳಿಕೊಂಡು ಹೋಗುವ ಕ್ರಮ ತೊಡಕು ಎನಿಸುವುದಿಲ್ಲ.

ಜಿ.ಎಸ್.ಎಸ್. 'ದೀಪದ ಹೆಜ್ಜೆ' –ನಂತರ ಬದಲಾದ ಸಂದರ್ಭವನ್ನು ಕಾಣಬಹುದು. 'ನೆರಳಿಲ್ಲದ ದಾರಿ, 'ಅರೆಮುಗಿದ ಕವನ'', 'ಪ್ರಶ್ನೆ' 'ಉತ್ತರ', 'ಔತಣ', 'ಜಡಿಮಳೆಯ ಇರುಳಿನಲ್ಲಿ', 'ನಿರ್ಧಾರ', 'ಬಿಡುಗಡೆಯ ನೆನಪು', ಇಲ್ಲಿ ಕವಿ ನಿರೂಪಕನಾಗಿ, ತಾನು ಸಕ್ರಿಯ ಪಾತ್ರದಾರಿಯಾಗಿ ಕವಿ ಮನುಷ್ಯ ಜಗತ್ತಿಗೆ ಹತ್ತಿರನಾಗುತ್ತಾನೆ. ಕವಿ ಬದುಕಿಗೆ ನೇರವಾಗಿ ಮುಖಾಮುಖಿಯಾಗುವ ಜೀವಂತ ಪ್ರಕ್ರಿಯೆಯಲ್ಲಿ ತೊಡಗುತ್ತಾನೆ. ನಮ್ಮ ಸಮಕಾಲೀನ ಸಮಾಜದಲ್ಲಿ ಕವಿದಿದ್ದ ನಿರಾಶೆಯ ಒಂದು ಚಿತ್ರವನ್ನೇ 'ಗೋಡೆ' – 'ನನ್ನ ನಿನ್ನ ನಡುವೆ', 'ಬೆಳಗಾಗದಿರಲಿ', 'ಸೋಲಿನ ಹಾಡು', 'ಒಡೆದ ಕನ್ನಡಿ', 'ವಿಫಲ' – ಮನುಷ್ಯ ಸಂಬಂಧಗಳನ್ನು ಒಡೆಯುವ ಚಿತ್ರ ಬರುತ್ತದೆ.

ಕಾವ್ಯಶೈಲಿ ಎನ್ನುವುದು ಕವಿಯ ಆಶಯ, ಉದ್ದೇಶ ಮತ್ತು ಸ್ವೋಪ'ಜ್ಞತೆಯಿಂದ ಕೂಡಿರುತ್ತದೆ. ಪ್ರತಿಯೊಬ್ಬ ಶ್ರೇಷ್ಠ ಕವಿಗೂ ತನ್ನದೇ ಆದ ಶೈಲಿ ಇರುತ್ತದೆ. ಆಕೃತಿಗಳು ಅಂದರೆ ಅದರ ಭಾಷಾ ಶರೀರವನ್ನು ಅವಲಂಬಿಸಿರುತ್ತದೆ. ಕಾವ್ಯಶೈಲಿ ಕಾವ್ಯಶಿಲ್ಪದ ಮೇಲೆ ಒಂದು ವಿಶಿಷ್ಟವಾದ ಪ್ರಭಾವವನ್ನು ಬೀರುತ್ತದೆ.

**ಕಾವ್ಯ ವಸ್ತು** : ಕವಿತೆಯ ರಚನೆಗೆ ವಸ್ತುವನ್ನು ತನ್ನ ಅನುಭವ ಜಗತ್ತಿನಿಂದ ಹೆಕ್ಕಿ ತೆಗೆಯುತ್ತಾನೆ. ನಂತರ ತನ್ನ ಸೂಕ್ಷ್ಮ ಮನಸ್ಸಿನಲ್ಲಿ ಅವಲೋಕಿಸಿ ಅನನ್ಯವಾದ ಕವಿತೆಯನ್ನು ಸೃಷ್ಟಿಸುತ್ತಾನೆ. ಭಾವಗೀತೆಯ ಪ್ರಕಾರಗಳಾದ ಕಥನಕವನ, ಸಾನೆಟ್, ಇನ್ನು ಮುಂತಾದವುಗಳಲ್ಲಿ ತಾನು ರೂಪಿಸುವ ಆಕಾರವು ತನ್ನನ್ನು ಮೀರಿ ನಿಲ್ಲುವುದೆಂಬ ಸತ್ಯವನ್ನು ಮನಗಂಡಿರುತ್ತಾನೆ ನವೋದಯ, ನವ್ಯ, ದಲಿತ ಬಂಡಾಯ ಎಲ್ಲಾ ಮಾರ್ಗಗಳಲ್ಲಿ ಸಹ ಕವಿಯ ಮನೋಧರ್ಮಕ್ಕೆ ಅನುಗುಣವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು.

1. ಕವಿತೆ ತನ್ನ ವ್ಯಕ್ತಿತ್ವದ ಅತ್ಯಂತ ತೀವ್ರವಾದ ಅಭಿವ್ಯಕ್ತಿ.
2. ಕವನ ರಚನೆಯ ಭಾವನೆಗಳ ನಡುವೆ ಕವಿತೆಗೂ ತನಗೂ ಇರುವ ಅಂತರ.

ಕವಿತೆಯ ಆಕಾರವೇ ಸಹೃದಯನ ಪ್ರತಿ ಸ್ಪಂದನಗಳನ್ನು ರೂಪಿಸುವಂತೆ ಮಾಡುತ್ತವೆ. ಉಪಮೆ, ರೂಪಕಗಳಿಂದ ಹಿಡಿದು ಕಾವ್ಯ ಪ್ರತಿಮೆ, ಪ್ರತೀಕಗಳಂಥ ಪರಿಕರಗಳೊಂದಿಗೆ, ಕವಿಯ ಮನೋಲೋಕದಿಂದ ಬಿಡುಗಡೆಗೊಳಿಸಿ ಅದಕ್ಕೆ ಸ್ವತಂತ್ರ ಅಸ್ತಿತ್ವ ಪಡೆಯುವಂತೆ ಮಾಡುತ್ತದೆ. ಅಂದರೆ ಇವೆಲ್ಲವೂ ಕವಿ ಮನಸ್ಸಿನ ಸುಪ್ತಚಿತ್ತದಲ್ಲಿ ನಡೆಯುತ್ತವೆ. ತನ್ನ ಮನಸ್ಸಿನ ಆಳದಿಂದ, ನೆನಪುಗಳ ಸಂಯೋಜನೆಯಿಂದ ಸುಧೀರ್ಘವಾದ ಪ್ರತಿಮೆಗಳನ್ನು ಕಟ್ಟುತ್ತಾನೆ. ಅದು ಪುರಾಣ, ಇತಿಹಾಸ ಐತಿಹ್ಯ, ವಾಸ್ತವ ಯಾವುದಾದರೂ ಆಗಬಹುದು.

ಕವಿತೆಯು ಎರಡು ರೀತಿಯಲ್ಲಿ ರಚಿತವಾಗುತ್ತದೆ.

1. ಪ್ರತಿಮೆಗಳನ್ನು ಬಿಗಿಹಿಡಿದು ಅದರ ಅವಯವಗಳನ್ನು ತಾನು ಧ್ವನಿಸುತ್ತಿರುವ ಸತ್ಯಕ್ಕೆ ಸಂವಾದಿಯಾಗುವುದು.

ಮಡಿಲಲಿದೆ ಉಡಿಯುಕ್ಕಿ ತೌರೂರಿನಕ್ಕರೆಯ
ಮಂಗಲಾಶೀರ್ವಾದ ರೂಪದಲ್ಲಿ;
ಪತಿಯಿಹರುಪಕ್ಕದಲ್ಲಿ ಬಂಧುಬಳಗವನುಳಿದು
ನಡೆದಿರುವೆ ನಾನವರ ಹಾದಿಯಲ್ಲಿ (ಸ.ಕಾ.ಪು....)

2. ಕವಿತೆಯು ಹಲವು ಪ್ರತಿಮೆಗಳಿಂದ ಕೂಡಿರುತ್ತದೆ. ಇದರಲ್ಲಿರುವ ಪ್ರತಿಯೊಂದು ಪ್ರತಿಮೆಯೂ ಸ್ವಯಂದ್ವೀಪಕವಾಗಿರುವಂತೆಯೇ ಇತರೆ ಪ್ರತಿಮೆಗಳನ್ನು ಬೆಳಗಿಸುತ್ತದೆ. ಈ ಪರಸ್ಪರ ಬೆಳಗಿಸುವ ಪ್ರತಿಮೆಗಳಿಂದ ಕವಿಯ ಅಸ್ತಿತ್ವವನ್ನು ನಿರ್ಧರಿಸುತ್ತದೆ. ಅರ್ಥ ಸಂಬಂದಿತ ಇರಬಹುದು; ಕನಸುಗಳ ಸಂಕೇತವಿರಬಹುದು, ಹಲವು ಬಣ್ಣ, ಆಕಾರ, ಗಾಜಿನ ಚೂರುಗಳು, ನಾವು ಊಹಿಸಲಾರದ, ನಿಯಂತ್ರಿಸಲಾರದ ಚಲುವಾದ ಆಕಾರವನ್ನು ಪಡೆಯುವಂತೆ ಆಗುತ್ತದೆ. ಇದು ಹೇಗೆ ಬಂತು? ಎಂಬುದಕ್ಕೆ ಉತ್ತರ ಸಿಗದು ಆ ಕ್ಷಣದಲ್ಲಿ ನಡೆದ ಸತ್ಯ. ಆರ್ಥಪ್ರಧಾನ ಧ್ವನಿಪ್ರಧಾನವುಳ್ಳ ಕವಿತೆಗಳು ಕ್ಷಣದಲ್ಲಿ ಹೊರಹೊಮ್ಮತ್ತವೆ, ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಪ್ರತಿಮೆಗಳಲ್ಲಿ ವೈಚಾರಿಕತೆಯೂ ಸಹ ಕಂಡು ಬರುತ್ತದೆ.

3. ಸೀರೆ ಉಟ್ಟು, ಬಳೆತೊಟ್ಟು, ಕಾಲಿಗೆ

ಗೆಜ್ಜೆ ಕಟ್ಟಿದ್ಯಾಕೆ ಒಬ್ಬ
ಇನ್ನೊಬ್ಬ ಕಾವಿಉಟ್ಟು ಮೂಲೆಗೆ ಕೂತಿದ್ದಾನೆ
ದನದ ಕೊಟ್ಟಿಗೆಯಲ್ಲಿ ಒಬ್ಬ ಕುದುರೆ ಲಾಯದಲ್ಲಿ
ಮತ್ತೊಬ್ಬ (ಸ.ಕಾ.ಪು....)

ಹೀಗೆ ವಿಚಾರಗಳ ಮೂಲಕ ಚಿಂತಿಸುವಂತೆಯೇ ಪ್ರತಿಮೆಗಳ ಭಾಷೆಯ ಮೂಲಕ ಮಾತನಾಡುತ್ತಾರೆ. ಈ ಹಿನ್ನೆಲೆಯಲ್ಲಿ ಜಿ.ಎಸ್.ಎಸ್.ರವರು ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಾ ಮೀಮಾಂಸೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದವರು. ಈ ಜ್ಞಾನ ಶ್ರೀಮಂತಿಕೆಯಿಂದ ಹೊಸಗನ್ನಡ ಕವಿತೆಗಳಲ್ಲಿ ಪ್ರತಿಮೆಗಳನ್ನು ಅದರ ಧ್ವನಿಗಳ ಮೂಲಕ ಹೇಳುವುದರಲ್ಲಿ ಪ್ರಮುಖರು. ಈ ಕವಿ ಬಳಸುವ ಅಲಂಕಾರಗಳ ಬಾಹ್ಯ ಸ್ವರೂಪವನ್ನು ಹಲವಾರು ಉದಾಹರಣೆಗಳಿಂದ ನೋಡಬಹುದು.

ಕನ್ನಡ ಸಾಹಿತ್ಯಾಬ್ಧಿಯಲಿ
ಅಡಗಿಹವೆಷ್ಟೋ ರತ್ನಗಳು
ಕನ್ನಡ ಭಾಷೆಯ ಕಾನನದಿ
ತುಂಬಿವೆಕಬ್ಬಿಗ ಕುಸುಮಗಳು. (ಸ.ಕಾ.ಪು.64)

ಒಟ್ಟಿನಲ್ಲಿ ಜಿ.ಎಸ್.ಎಸ್. ರವರಿಗೆ ಕವಿತೆಯ ಪರಿಕರಗಳೇ ಅದರ ಸರ್ವಸ್ವ. ತಮ್ಮ ಅನುಭವ ಜಗತ್ತು ಮತ್ತು ಭಾವ ಜಗತ್ತಿನ ನೇರ ನಿರೂಪಣೆಗೆ ಸಾಕ್ಷಿಯಾಗಿದೆ. ಇವರು ಬಳಸುವ ಉಪಮಾನ, ಉಪಮೇಯಗಳು ಪ್ರಕೃತಿಯಿಂದಲೇ ಮೂಡಿಬರುತ್ತವೆ. ಹೆಚ್ಚೆಂದರೆ ನಿತ್ಯಜೀವನದಲ್ಲಿ ನೋಡುವ ರೂಪಕಗಳನ್ನು ಕೊಡುತ್ತಾನೆ. ದುಃಖ ಪ್ರಮುಖ ಸಂಜೆಗೆ ಸೊರಗಿದ ಸಂಪಿಗೆ ಹೂ, ಖಗಸಂಕುಲ–ಕರಿಮೋಡ, ಸುಂದರಸಂಧ್ಯಾರಾಗ, ಬಣ್ಣದಬಿಲ್ಲು ಮುಂತಾದ ಸಾಮಾನ್ಯ ಪರಿಕರಗಳನ್ನು ಕವಿತೆಗಳಲ್ಲಿ ಬಳಸುತ್ತಾನೆ. ಇವರು ಕೊಡುವ ಪುರಾಣಪ್ರತಿಮೆಗಳು, ಪ್ರಕೃತಿಯನ್ನು ವರ್ಣಿಸಲೆಂದೊ, ಮನುಷ್ಯ ಜೀವನದ ವಿವರಗಳಿಗೆ ಮೂರ್ತರೂಪ ಕೊಡಲೆಂದೋ ಬರುವುದನ್ನು ಗಮನಿಸಬಹುದು.

ರಣರಂಗದ ತುಮುಲದಲ್ಲು
ಕೇಳು ದಿವ್ಯಗೀತೆಯ
ಸಂಭವಾಮಿಯುಗೇಯುಗೇ
ಎನ್ನುವ ಪರಮ ಸತ್ಯವ (ಸ.ಕಾ.ಪು 117)

ದೂರ್ವಾಸರ ಶಾಪವಿದೋ
ಕವಿಯುತಿಹುದು ಸುತ್ತಲೂ
ಕಂಡುದೆಲ್ಲ ಜಾರುತಿಹುದು
ಮೆಲ್ಲನಿರುಳ ತಮದೊಳು (ಸ.ಕಾ.ಪು325)
ಆಕಾಶದ ನೀಲಿಯಲ್ಲಿ
ಚಂದ್ರ ತಾರೆ ತೊಟ್ಟಿಲಲ್ಲಿ
ಬೆಳಕನಿಟ್ಟು ತೂಗಿದಾಕೆ (ಸ.ಕಾ.ಪು.324)

ಹೀಗೆ ನಿಸರ್ಗ ಸಹಜವಾದ ಸಂಗತಿಗಳಿಗೆ ಉಪಮಾನವಾಗಿ ಪುರಾಣ ಲೋಕದ ಚಿತ್ರಗಳನ್ನು ಕೋಡುತ್ತಾರೆ. ಇವು ಕವಿಯ ಗಾಢವಾದ ನಂಬಿಕೆಗಳನ್ನು ಪ್ರಸ್ತಾಪಿಸುತ್ತವೆ. ಇಲ್ಲಿ ಬರುವ ಇರುಳು, ಆಕಾಶ, ಚಂದ್ರ, ತಾರೆ, ರಣರಂಗ, ಮುಂತಾದವು ಪುರಾಣಲೋಕವನ್ನು ಹಿಂದೆಬಿಟ್ಟು ಇಡೀ ಜನಾಂಗದ ಒಳಮನದ ಅನುಭವಗಳನ್ನು ಪ್ರತಿಬಿಂಬಿಸುತ್ತದೆ. 'ಶಾಕುಂತಲದ ಐದನೆಯ ಅಂಕ', 'ಅಮೃತ ಮುಹೂರ್ತ', 'ಸ್ತ್ರೀ', 'ಗಾಂಧೀ ಶತಮಾನೋತ್ಸವ' ಮುಂತಾದವುಗಳು ದೇಶ, ಕಾಲಾತೀತಗಳ ಮಿತಿಯನ್ನು ಮೀರಿದ ಪ್ರತಿಮೆಗಳಾಗಿವೆ. ಇನ್ನು ಕೆಲವು ಕವನಗಳಲ್ಲಿ ಸಹೃದಯನಿಗೂ ತನ್ನದೇ ಅನುಭವವೆನ್ನುವಂತೆ ಸಂವಹನಗೊಳ್ಳುವ ಸಾಧ್ಯತೆಯೊಂದಿಗೆ ಇವು ಸಾರ್ವತ್ರಿಕತೆಯನ್ನು ಪಡೆಯುತ್ತವೆ. ಉದಾ: ಮನುಷ್ಯ, ಪ್ರಾಣಿ, ಮಹಾಮಾಯೆ, ಇತ್ಯಾದಿ.

ಹಾಗೆಯೇ ವಿಚಾರಗಳ ಮೂಲಕ ಆಲೋಚಿಸಿದಂತೆಯೇ ಭಾಷೆಯ ಮೂಲಕ ಪ್ರತಿಮೆಗಳನ್ನು ಚಿತ್ರಿಸಲು ಸಾಧ್ಯವಾಗುತ್ತದೆ. ಪ್ರತಿಯೊಂದು ಪ್ರತಿಮೆಯು ತನ್ನ ಹಿಂದಿರುವ ಪ್ರತಿಮೆಯ ಬೆಳವಣಿಗೆಯಾಗುತ್ತದೆ. ಕೆಲವು ಸಾರಿ ಆ ಪ್ರತಿಮೆಗಳ ಪರಸ್ಪರ ವೈರುಧ್ಯವೇ ಕವಿತೆಯ ಸಂಕೀರ್ಣತೆಯನ್ನು ಹೆಚ್ಚಿಸುವ ವಿಷಯವಾಗಿರುತ್ತದೆ. ಇದಕ್ಕೆ ಕನ್ನಡ ಭಾರತದಿಂದ ಹಲವಾರು ಉದಾಹರಣೆಗಳನ್ನು ಗುರ್ತಿಸ ಬಹುದು. ಪಾಶ್ಚಾತ್ಯವಿಮರ್ಶಕನೊಬ್ಬನು ಇದನ್ನು "ರೂಪಕಗಳ ಸಂಗ್ರಾಮ" ಎಂದಿದ್ದಾನೆ. ಜಿ.ಎಸ್.ಎಸ್. ರವರು ಪ್ರಾಚೀನ ಮತ್ತು ಆಧುನಿಕ ಅಲಂಕಾರ ಬಳಕೆ ನಡೆದಿದ್ದ ರೀತಿಯನ್ನು ಚೆನ್ನಾಗಿ ಬಲ್ಲವರಾಗಿದ್ದರು.

ಪರಿಕರಗಳಲ್ಲಿ ಅಲಂಕಾರವನ್ನು ನಮ್ಮ ಕವಿತೆಗಳಲ್ಲಿ ಹೇಗೆ ಬಳಸಿದ್ದಾರೆ ಎನ್ನುವುದನ್ನು ನೋಡಬಹುದು. ಜಿ.ಎಸ್.ಎಸ್.ರವರ ದೀಪಾವಳಿ ಬಗ್ಗೆ ಬರೆದಿರುವ ಕವಿತೆಗಳೂ ನವೋದಯ ಕವಿಗಳಿಗೆ ಇವರನ್ನು ಹೋಲಿಸಿದರೆ ಲಯವಾಗಿ, ಸರಳವಾಗಿ ನೇರ ನಿರೂಪಣೆಯಲ್ಲಿ ತೊಡಗಿರುವುದನ್ನು, ಸರಳವಾದ ಭಾಷೆಯಲ್ಲಿ ಕಾವ್ಯ ಸಹಜ ಪರಿಕರಗಳ ಮೆರವಣಿಗೆಯ ಮೂಲಕ ಸಾಗುವುದನ್ನು ಕಾಣಬಹುದು. (ದೀಪಾವಳಿಯ ದಿನದ ಮಳೆ)

ಇಲ್ಲಿ ಉಪಮೆ ರೂಪಕಗಳು ಕವಿಯ ಪ್ರತಿಭೆಗೆ ಸಾಕ್ಷಿಯಾದರೂ ಅವರ ವ್ಯಕ್ತಿತ್ವದ ಸಮಸ್ಯೆಗಳೊಂದಿಗೆ, ನೇರವಾದ ಸಂಬಂಧವನ್ನು ರೂಪಿಸಿಕೊಳ್ಳುವುದಿಲ್ಲ. (ನವೋ ಗೌರಿ ಭೈರವನಾರಿ, ಸರಸ್ವತಿಗೆಯನ್ನು 'ಶನಿದೇವರ ವಿಗ್ರಹ' ತಾಜಮಹಲು ಇತ್ಯಾದಿ) ಕಾವ್ಯ ಕಥನ ಪರಂಪರೆ ಕೈಬಿಡಲು ಸಾಧ್ಯವಾಗದೆ ಅಲಂಕಾರಗಳನ್ನು ಸೀಮಿತ ವ್ಯಾಪ್ತಿಯ ಪರಿಕರಗಳಂತೆ ಬಳಸುವ ಪ್ರವೃತ್ತಿಯ ಫಲ,

ಉದಾಹರಣೆಯೊಂದಿಗೆ ನೋಡಬಹುದು.

ನಮೋಗೌರಿ ನಾರಾಯಣಿ ಶ್ರೀ ದುರ್ಗಾಮಾಯಿ

ನಿನ್ನಯ ಕೃಪೆ ಇಲ್ಲದಿರಲು ನಾನು ಕಾಣೆ ತಾಯಿ ಎಂದು ವರ್ಣಿಸುತ್ತಾ

ಗರುಡನಾಗಿ ನೀನು ಮೇಲೆ ನೀಲ ಬಾನೊಲಾಡುವಾಗ

ಕಿರಿಯ ಮೀನವಾಗಿ ನಾನು ತೆರೆಯ ತುದಿಯೊಳಾಡುವೆ! (ಸ.ಕಾ.ಪು628)

ಓ ಅನಂತೆ, ಅನ್ನಪೂರ್ಣೆ

ತಾನೆ ರಕ್ಷೆ ನಿಲುವಿನಲ್ತೆ

ನಿನ್ನ ನೆನವ ಭಕ್ತಗೆ (ಸ.ಕಾ.ಪು. 629)

ಜಿ.ಎಸ್.ಎಸ್. ರವರು ಪದ್ಯಗಳಲ್ಲಿ ಒಂದು ಮಾತು ಸತ್ಯ. ಅದೇನೆಂದರೆ ಸಂಸ್ಕೃತದ ಪದಗಳನ್ನು ಕನ್ನಡ ಕವಿತೆಯೊಳಗಡೆ ಹೇಗೆ ಅರ್ಥಪೂರ್ಣವಾಗಿ ಬಳಸಿಕೊಳ್ಳಬಹುದು ಎನ್ನುವುದಕ್ಕೆ ಇದು ಸೂಕ್ತ ನಿದರ್ಶನ. "ಟಾಜಮಹಲು' 'ಶನಿದೇವರ ವಿಗ್ರಹ' ಮಹಾಮಾಯೆ' ಕವಿತೆಗಳು ಒಂದು ನಿರ್ದಿಷ್ಟ ಭಾವಸ್ಥಿತಿಗೆ ಒಪ್ಪಿದ ಪ್ರತಿಮೆಯಾಗಿ ಕವಿತೆಯೂ ಇಂದಿಗೂ ಮೌಲ್ಯವುಳ್ಳದ್ದಾಗಿದೆ. ಕವಿತೆಯ ಪರಿಕರಗಳಲ್ಲಿ ಅನುಭವ ಜಗತ್ತು ಮತ್ತು ಭಾವ ಜಗತ್ತಿನ ನೇರ ನಿರೂಪಣೆಗೆ ಸಾಕ್ಷಿಯಾಗಿವೆ. ಈ ಪರಿಕರಗಳು ಕೇವಲ ಕವಿತೆಗೆ ಮಾತ್ರಾ ಸೀಮಿತವಾಗದೇ 'ವಿಮರ್ಶೆಯ ಪೂರ್ವಪಶ್ಚಿಮ' ದಂತಹ ವಿಮರ್ಶಕ ಕೃತಿಗಳಲ್ಲಿಯೂ ಬಳಸಲಾಗಿದೆ. ಇದು ಜಿ.ಎಸ್.ಎಸ್. ಒಬ್ಬರಿಗೆ ಅನ್ವಯಿಸದೆ ನವೋದಯದ ಎಲ್ಲಾ ಕವಿಗಳಿಗೂ ಅನ್ವಯಿಸುತ್ತದೆ. ಪುರಾಣಪ್ರತಿಮೆಗಳ ವಿಪುಲವಾದ ಬಳಕೆಯನ್ನು ತಮ್ಮ ಮೀಮಾಂಸ ಕೃತಿಯಾದ ಸೌಂದರ್ಯ ಸಮೀಕ್ಷೆಯಲ್ಲಿ ತಂದಿರುವುದನ್ನು ಕಾಣಬಹುದು. ಬಹುಪಾಲು ಪುರಾಣಪ್ರತಿಮೆಗಳು ಪ್ರಕೃತಿಯನ್ನು ವರ್ಣಿಸಲೆಂದೋ ಮನುಷ್ಯ ಜೀವನದ ವಿವರಗಳಿಗೆ ಮೂರ್ತರೂಪ ಕೊಡಲೆಂದೋ ಬರುವುದನ್ನು ಗಮನಿಸಬಹುದು. ಮಹಾಮಾಯೆ ಅನಾಯಾಸದಿಂದ ಮೋಹಪಾಶದಿ ಜಗವ ಬಿಗಿದು' ಎನ್ನುವಲ್ಲಿ "ಹಬ್ಬಿರುವ ಮಬ್ಬಿನೊಳಗೊಬ್ಬನೇ ಮುದುಕ ಕೋಲೂರಿದ್ದು ನಡೆಯುವ ಸದ್ದು" (ಸ.ಕಾ.)ಹೀಗೆ ಬರುವ ರೂಪಕಗಳು, ಉಪಮೆಗಳು ಕವಿ ಮನೋಲೋಕದ ನಂಬಿಕೆಗಳನ್ನು ಗಾಢವಾಗಿ ಬಿಂಬಿಸುತ್ತವೆ. ಇಲ್ಲಿ ಬರುವ ಪ್ರತಿಮೆಗಳು ಕವಿಯ ವ್ಯಕ್ತಿತ್ವದೊಡನೆ 'ಅವಿನಾಸಂಬಂಧ' ವನ್ನು ಪಡೆಯುತ್ತವೆ. "ಯುಗಾದಿಯ ಹಾಡು' 'ಯುಗಾದಿಯ ಚಿಂತನೆ-86' "ದೀಪಾವಳಿ-1963' 'ಶ್ರೀ ಅರವಿಂದರಿಗೆ' ಇವು ವಿವಿಧ ಭಾವಸ್ಥಿತಿಗೆ ಒಪ್ಪಿದ ಪ್ರತಿಮೆಗಳು.

ಕವಿಯು ತನ್ನ ಅಂತರಂಗದ ಬದುಕನ್ನು ಅಗೋಚರವಾಗಿ ಕವಿತೆಯಲ್ಲಿ ಅನಾವರಣ ಮಾಡಿಕೊಳ್ಳುತ್ತಾನೆ. ನವೋದಯ, ನವ್ಯ ದಲಿತ ಬಂಡಾಯ ಕವಿಗಳು ಇದಕ್ಕೆ ಹೊರತೇನಲ್ಲ.

ಪ್ರತಿಮೆಗಳು ಕವಿಯ ಕಾವ್ಯದ ಪ್ರಮುಖ ಆಶಯಗಳಾಗಿರುತ್ತವೆ. ಜಿ.ಎಸ್.ಎಸ್. ರವರ ಯುಗಾದಿ ದೀಪಾವಳಿ ಸಂಜೆ ಸಂಧ್ಯಾ ಪ್ರತಿಮೆಗಳು ಹಲವಾರು ಕಡೆ ಪ್ರಸ್ತಾಪ ಮಾಡಿದ್ದಾರೆ. ದೀಪ ಒಂದು ಸಂಕೇತವಾಗಿ ಬರುತ್ತದೆ. ದೀಪವನ್ನು ಆದರ್ಶವಾಗಿ ಬೆಳಕಿನ ಸಂಕೇತವಾಗಿಯೂ ಬಳಸುತ್ತಾರೆ. ಇದರಲ್ಲಿ ಆದರ್ಶ ಮತ್ತು ವಾಸ್ತವಾಂಶಗಳನ್ನು ಮೂಡಿಸುವ ಪ್ರಯತ್ನ ಮಾಡಿದ್ದಾರೆ.

ಜಿ.ಎಸ್.ಎಸ್.ರವರು ವಿಜ್ಞಾನ, ಸಂಸ್ಕೃತಿಗಳಿಗೆ ವಿರುದ್ಧವಾದ ವಾದವನ್ನು ಯಾವ ಕವಿತೆಗಳಲ್ಲಿಯೂ ಹೇಳಿಲ್ಲ. ಅವರ ಮೂಲಧ್ವನಿ ಪ್ರಕೃತಿ ಆರಾಧನೆಯೇ ಆಗಿದೆ. ಹಾಗೆಂದು ಪ್ರಾದೇಶಿಕವಾದ ಅಭಿಮಾನವನ್ನು ಕಡೆಗಣಿಸಿಲ್ಲ.

ಜಿ.ಎಸ್.ಎಸ್.ರವರ 'ಗಡಿಯಾರದಡಿಯಲ್ಲಿ' ಲೋಕ ವ್ಯವಹಾರಗಳು ಪ್ರಕಾರವಾಗಿ ನಡೆಯುತ್ತಿರುವ ಚಿತ್ರಣದಲ್ಲಿ ತನ್ನ ಭಾವನೆಗಳನ್ನು ಕೇಂದ್ರಿಕರಿಸುವ ರೀತಿ ಅನನ್ಯವಾಗಿದೆ.

ಕೈಕೋಲ ಮೂಲೆಯೊಳಿಟ್ಟು ನಿಲುವುಗನ್ನಡಿಯೆದುರು
ಬಂದುನಿಂತ
ತಲೆತುಂಬ ಮಾಗಿಯ ಮುದ್ರೆ; ಕಮರಿದ ಕೆನ್ನೆ; ಮಾಸಿಕ ಕಣ್ಣು;
ತನ್ನದೆ ಈ ಚಿತ್ರ!
ಗೋಡೆಯ ಮೇಲೆ ತೂಗುತಿದೆ ಹರೆಯಗಳ ಹೊಂಬಿಸಿಲ
ಹಿಡಿದು ತೆಗೆಸಿದ ಫೋಟೊ
ಅದರ ಮೇಲೆ ತೂಗುತಿದೆ ಈ ದೊಡ್ಡ ಗಡಿಯಾರ
ಟಿಕ್ ......... ಟಿಕ್ ......... ಟಿಕ್......... (ಸ.ಕಾ.ಪು. 200)

ಒಬ್ಬ ಕವಿ ತನ್ನ ಕಾವ್ಯದಲ್ಲಿ ಮತ್ತೆ ಮತ್ತೆ ಪ್ರತ್ಯಕ್ಷವಾಗುವುದು ಪ್ರತಿಮೆಗಳ ಮೂಲಕ ಈ ಬಗೆಯ ಪುನಾರಾವರ್ತಕ ಪ್ರತಿಮೆಗಳ ಅಧ್ಯಯನ ಪಾಶ್ಚಾತ್ಯ ವಿಮರ್ಶೆಯ ಸಂದರ್ಭದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಡೆದಿದ್ದರೂ ಕನ್ನಡದಲ್ಲಿ ಕಡಿಮೆ ಎನ್ನಬಹುದು. ಕಾವ್ಯದ ಆಶಯವನ್ನು ಗುರುತಿಸಲು ಪ್ರತಿಮೆಗಳು ಸಾಕಷ್ಟು ಸಹಾಯ ಮಾಡುತ್ತವೆ. ಇವರಲ್ಲಿ ಬರುವ ಹಾಡುಹಕ್ಕಿ, ಹಣತೆ, ಸಂಜೆ ಪ್ರಕೃತಿ, ಯುಗಾದಿ, ಇತ್ಯಾದಿ 'ಯುಗಾದಿ ವಸ್ತುವನ್ನಾಗಿ ಇಟ್ಟುಕೊಂಡು ಹಲವಾರು ಕವಿತೆಗಳನ್ನು ಬರೆದಿದ್ದಾರೆ. ಯುಗಾದಿಯ ಚಿಂತನ 1986 "ಯಾಕಿಷ್ಟು ವಿಕೃತನಾಗಿದ್ದಾನೆ ಮನುಷ್ಯ ಇಂಥ ಚೆಲುವಿನ ನಡುವೆ" ಎನ್ನುವಲ್ಲಿ ಪ್ರಕೃತಿಯ ಸೌಂದರ್ಯ ನಡುವೆ ಮಾನವನ ಮನಸ್ಸಿನ ವಿಕೃತ ರೂಪವನ್ನು ಯುಗಾದಿಯಲ್ಲಿ

ಚಿತ್ರಿಸಿದ್ದಾರೆ.  ಹಾಡುಹಕ್ಕಿ – ಹಾಡುವ ಹಕ್ಕಿಯಾವ ಸನ್ಮಾನವನ್ನು ಬಯಸದೇ ಇರುವ ಸಂಕೇತವನ್ನು ಜೊತೆಗೆ ಮನಸ್ಸಿನಾನಂದವನ್ನು ಸೂಚಿಸುತ್ತದೆ.

ಕವಿತೆಯ ಪರಿಕರಗಳನ್ನು ಕುರಿತ ಈ ಚರ್ಚೆಯ ರಸಧ್ವನಿಗಳ ಬಗ್ಗೆ ಎನನ್ನೂ ಹೇಳಲು ಸಾಧ್ಯವಾಗಿಲ್ಲ.  ಚಿಕ್ಕ ಚಿಕ್ಕ ಕವಿತೆಗಳಿಂದ ಹಿಡಿದು ಇಡಿ ಕವಿತೆಯನ್ನು ಪ್ರತಿಮೆಗಳಿಂದಲೂ ವಿವರಿಸಲು ಸಾಧ್ಯವಿದೆ.

**ಕಾವ್ಯ ಛಂದಸ್ಸು** : ಕವಿತೆಯ ಛಂದೋ ವಿನ್ಯಾಸವನ್ನು ಅದರ ವಸ್ತುವಿನಿಂದ ಬೇರ್ಪಡಿಸಿ ತೋರಿಸಲು ಸಾಧ್ಯವಿಲ್ಲ.  ಆಧುನಿಕ ಕಾವ್ಯವು ಹಳೆಯ ಛಂದೋ ಪ್ರಕಾರಗಳನ್ನು ಅವುಗಳು ಇರುವಂತೆಯೇ ಬೆಳಸದೆ ವಸ್ತುವಿಗೆ ಅನುಗುಣವಾಗಿ ಭಾಷೆ, ಛಂದಸ್ಸು ಸಹ ಬದಲಾವಣೆ ಆಗುವ ಸಂದರ್ಭ ಉಂಟಾಯಿತು.  ನವೋದಯ ಕಾವ್ಯದ ಛಂದಸ್ಸನ್ನು ಕುರಿತಂತೆ ತೀನಂಶ್ರೀ, ಎಂ.ಚಿದಾನಂದಮೂರ್ತಿ. ಡಿ.ಎಸ್.ಕರ್ಕಿ ಮುಂತಾದವರು ಲೇಖನಗಳನ್ನು ಬರೆದರು.  ಪಾಶ್ಚಾತ್ಯ ಸಾಹಿತ್ಯ ಸಂದರ್ಭದಿಂದ ಕನ್ನಡ ನವೋದಯವು ತೆಗೆದುಕೊಂಡ ಬಂಧುಗಳ ಬಗ್ಗೆ ಎಸ್.ಅನಂತನಾರಾಯಣ, ಟಿ.ವಿ.ವೆಂಕಾಚಲಶಾಸ್ತ್ರ, ಪ್ರಭುಶಂಕರ್ ಮುಂತಾದವರು ಅತ್ಯಾಧುನಿಕ ಪರಿಕಲ್ಪನೆಗಳ ಬಗ್ಗೆ ಛಂದೋಪ್ರಯೋಗಗಳನ್ನು ಕುರಿತು ಅಧ್ಯಯನ ನಡೆಸಿದರು.  ಪರಂಪಾರನುಗತವಾಗಿ ಬಂದ ಛಂದಸ್ಸಿಗೆ ಬದಲಾಗಿ ಪ್ರತಿಯೊಂದು ಕವಿತೆಯೂ ತನಗೆ ಮಾತ್ರ ವಿಶಿಷ್ಟವಾದ ಶಬ್ಧಶರೀರವನ್ನು ಹೊಂದುವ ಪ್ರಯತ್ನ ಮಾಡುತ್ತದೆ.  ಕುರ್ತುಕೋಟಿಯವರು ಹೇಳಿದಂತೆ ಪ್ರತಿಯೊಂದು ಭಾವವೂ ತನ್ನದೇ ಆದ ಛಂದಸ್ಸನ್ನೂ ಹುಟ್ಟಿಸಿಕೊಳ್ಳುತ್ತದೆ.  ಅಷ್ಟೇ ಅಲ್ಲ ಅದು ಕವಿತೆಯ ಭಾಷೆ, ಪ್ರತಿಮೆ, ಅಲಂಕಾರ ಮುಂತಾದುವೆಲ್ಲ ಮೈದಳೆಯುವ ನಿಖರವಾದ ಬಗೆಯನ್ನು ನಿರ್ಧರಿಸುತ್ತದೆ.  "ಒಂದು ಶಬ್ದದ ಮಾತ್ರೆಗಳ ಲೆಕ್ಕ ಅವನಿಗೆ ಅರಿವಾಗದಂತೆಯೇ ಅವರ ವಶವಾಗಿರುತ್ತದೆ.  ಪದ್ಯದ ಲಯ ಒಮ್ಮೆ ನಿರ್ಧಾರವಾದರೆ ಸಾಕು, ಲಯ ತನ್ನ ಶಬ್ಧಗಳನ್ನು ಯತ್ನವಿಲ್ಲದೆ ಕರೆದುಕೊಂಡು ಬರುತ್ತದೆ. ಆದರೆ ಛಂದಸ್ಸು ಅರ್ಥಪೂರ್ಣವಾಗಿ ಉಪಯೋಗಿಸಬೇಕೆನ್ನುವ ಕವಿ ಇನ್ನೂ ಹೆಚ್ಚು ಕಷ್ಟಪಡಬೇಕಾಗುತ್ತದೆ.  ಛಂದಸ್ಸು ಕಾವ್ಯದ ಬಾಹ್ಯಲಕ್ಷಣ ಮಾತ್ರ ಎಂದು ಬರೆದ ಕವಿ ಒಮ್ಮೆ ಅದನ್ನು ಪಳಗಿಸಿಕೊಂಡ ನಂತರ ಗದ್ಯವನ್ನು ಬರೆಯುವಷ್ಟು ಹಗುರವಾಗಿ ಬರೆಯಲಿಲ್ಲ.  ಆದರೆ ಛಂದಸ್ಸು ಕವಿತೆಯ ಭಾವದ ನಡಿಗೆ ಎಂದು ತಿಳಿದ ಕವಿ ಭಾವದ ಹೆಜ್ಜೆಗಳ ಗತ್ತನ್ನು ತಾಳ್ಮೆಯಿಂದ ಅನುಸರಿಸಬೇಕಾಗುತ್ತದೆ."  ಇದರ ಸೌಲಭ್ಯವು ಮಾತ್ರಾ ಲಯಗಳನ್ನು ಬಳಸಲು ಕವಿ 3,4,5 ಈ ಮಾತ್ರೆಗಳಿರುವ ಪದಬಂಧಗಳಿಂದ ಕಾವ್ಯ ರಚಿಸಲಾಗುತ್ತದೆ. ಮಾತ್ರ ಛಂದಸ್ಸಿನಿಂದ ಅಂಶ ಛಂದಸ್ಸಿಗೆ ಬಂದಾಗ ಒಂದು ಪದವು ಹಿಗ್ಗಿ ಅಥವಾ ಕುಗ್ಗಿದಾಗ ಗೇಯತೆಯ ಅಗತ್ಯಕ್ಕೆ ತಕ್ಕಂತೆ ಮಾತ್ರೆಗಳನ್ನು ಬದಲಾಯಿಸಬೇಕಾಗುತ್ತದೆ. 'ಎದೆ ತುಂಬಿ ಹಾಡಿದೆನು ಅಂದು ನಾನು ಗೇಯತೆಗನು ಗುಣವಾಗಿ

ಮಾತ್ರೆಗಳನ್ನು ಹಿಗ್ಗಿಸಲೂಬಹುದು ಕುಗ್ಗಿಸಲೂ ಬಹುದು. ಜಿ.ಎಸ್.ಎಸ್. ರವರ 13 ಕವನ ಸಂಕಲನಗಳಲ್ಲಿ ವಿಭಿನ್ನ ರೀತಿಯ ಛಂದೋವೈವಿನ್ಯಾಸಗಳನ್ನು ಗುರುತಿಸಲು ಸಾಧ್ಯ. ಆಯಾ ಪರಿಕರಗಳಿಗೆ ಅನುಗುಣವಾಗಿ ಆಧುನಿಕ ಛಂದೋಪ್ರಕಾರಗಳಾದ ಪ್ರಾಸ, ಸ್ವರಗಾತ, ಪದ್ಮಸರಾ, ಮುಲೆ – ಇವುಗಳನ್ನು ಗುರುತಿಸಬಹುದು. 'ವ್ಯಕ್ತಮಧ್ಯ' ಕವನ ಸಂಕಲದಲ್ಲಿ 'ಚತುಷ್ಪದಿ'–ಪದ್ಯಬಂಧ ಅದರ ಚೌಕಟ್ಟನ್ನು ದಾಟಿಸಿ ಪದ್ಯದಿಂದ ಪದ್ಯಕ್ಕೆ ಮುಂದುವರಿಸುವ ಪ್ರಯತ್ನ. ಈ ತಂತ್ರವನ್ನು ಅವರು "ಮುಕ್ತಬಂಧ'ವೆಂದು ಕರೆಯುತ್ತಾರೆ. (ಇಂಗ್ಲೀಷ್ ನಲ್ಲಿ ಇದಕ್ಕೆ ಸಂವಾದಿಯಾದ ಶಬ್ಬ Enjambenent; to stride over ದಾಟುವಿಕೆ.)

ಮುಕ್ತ ಬಂಧವನ್ನು ಸಾಧಾರಣವಾಗಿ ಜಿ.ಎಸ್.ಎಸ್. ಒಂದು ಕ್ರಿಯೆಯ ನಿರಂತರವನ್ನು ದಾಖಲಿಸಲು ಉಪಯೋಗಿಸುತ್ತಾರೆ. ವ್ಯಕ್ತ ಮಧ್ಯ ಕನ್ನಡದ ಹಿರಿಯ ಚಿಂತನಶೀಲ, ಸ್ವಪ್ರಜ್ಞೆಯ ಕವಿ ವಿಮರ್ಶಕರಾದ ಜಿ.ಎಸ್.ಎಸ್.ರವರು ಹಿಂದಿನ ಆಶಯ–ಕಾಳಜಿಯನ್ನು ಮುಂದುವರಿಸುವಂತೆಯೇ ಹೊಸ ಆಶಯ–ಕಾಳಜಿ,–ರಚನಾಕ್ರಮಗಳಿಂದ ರೂಪುಗೊಂಡಿದೆ.

ಈಗಲೋ, ಆಗಲೋ ಹಾರಿಹೋಗಲೆಂದನು
ವಾದ ಅಸಂಖ್ಯ ಒಂಟಿ ಕಾಲಿನ ಪಕ್ಷಿಯಂತಿ
ರುವ ತೆಂಗಿನಮರದ ವಿಸ್ತಾರ ಈ ನೆಲದಾಳ
ಗಳಲ್ಲಿ ಬೇರೂರಿ ವ್ಯಕ್ತಮಧ್ಯದೊಳಗೆಲ್ಲೊ
ಥಟ್ಟನೆ ಅರಳಿ ನೆಲಮುಗಿಲಿಗೂ ನಡುವೆ
ನಿಂತ ಈ ಒಂದೊಂದು ಜೀವಂತೆ ಕವಿತೆಗಳೇ (ಸ.ಕಾ.ಪು.555)

ತೆಂಗಿನಮರದ ಆಳ–ಆಗು ವಿಸ್ತಾರದೊಂದಿಗೆ ಜೀವನ ವಿಸ್ತಾರವನ್ನು ನವೀಕರಿಸುವ ರೀತಿಯ ವಿಶೇಷತೆಗೆ –ಕವಿ ಪದ್ಯಗಳನ್ನು ಒಂದೇ ಸಮನೆ ರಗಳೆಯಂತೆ ಬೆಳೆಸಿದ್ದಾರೆ. ಅಷ್ಟೇ ಅಲ್ಲದೆ ಇಲ್ಲಿಗೆ ಇಲ್ಲಿದೆ.

ಚಕ್ರದ ಮಧ್ಯೆ
ಮಣ್ಣಿನ ಮುದ್ದೆ ಕುಂಬಾರ ಗುಂಡನ ಬೆರಳ
ಸ್ಪರ್ಶಕ್ಕೆ ಮಣ್ಣೊಳಗೆ ಮಲಗಿದ್ದ ಆಕೃತಿ
ಗಳೊಂದಾಂದಾಗಿ ಮೂಡುವ ಪವಾಡಕ್ಕೆ
ನನಗೆಮುಗಿಯದಬೆರಗು (ಸ.ಕಾ.ಪು.370.)

ಇಲ್ಲಿಯೂ ಸಹ ಕುಂಬಾರನ ಕಲೆಗಾರಿಕೆಯಂತೆ ಜೀವನ ಪರ ಕ್ರಿಯೆಗಳು ಕಾವ್ಯಕ್ಕೆ ಪ್ರೇರಕವಾಗುದರಲ್ಲಿ ಸಂದೇಹವಿಲ್ಲ ಎಂಬುದನ್ನು ಕವಿಯ ಜೀವಪರ ದೃಷ್ಟಿ ಕಾಣುತ್ತದೆ. ಮುಕ್ತಬಂಧವು ಸಾಧಾರಣವಾಗಿ ಓದುಗನ ಮೇಲೆ ಎಷ್ಟು ಪರಿಣಾಮ ಉಂಟು ಮಾಡುತ್ತದೆ ಎನ್ನುವುದು ಮುಖ್ಯ. ಅಲ್ಲದೆ ಮಾತ್ರಾಗಣಕ್ಕೆ ಬದಲಾಗಿ ಅಂಶಗಣವನ್ನು ಬಳಸುವುದು ಅಷ್ಟೊಂದು ಸುಲಭವಿಲ್ಲ. ಅಂಶಗಣವೂ ಲಯಕ್ಕೆ ತಕ್ಕಂತೆ ಹಿಗ್ಗುವುದು ಮತ್ತು ಕುಗ್ಗುವುದರಿಂದ ಮಾತ್ರ ಸಾಧ್ಯತೆ ಇದೆ.

ನವೋದಯ ಕವಿಗಳು ಉಪಯೋಗಿಸಿದ ಒಂದು ಮಾರ್ಗವೆಂದರೆ ಇಂಗ್ಲೀಷ್ ಬಂಧಗಳಲ್ಲಿ ಕನ್ನಡ ಲಯ ವ್ಯವಸ್ಥೆಯನ್ನು ಕಸಿ ಮಾಡಿದ್ದು ಎಂದರೆ ಸಾಲುಗಳ ಸಂಖ್ಯೆ ಹಾಗೂ ಪ್ರಾಸಯೋಜನೆಗಳಲ್ಲಿ ಹೆಚ್ಚಿನ ವ್ಯತ್ಯಾಸವನ್ನು ಮಾಡದೆ ಮಾತ್ರಾಗಣಗಳನ್ನು ಬಳಸುವುದು. ಎಲಿಜಿ ಓಡ್ ಮುಂತಾದ ಕಡೆ ಒಂದೇ ಸಾಲಿನಲ್ಲಿ ಗಾತ್ರದಲ್ಲಿ ಆಗುವ ವ್ಯತ್ಯಾಸಗಳು ಕಥನ ಕವನಕ್ಕೆ ಹೊಂದಿಕೊಂಡ ಸರಳರಗಳೆಯನ್ನು ಸಾಹಿತ್ಯದೂದ್ದಕ್ಕೂ ಬಳಸಿದರು. ಆದರೆ ಜಿ.ಎಸ್.ಎಸ್. ರವರು ಸರಳ ರಗಳೆಯನ್ನು ಬಳಸಲಿಲ್ಲ, ಭಾವಗೀತೆಗಳಲ್ಲಿ ಬಾಹುಳ್ಯರಲ್ಲಿ ವಿವಿಧತೆಯನ್ನು ತಂದರು. ಅದರಲ್ಲೂ 13ನೇ ಕವನ ಸಂಕಲನ ವ್ಯಕ್ತ ಮಾಧ್ಯದಲ್ಲಿ ಚೆತುಷ್ಪದಿಗಳನ್ನು ನಿರರ್ಗಳವಾಗಿ ಬಳಸಿದ್ದಾರೆ. ಮೊದಲನೇ ಸಾಲಿನಿಂದ ಕೊನೆಯ ಸಾಲಿನವರೆಗೆ ಕಥೆ ಓದಿಸಿಕೊಂಡು ಹೋಗಿ ಕೊನೆಯ ಹಂತ ಕಾಣುತ್ತದೆ. ಮಧ್ಯದಲ್ಲಿ ಎಲ್ಲಿಯೂ ನಿಲ್ಲಿಸುವ ಹಾಗಿಲ್ಲ.

ಕಿರು ಕವಿತೆಗಳ ಅಸ್ತಿತ್ವವನ್ನು ಬಲಪಡಿಸಿದ್ದ ಇನ್ನೊಂದು ಮಾರ್ಗವೆಂದರೆ ಹಳೆಗನ್ನಡ. ನಡುಗನ್ನಡ ಛಂದೋಪರಂಪರೆಗೆ ಸೇರಿದ್ದರೂ ಪೂರ್ಣಪ್ರಮಾಣದ ಕಾವ್ಯಗಳಲ್ಲಿ ಬಳಕೆಯಾಗದಿದ್ದ ದೇಸೀ ಬಂಧಗಳಾದ ತ್ರಿಪದಿ, ಚೌತದಿ, ಸಾಂಗತ್ಯ ಮುಂತಾದ ಬಂಧಗಳಲ್ಲಿ ಸಾಂಗತ್ಯವೊಂದನ್ನು ಈ ಕವಿ ಕಾವ್ಯಶೈಲಿಗೆ ಚೆನ್ನಾಗಿ ಬಳಸಿಕೊಂಡಿರುವುದು ಕಾಣುತ್ತೇವೆ. ಜಿ.ಎಸ್.ಎಸ್.ರವರು ದೇಸಿಬಂಧುಗಳಾಗಿ ಜಾನಪದ ಶೈಲಿ ಮಾರ್ಗವನ್ನು ಬಳಸುವುದರ ಜೊತೆಗೆ, ಆಧುನಿಕ ಶೈಲಿಯನ್ನು ಹೆಚ್ಚಾಗಿ ಬಳಸಿದ್ದಾರೆ ಎನ್ನಬಹುದು.

ಆಧುನಿಕ ಛಂದಸ್ಸಿನ ಪ್ರಕಾರ ಹೇಳುವುದಾದರೆ ಸ್ವರಾಘಾತ, ದಾಟಿ, ಲಯಗಳನ್ನು ಚೆನ್ನಾಗಿ ಬಳಸಿರುವುದನ್ನು ಕಾಣುತ್ತೇವೆ. ಉದಾ: 'ಮುಂಬೈ, ಜಾತಕ್', ಭೀಮಾಲಾಪ, ಪ್ರಾರ್ಥನೆ, 'ಸಾಕು ನಿಲ್ಲಿಸು' 'ನಿನ್ನ ಸಾಮಗಾನ', ಮುಂತಾದವುಗಳನ್ನು ಹೆಸರಿಸಬಹುದು.

ವ್ಯಕ್ತಮಧ್ಯ ಒಟ್ಟು 39 ಕವನಗಳ ಕವನ ಸಂಕಲ 1997–99ರಲ್ಲಿ ರಚನೆಗೊಂಡ ಕವಿತೆಗಳು ಇದರಲ್ಲಿ 'ನವೋದಯ' 'ಸ್ಥಾವಕ್ಕಳಿವುಂಟು', 'ಬುದ್ಧ ಪೂರ್ಣಿಮೆಯಾದಿನ"–ಸಾನೆಟ್‌ಗಳಾದರೆ "ಮುಖಾಮುಖಿ" 'ಲೇಕ್ ಡಿಸ್ಟ್ರಿಕ್ಟಿನಲ್ಲಿ–2', ಧೀರ್ಘರಗಳೆಯಂತೆ ರಚಿತಗೊಂಡಿವೆ. ಇವುಗಳನ್ನು

ಹೊರತು ಪಡಿಸಿದ ಉಳಿದ ಕವನಗಳು "ಚತುಷ್ಪದಿ"–ಛಂದಸ್ಸಿನಲ್ಲಿ ರಚಿತಗೊಂಡಿದೆ ಎನ್ನಬಹುದು. ಉದಾ: 'ಕವಿತೆ ಕಂಡದ್ದು ಹೀಗೆ', 'ಕತ್ತಲು', 'ದೀಪಚಿಂತನ', 'ಗೋಡೆಗಳು', 'ಒಂದು ನೆನಪು', 'ಚರಿತ್ರೆ ಅಂದರೆ ಅದರಲ್ಲೂ 'ಗೋಡೆಗಳು', 'ಅವಸ್ಥೆ', 'ಚರಿತ್ರೆಯ ಕಾಲಜ್ಞಾನ ಕಿಷ್ಕಿಂದೆಯ ಕತ್ತಲು' – ಇನ್ನು ಮುಂತಾದವುಗಳು ಭಾಗದಿಂದ ಭಾಗಕ್ಕೆ ಮುಂದುವರೆಯುತ್ತದೆ. ನಾಲ್ಕು ಪಾದ'ಗಳ ಕವಿತೆಯಲ್ಲಿ ಬರುವುದನ್ನು ಗುರುತಿಸಬಹುದು. 'ಕತ್ತಲು' ಕವಿತೆಯಲ್ಲಿ ನಾಲ್ಕು ಪಾದಗಳಿಗೆ ಕವಿತೆ ನಿಲ್ಲುವುದಿಲ್ಲ. 4ನೇ ಪಾದದಿಂದ 5ನೇಯ ಪಾದವನ್ನು ಓದಿದಾಗಲೇ ಅದರರ್ಥ ಸಂಪೂರ್ಣವಾಗುವುದು.

ಬದುಕು–ಬರಹದ ನಡುವೆ ಕನಸು–ನನ
ಸಿನ ನಡುವೆ ತೂರಿಸುವ ವಿಕೃತಿ
ಯನ್ನೆದುರಿಸಲು ಸಾಕು. ಒಂದೇ ಒಂದು
ಭಾಗರ್ಥಚಂದ್ರನ ಪ್ರಣತಿ
3/4/3/3/2
2/3/4/3–3 (ಸ.ಕಾ.ಪು.557)

ಹೀಗೆ ಸಾಗುತ್ತದೆ ಮಾತ್ರಾಲಯ ಕೊನೆಯಲ್ಲಿ ಪ್ರಣತಿ ಎಂಬಲ್ಲಿ ಪದ್ಮಗಣಕ್ಕೆ ಒಂದು ಕವಿತೆ ಮುಕ್ತಾಯ ಹಾಡುತ್ತದೆ. ವೈವಿಧ್ಯಗಾಗಿ ಜಿ.ಎಸ್.ಎಸ್.ರವರು ಕೆಲವು ಚುಟುಕಗಳನ್ನು ಬರೆದಿದ್ದಾರೆ. ಆದರೆ ಅದು ಕೇವಲ ಸಂತೋಷಕ್ಕಾಗಿ ಅವರೇ ಹೇಳುವ ಹಾಗೆ

ಇಂಥ ಹನಿಗವಿತೆಗಳಲ್ಲಿ
ಕವಿ ಆಗಾಗ ರಮಿಸಬಹುದು
ಆದರೆಅವುಗಳಲ್ಲೇವಿರಮಿಸಬಾರದು (ಸ.ಕಾ.ಪು.....)

ಎಂದು ವಾಚ್ಯರ್ಥಕ್ಕೆ ಹೇಳಿದರೂ ಮುಂದುವರೆಯಬೇಕು ಎಂದಿದ್ದಾರೆ. ಇಲ್ಲಿ ಪು.ತಿ.ನ.ರವರು ಜಿ.ಎಸ್.ಎಸ್.ಬಗ್ಗೆ ಹೇಳಿರುವ ಮಾತು ಸಾರ್ಥಕವೆನಿಸುತ್ತದೆ.

"ಶಿವರುದ್ರಪ್ಪನವರ ಕವನಗಳು ತಮ್ಮ ಬಾಹ್ಯ ಸೌಂದರ್ಯದಿಂದಲೂ ಬಗೆಯ ಕಾಂತಿಯಿಂದಲೂ ಸಹೃದಯರ ಮನಸ್ಸನ್ನು ಸೆಳೆದು ಈ ತರುಣ ಕವಿಗಳಿಗೆ ಯಶಸ್ಸನ್ನು ಈಗಾಗಲೇ ತಂದಿವೆ. ಸೊಗಸಾದ ಕವನಗಳನ್ನು ರಚಿಸುವ ಮನಸ್ಸು ಸುಸಂಸ್ಕೃತವಾದದ್ದು, ಕೋಮಲವಾದದ್ದು, ಪರಿಸರ

ಸಂವೇದಿಯಾದದ್ದು ಮತ್ತು ರಸವನ್ನು ವಿಷಯಗಳ ಮುಖೇನ ಎತ್ತಿಕೊಡುವ ಸಾಮರ್ಥ್ಯವುಳ್ಳದ್ದು" **ಪು.ತಿ.ನ.**

ಒಟ್ಟಿನಲ್ಲಿ ಜಿ.ಎಸ್.ಎಸ್.ರವರೇ ತಾವು ರಚಿಸಿದ ಗೀತೆಗಳನ್ನು ಕುರಿತು ಈ ರೀತಿ ಹೇಳಿದ್ದಾರೆ. ವ್ಯಕ್ತಮಧ್ಯ ಮತ್ತು ಚಕ್ರಗತಿ ಎರಡು ಕವನ ಸಂಕಲನಗಳಲ್ಲಿ ರಚಿತವಾದ ಪದ್ಯಗಳು ಕೆಲವು ಕವಿತೆಗಳ ಮೂಲ ಮಾನದಲ್ಲಿ ನಾನು ನಡೆಯಿಸಿದ "ಪದ್ಯಬಂಧ"ದ ಪ್ರಯೋಗಗಳು.

ಈ ಪ್ರಯೋಗಗಳ ಲಕ್ಷಣವೆಂದರೆ, ಇಡೀ ಆಧುನಿಕ ಕನ್ನಡ ಕಾವ್ಯದ ಉದ್ದಕ್ಕೂ (ನವೋದಯ, ನವ್ಯ, ನವೋತ್ತರ ಸಂದರ್ಭಗಳಲ್ಲಿ) ಪರಿಚಿತವಾದ ಹಾಗೂ ಸಮೃದ್ಧವಾದ ಚತುಷ್ಪದಿ (ನಾಲ್ಕು ಪಾದಗಳ) ಪದ್ಯಬಂದವನ್ನು ಅದರ ಚೌಕಟ್ಟನ್ನು ದಾಟಿಸಿ ಪದ್ಯದಿಂದ ಪದ್ಯಕ್ಕೆ ಮುಂದುವರೆಸುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಹೀಗೆ ಪರಿಚಿತವಾದ 'ಚತುಷ್ಪದಿ'ಗಳಲ್ಲಿ 2ನೇ ಮತ್ತು 4ನೆಯ ಪಾದಾಂತ್ಯದ ಪದಪ್ರಾಸ, ಅಥವಾ ಸ್ವರಪ್ರಾಸಗಳಿಂದಾಗಿ ಒಂದು ಬಗೆಯ ನಿಲುಗಡೆಯ ಮೂಲಕ ಪಡೆದು ಕೊಳ್ಳುತ್ತಿದ್ದ ಅಚ್ಚುಕಟ್ಟಾದ ಬಂಧವನ್ನು ಮುರಿದು, ಕವಿತೆಯ ನಡೆ ಒಂದು 'ಚತುಷ್ಪದಿ'ಯಿಂದ ಮತ್ತೊಂದು 'ಚತುಷ್ಪದಿ'ಗೆ ಹೊರಳುವಂತೆ ವ್ಯವಸ್ಥೆಗೊಳಿಸಿದ ಈ ಬಂಧವನ್ನು 'ಮುಕ್ತಬಂಧ' ಎಂದು ನಾನು ಕರೆಯಲು ಅಪೇಕ್ಷಿಸುತ್ತೇನೆ. ಇದು ಮುಕ್ತಬಂಧ ನಿರ್ಧಿಷ್ಟವಾದ ನಾಲ್ಕು ಪಂಕ್ತಿಗಳ ಬಂಧವನ್ನು ನೋಟಕ್ಕೆ ಕಾಣುವಂತೆ ಉಳಿಸಿಕೊಂಡರೂ ಅದರಿಂದ ಮುಕ್ತವಾಗಿ ಮುನ್ನೆಡೆಯುವ ಒಂದು ರಚನಾ ವಿಶೇಷ. ಈ ಕಾರಣದಿಂದ ಈ 'ಬಂಧ' ಹಾಡುಗಾರಿಕೆಗೆ ಅಳವಡುವ ಲಕ್ಷಣಕ್ಕೆ ಹೊರತಾಗಿ ಹಿಂದಿನ ಪರಿಚಿತವಾದ ಚತುಷ್ಪದಿಗಳನ್ನು ಓದುತ್ತಿದ್ದ ಕ್ರಮದಿಂದ, ಬೇರೆಯಾದ ಓದುಗಾರಿಕೆಗೆ ಒತ್ತಾಯಿಸುತ್ತದೆ. ಈ ಒಂದು ಪದ್ಯ ಬಂಧದಿಂದ ಮುಂದಿನ ಪದ್ಯಬಂಧಕ್ಕೆ ಮುನ್ನಡೆಯುವ ಈ ಪ್ರಯೋಗವನ್ನು Run on Stanza Pattern" ಎಂದು ಇಂಗ್ಲೀಷ್ ನಲ್ಲಿ ವರ್ಣಿಸುವುದು ಸುಲಭ. ಈ ಪ್ರಯೋಗಗಳ ಬಗ್ಗೆ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ಹೀಗೆ ಅಭಿಪ್ರಾಯ ಪಡುತ್ತಾರೆ.

"ಸಾಮಾನ್ಯವಾಗಿ ಹೊಸಗನ್ನಡ ಕವಿತೆಯಲ್ಲಿ ಮಾತ್ರಾಬಂಧಗಳು ಚತುಷ್ಪದಿಗಳ ಕಟ್ಟಡದಿಂದಾಗಿದ್ದು, ಚತುಷ್ಪದಿಗಳು ಒಂದೊಂದು ಪ್ರತ್ಯೇಕ ಸಂಪೂರ್ಣ ಅರ್ಥದ ವಾಕ್ಯ ಘಟಕಗಳಾಗಿರುತ್ತವೆ. ನಿಮ್ಮ ಪ್ರಯೋಗಗಳಾದರೋ ನನಗೆ ಹೊಸದಾಗಿ ಕಾಣುತ್ತೇವೆ. ಇಂತಹ ಪ್ರಯೋಗಗಳು ಕನ್ನಡಕ್ಕೆ ಹೊಸತು; ಬೇರೆ ಯಾವ ಕವಿಯಾದರೂ ಇಂಥ ಪ್ರಯೋಗಗಳನ್ನು ಮಾಡಿದ ಹಾಗೆ ತೋರುವುದಿಲ್ಲ" – ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

# ಅಧ್ಯಾಯ–7

## ಜಿ.ಎಸ್.ಎಸ್. ರವರ ಕಾವ್ಯ ಮತ್ತು ಭಾಷೆ

ಯಾವುದೇ ಕವಿ ಕಾವ್ಯದ ಭಾಷೆಗೆ ಸಂಬಂಧಪಟ್ಟಂತೆ ಕೆಲವು ಸಂಗತಿಗಳನ್ನು ಗಮನಿಸಬೇಕಾಗುತ್ತದೆ.

1. ಕವಿ ಕವನದ ಮೂಲಕ ವ್ಯಕ್ತಪಡಿಸುವ ಅರ್ಥಗಳಲ್ಲಿ ಅದರ ಭಾಷೆಯ ಸಂದರ್ಭದೊಳಗೆ ಪ್ರಕಟವಾಗುವಂತಿರಬೇಕು.

ಉದಾ: "ಶಚೀತೀರ್ಥದಾಳದಲ್ಲಿ

ಶಕುಂತಲೆಯಉಂಗುರ" (ಸ.ಕಾ.ಪು.325)

ಸಾಮಾಜಿಕ ಬದಲಾವಣೆ ಸಂದರ್ಭದೊಳಗೆ (ಶಕುಂತಳೆಯ ಉಂಗುರ) ತನಗೆ ತಾನೇ ವ್ಯಂಗ್ಯಾರ್ಥವೊಂದನ್ನು ಹೇಳಬಹುದು. ವ್ಯಂಗ್ಯರ್ಥವನ್ನು ಅದರ ತೀವ್ರತೆಯನ್ನು ಧ್ವನಿಸಲು ಬೇಕಾದ ಎಲ್ಲಾ ವಿವರಗಳು ದೊರೆಯಬೇಕು.

2. ಎರಡು ಸಾಲುಗಳ ಮೂಲಕ ಕವನ ಬೆಳವಣಿಗೆಯನ್ನು ಪಡೆಯಬೇಕು.
3. ಕವಿ ತಳೆಯುವ ನಿಲುವು ಕಾವ್ಯ ಭಾಷೆಯ ಸಂದರ್ಭದೊಳಗೆ ಸಿದ್ಧವಾಗಬೇಕು.

ಉದಾ: 'ಕವಿ–ಕವಿ' ಎಂಬ ಕವಿತೆಯಲ್ಲಿ ಜಿ.ಎಸ್.ಎಸ್.ರವರು ಆಧುನಿಕ ಕವಿಯ ಬಯಕೆಯನ್ನು ಪ್ರಕಟಿಸಿದ ರೀತಿ ಅಪ್ಯಾಯಮಾನ.

'ಇತಿಹಾಸದ ಚಿನ್ನದ ತೆರೆಯ ಹಾಳು ಕಪಾಟಿನ ತಾಳೆಗರಿ ಶೋಧಿಸಿ'. ಹುಡುಕಿ ಹೇಳಲಾರೆ, ನನಗೆ ಬೇಕಾದದ್ದು ಹೃದಯವಿರುವಂಥ ಕವಿ. ಕಾವ್ಯ ಮತ್ತು ಭಾಷೆ ಸಹೃದಯನ ಮೂಲಕವೇ ಸಾರ್ಥಕ ಪಡೆಯಬೇಕೆಂಬ ಆಶೆ. ಕೆಲವೊಮ್ಮೆ ಕವನದ ಸಾಲುಗಳು ವಂಗ್ಯಾರ್ಥ ಪೋಷಕನಾಗಿ ಬರದೇ ವಾಚ್ಯಾರ್ಥಕ್ಕೆ ನಿಂತಾಗ ಅದರ ಗೇಯಾಂಶ ಮುಖ್ಯವಾಗುತ್ತದೆ. ಈ ಸಂದರ್ಭದಲ್ಲಿ ಭಾಷೆಯನ್ನು ಗೇಯಾಂಶದಿಂದ ಪ್ರತ್ಯೇಕ ಮಾಡಿ, ತೋರಿಸಿದಾಗ ಹೆಚ್ಚಿನ ಕಾವ್ಯತ್ವ ಪ್ರಾಪ್ತವಾಗುವುದಿಲ್ಲ ಎನಿಸುತ್ತದೆ. ಹೀಗಾದಾಗ ಕವನದ ಶಿಲ್ಪ ಸಡಿಲಗೊಳ್ಳುತ್ತದೆ ಮತ್ತು ಬೆಳವಣಿಗೆಗೆ ಯಾವುದೇ ನಿರ್ಧಿಷ್ಟತೆ ಇರುವುದಿಲ್ಲ ಎನಿಸುತ್ತದೆ.

ಜಿ.ಎಸ್.ಎಸ್. ರವರ ಮೊದಲ ಕವನ ಸಂಕಲಗಲ್ಲಿಯ 'ಸಾಮಗಾನ','ಚೆಲುವು ಒಲವು', 'ದೇವಶಿಲ್ಪ' ಕವನಗಳಲ್ಲಿ ಗೇಯಾಂಶದ ಕಡೆಗೆ ಗಮನ ಹರಿದಂತೆ ಭಾಷೆಯ ಕಡೆಗೆ ಗಮನ ಹರಿದಿಲ್ಲ ಎಂಬುದನ್ನು ಸಾಮಗಾನ ಕವನ ಸಂಗ್ರಹಕ್ಕೆ ಕುವೆಂಪು ಬರೆದ ಮುನ್ನುಡಿಯಲ್ಲಿ ಅವರು ಹೇಳಿರುವ ಮಾತು ಗಮನಾರ್ಹ" ಯಾವ ಭಾಷೆ, ಯಾವ ಶೈಲಿ, ಯಾವ ಛಂದಸ್ಸು, ಯಾವ ಕಲ್ಪನಾ ವಿಲಾಸ,

ಯಾವ ಪದ'ಸಂಘಟನಾ, ಅಪೂರ್ವತೆ ಇವುಗಳನ್ನು ಕಷ್ಟದಿಂದ ಹಿರಿಯ ಕವಿಗಳು ತಮ್ಮ ಬದುಕಿನ ಮೂಸೆಯಲ್ಲಿ ಕಾಯಿಸಿ, ಕರಗಿಸಿ, ಎರಕಹೊಯ್ದರೋ ಆ ಪದಪುಂಜ ಈಗಿನ ಕವಿಗಳಿಗೆ ಸರಬರಾಜಿನ ವಸ್ತುಗಳಾಗಿವೆ". ಇವರ ದೃಷ್ಟಿಕೋನ ಗೇಯಾಂಶದ ಕಡೆಗೆ ಲಕ್ಷವಿರುವುದರಿಂದ ಪ್ರಾಸಬದ್ಧರಚನೆ, ಮಾತ್ರಾಗಣ ಅನುಸಾರವಾದ ಕವನದ ಸಾಲುಗಳ ವಿಭಜನೆ ಇಲ್ಲಿ ಮುಖ್ಯವಾಗುತ್ತದೆ.

ಬೆಳಕಲ್ಲದ ದಾರಿಯಲ್ಲಿ
ಪಾಳುಗುಡಿಯ ಸಾಲಿನಲ್ಲಿ
ಬಿರುಗಾಳಿಯ ಬೀಡಿನಲ್ಲಿ
ಕುರುಡು ಪಯಣ ಸಾಗುವಲ್ಲಿ? (ಸ.ಕಾ.ಪು...)

ಮೇಲಿನ ಉದಾಹರಣೆಯಲ್ಲಿ ಅಂತ್ಯಪ್ರಾಸ ಪ್ರತಿಸಾಲಿನಲ್ಲಿ 6+6 6+6 6+6 ಆರು ಮಾತ್ರೆಯ ಗಣ ಬರುತ್ತದೆ. ಮೇಲಿನ ಉದಾಹರಣೆಯಲ್ಲಿ ಕಂಡುಬರುವ ಪದಗಳ ಬಳಕೆಯಲ್ಲಿ 'ದಾರಿಯಲ್ಲಿ' ಸಾಲಿನಲ್ಲಿ', ಬೀಡಿನಲ್ಲಿ' ಆಡು ಮಾತಿಗಿಂತ ಬಿನ್ನವಾದ ರೂಪಗಳು ಬಳಕೆಯಾಗುತ್ತವೆ. ಆಡು ಮಾತಿಗೆ ಭಾಷೆ ತೀರ ಹತ್ತಿರವಾಗುತ್ತದೆ." ಗೇಯಾಂಶ ಕಡಿಮೆ ಆಗುತ್ತದೆ. ಒಂದೋಂದು ಸಾಲಿನಲ್ಲಿ ಪದಗಳು ಅರ್ಥದ ದೃಷ್ಟಿಯಿಂದ ಹೆಚ್ಚು ಸಹಜವಾಗುತ್ತದೆ. ಇಲ್ಲಿ 'ಬೆಳಕಿಲ್ಲದ ದಾರಿ, 'ಬಿರುಗಾಳಿಯ ಬಿಡು' 'ಕುರುಡು ಪಯಣ'– ಪದಗಳು ಕ್ರಮವಾಗಿ ಪ್ರಕೃತಿಯಲ್ಲಾದ ವ್ಯತ್ಯಾಸದ ಗುಣ ಮತ್ತು ವೇಗವನ್ನು ಹೇಳುತ್ತದೆ. ಕವನದ ಕೊನೆಯ ಸಾಲು–ಮೇಲಿನ ಸಾಲುಗಳ ಆಶಯವನ್ನು ಸೂಚಿಸಲು ಹಿಂದೆ ಬಿದ್ದಿದೆ ಅನ್ನಿಸುತ್ತದೆ. ಎರಡಕ್ಕೂ ಸಂಬಂಧ ಸೂಚಿಸುವಲ್ಲಿ ಕಾರ್ಯ–ಕಾರಣ ಕ್ರಿಯೆ ನಡೆಯಲು ನಿಧಾನಗತಿ ಎನಿಸಿದಾಗ ಕವನದ ಶಿಲ್ಪಕ್ಕೂ ಭಾಷೆಗೂ ನೇರವಾದ ಸಂಬಂಧವಿದೆ. ಆದರೆ ಶಿಲ್ಪದಲ್ಲಿ ಅಚ್ಚುಕಟ್ಟುತನವಿಲ್ಲದೆ ಭಾಷೆಯಲ್ಲಿ ಉಂಟು ಮಾಡುವ ಬದಲಾವಣೆಗಳು ಕವನದ ಶಿಲ್ಪಕ್ಕೆ ಹೆಚ್ಚಿನ ಸಹಾಯವನ್ನೇನೂ ಮಾಡುವುದಿಲ್ಲ ಎಂಬುದರ ಕಡೆಗೆ ಗಮನ ಹರಿಸಬೇಕಾಗುತ್ತದೆ.

'ನಾ ಬಂದೆ
ಮೊದಲ ಸ್ಪಂದನದಿಂದೆ,
ಅಂದಿನಿಂದಿಂದಿಗೂಸಾಕ್ಷಿಯೊಲುನಿಂದೆ' (ಸ.ಕಾ.ಪು.173)

'ನಾ ಬಂದೆ' ಎಂಬ ವಾಕ್ಯದ ಅರ್ಥ ಅಲ್ಲಿಗೇ ಮುಗಿಯದೆ ಮುಂದಿನ ಭಾಗದ ಅರ್ಥಗಳಿಗೆ ಕೊಂಡಿಯಾಗಿದೆ. 'ನಾ–ಎಂಬುದು ಭೂತ ಮತ್ತು ವರ್ತಮಾನದ ಘಟನೆಗಳೊಡನೆ ನೇರ ಸಂಬಂಧ ಪಡೆಯುತ್ತದೆ. ಇಲ್ಲಿಯ 'ಅಂದು' ಇಂದು ಗಳ ಮುಂದೆ ಕವನದಲ್ಲಿ ಪ್ರಯೋಗವಾದ ಭೂತ ಮತ್ತು

ವರ್ತಮಾನ ಕಾಲದ ಕ್ರಿಯಾರೂಪಗಳೊಡನೆ ಸಂಬಂಧ ಪಡೆಯುವುದರ ಮೂಲಕ ಅಲ್ಲಿನ ಘಟನೆಗಳಿಗೂ ಮತ್ತು 'ನಾ' ಕ್ಕು ಸಂಬಂಧ ಕಲ್ಪಿಸುತ್ತದೆ.

'ಅನಾವರಣ' ಸಂಕಲದಲ್ಲಿಯ ಬಹುತೇಕ ಕವನಗಳು ಆಕರ್ಷಣೀಯವಾಗಿವೆ. ಇದರಿಂದ ಓದುಗನ ಸಹೃದಯವನ್ನು ಆಕರ್ಷಿಸಿವೆ. ಈ ವಿಡಂಬನೆ ಇಲ್ಲಿನ ಭಾಷೆಯೊಳಗಿನಿಂದ ಸಿದ್ಧಿಸಿರುವುದಲ್ಲಿ, ಸಮಕಾಲೀನ ಸಾಮಾಜಿಕ ಸಂದರ್ಭಗಳಿಗನುಗುಣವಾಗಿ ಮತ್ತು ವ್ಯಕ್ತಿಗಳಿಗೂ ಅನ್ವಯವಾಗುವ ಹಾಗೆ ಸಾಧ್ಯವಾಗಿವೆ. 'ಅನಾವರಣವಾಯಿತಂತೆ' 'ರಾಷ್ಟ್ರಪಕ್ಷಿ' 'ಗಾಂಧೀಶತಮಾನೋತ್ಸವ' ಮುಂತಾದ ಕವನಗಳಲ್ಲಿ ವಿಡಂಬನೆಯ ತೀವ್ರತೆಯನ್ನು ಕಾಣಬಹುದು. 'ರಾಷ್ಟ್ರಪಕ್ಷಿ' ಕವನದ ಕರದಲ್ಲಿ ಬಂದು ಭಾಷಣ ಬೀದಿ ನಾಯಕರಿಲ್ಲವೇ! ಅವರೇ ಸಾಕು, ಇನ್ನಾರಿಗಿದೆ ಈ ಒಂದು ದಕ್ಷತೆ', ಎಂಬ ಸಾಲುಗಳೂ ಕವನದ ವ್ಯಂಗ್ಯದ ಜೊತೆಯಲ್ಲಿ ಸಾಮಾಜಿಕ ಸಂದರ್ಭವನ್ನು ಸೂಚಿಸುತ್ತಚೆ. ಇಂತಹ ಕವನಗಳು ಒಂದು ಕಲಾಕೃತಿಯೂ ಅಗುವುದರಲ್ಲಿ ಯಾವ ಸಂಶಯವೂ ಇಲ್ಲ. 'ಕುಲುವೆಯ ಒಳಗೆ ಕಿಡಿಯಿಲ್ಲ' – ಎಂಬ ಕವನವೂ ಸಹ ಸಾಮಾಜಿಕ ಸಂದರ್ಭ ಮಾತ್ರ ವ್ಯಕ್ತಿಯನ್ನು ತಂದು ಜೋಡಿಸುವ ಕೆಲಸವೂ ಆಗಿದೆ. ಇಲ್ಲಿ ಬಳಸಿದ ಭಾಷೆ ಬಹಳ ಪ್ರಭಾವಶಾಲಿಯಾದ, ಚಿತ್ರಗಳ ಮೂಲಕ ಸೂಚ್ಯವಾಗಿ ತಿಳಿಸುತ್ತಾ ಹೋಗುತ್ತದೆ.

'ಹಳೇಪೇಪರ್ ಖಾಲಿಶೀಶೆ' – ಕವನದ ಸಾಲುಗಳು ಹೀಗಿವೆ.

ಕಾಲಿಟ್ಟಡೆ ಖಾಲಿಶೀಶೆ

ಮೂಲೆತುಂಬ ಹಳೆಪೇಪರ್

ಇದನುಗುಡಿಸಿ ಇದನ್ನು ತೊಳೆದು

ಕೊಟ್ಟಾದರೂ ತೊಳೆಯಬೇಕು

ಹಳೆಯಹೊಲಸುಕಸವನು'
(ಸ.ಕಾ.ಪು.274)

6+6

6+6

3+3+4+3

6+6

3+3+4

ಕೊನೆಯ ಸಾಲಿನಲ್ಲಿ ಬಳಸಿದ 3+3+4– ಮಾತ್ರೆಗಳು – 'ಕಸವನ್ನು' ಎಂಬ ಪದ. ಉಳಿದ ಪದಗಳಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಇದೊಂದು ಸಂಕೇತಾರ್ಥವನ್ನು ಸೂಚಿಸುತ್ತದೆ. 'ಕಸವನು' – ಎಂಬುದು ಹೀನ ಪ್ರವೃತ್ತಿ, ದುಷ್ಟತನ ಎಂಬ ಅರ್ಥಗಳಿವೆ. 'ಹಳೆಯ ಹೊಲಸು ಕಸವನು' ಎಂಬುದು 'ಹಳೇಪೇಪರ್ ಖಾಲಿಶೀಶೆ' – ಎಂಬುದಕ್ಕೆ – ಸಮನಾಂತರವಾಗಿ ನಿಲ್ಲುತ್ತದೆ. ಈ ಸಾಲುಗಳು ಕವನ ಕೇಂದ್ರಾಕರ್ಷಣೆಯೂ ಆಗಿದೆ.

ಹೀಗೆ ಜಿ.ಎಸ್.ಎಸ್. ರವರು ಭಾಷೆಯ ಹಳೆಯ ರೂಪಗಳನ್ನು ಬಳಸಿದರೂ, ಅವರು ಕಾವ್ಯ ಪ್ರವೇಶ ಮಾತಿದ ಸಂದರ್ಭಕ್ಕನುಗುಣವಾಗಿ, ನವೋದಯ, ನವ್ಯತೆಯ ಗುಣಗಳನ್ನು, ವ್ಯಂಗ್ಯವನ್ನು, ಭಾಷೆಯನ್ನು ಕವನದ ಮೂಲಕ ಬಳಸಿಕೊಂಡರು. ಇದು ಕವಿಯೊಬ್ಬನಿಗೆ ಆಗುವ ಪ್ರಜ್ಞಾಪೂರ್ವಕ ಅರಿವು, ಒಂದಡೆ, ಭಾಷೆಯಕಡೆ ಗಮನ ಹರಿಸಿದರೆ, ಮತ್ತೊಂದೆಡೆ ಸಮಾಜ, ಮಗದೊಂದೆಡೆ ವ್ಯಕ್ತಿ ಹೀಗೆ ಎಲ್ಲವನ್ನು ಕವಿ ಗಮನಿಸಬೇಕಾಗುತ್ತದೆ.

# ಅಧ್ಯಾಯ–8

## ಜಿ.ಎಸ್.ಎಸ್. ಅವರೊಡನೆ ಒಂದು ಸಂವಾದ

ನಾನು ಯುಜಿಸಿಯಿಂದ ಜಿ.ಎಸ್.ಎಸ್.ರವರ – 'ಕಾವ್ಯಶಿಲ್ಪ' ವನ್ನು ಸಂಶೋಧನೆಗೆ ಆರಿಸಿಕೊಂಡಾಗ ಡಾ.ಎಸ್.ನಟರಾಜುರವರು ಜಿ.ಎಸ್.ಎಸ್. ಅವರನ್ನು ಒಂದು ಸಾರಿ ಸಂದರ್ಶನ ಮಾಡಿ ಎಂದು ಅವರ ದೂರವಾಣಿ ಸಂಖ್ಯೆಯನ್ನು ಕೊಟ್ಟರು. ನಾನು ಅವರಿಗೆ ಪೋನ್ ಮಾಡಿದಾಗ ಅವರ ಪತ್ನಿ ಪೋನು ತೆಗೆದುಕೊಂಡು ಸಂಜೆ 4 ಗಂಟೆಗೆ ಬನ್ನಿ ಎಂದರು. ಅಂದು ನಾನು ಅವರ ಮನೆಗೆ ಹೋದಾಗ ಜಿ,ಎಸ್.ಎಸ್.ನಿದ್ರೆಯಲ್ಲಿದ್ದರು. ಸ್ವಲ್ಪ ಸಮಯ ಕಾದು 5.00 ಗಂಟೆಗೆ ಅವರ ಮನೆ ಹೊಕ್ಕವು. 5 ನಿಮಿಷದ ನಂತರ ಜಿ.ಎಸ್.ಎಸ್. ಒಬ್ಬ ಸಹಾಯಕನೊಂದಿಗೆ ಬಂದರು. ನಮಸ್ಕಾರ ಎಂದು ಹೇಳಿ ಪರಿಚಯ ಮಾಡಿಕೊಂಡೆನು. ಬಹಳ ಸಂತೋಷವನ್ನು ವ್ಯಕ್ತಪಡಿಸಿದರು. ಏನು ವಿಚಾರ ಎಂದರು. ಸಾರ್ ನಾನು ಯುಜಿಸಿ.ಯಿಂದ ಒಂದು ಪ್ರಾಜೆಕ್ಟ್ ತೆಗೆದುಕೊಂಡಿದ್ದೇನೆ. ವಿಷಯ 'ಜಿ.ಎಸ್.ಎಸ್.ಕಾವ್ಯಗಳಲ್ಲಿ ಕಾವ್ಯಶಿಲ್ಪ ಎಂದು ಹೇಳಿದೆನು.

ನಾನು ಕಾವ್ಯಶಿಲ್ಪದ ಬಗ್ಗೆ ಮಾತನಾಡಲು ತಮ್ಮ ಬಳಿಗೆ ಬಂದಿದ್ದೇನೆ ಎಂದಾಗ, ಜಿ.ಎಸ್.ಎಸ್. ಅವರು ತಮ್ಮ ಮನಸ್ಸಿನಲ್ಲಿದ್ದ ಭಾವನೆಗಳನ್ನು ಪಟಪಟನೆ ಹೇಳುತ್ತಾ ಹೋದರು. ಸ್ವಲ್ಪ ಅಸ್ಪಷ್ಟ ಧ್ವನಿ ಇದ್ದ ಕಾರಣ ನಾನು ಗ್ರಹಿಸಿದ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಜಿ.ಎಸ್.ಎಸ್. ಸಾಮಗಾನದಿಂದ ದೀಪದ ಹೆಜ್ಜೆಯವರೆಗೆ ಓದುವ ಕ್ರಮದಲ್ಲಿ ಬದಲಾಯಿತು. ನಾನು ನವ್ಯಕಾಲದ ಪ್ರೇರಣೆಯನ್ನು ಪಡೆದಿದ್ದೇನೆ. ವ್ಯಕ್ತಮಧ್ಯ, ಚಕ್ರಗತಿಯಲ್ಲಿನ ಲಯಗಾರಿಕೆ ಮತ್ತು ಚತುಷ್ಪದಿ ಫಾರಂ ಅನ್ನು ಬಳಸಿಕೊಂಡಿದ್ದೇನೆ. ಹಾಡುಗಾರಿಕೆಯಲ್ಲಿ ಚತುಷ್ಪದಿಯನ್ನು ಕಣ್ಣಿಗೆ ಕಟ್ಟುವ ಹಾಗೆ ಬರೆದಿದ್ದಾರೆ ಎಂದು ಟಿ.ವಿ.ವೆಂಕಟಾಚಲಶಾಸ್ತ್ರಿ ಮತ್ತು ಎಂ.ಎಂ..ಕಲಬುರ್ಗಿಯವರು ಪತ್ರ ಬರೆದಿದ್ದಾರೆ ಎಂದರು. ಪದ್ಯದಿಂದ ಗದ್ಯಕ್ಕೆ ನಾನು ಪಂಪನಿಂದ ಪ್ರೇರಣೆಯನ್ನು ಪಡೆದುಕೊಂಡಿದ್ದೇನೆ. ಸ್ಟ್ರಚ್ಚರ್ ಬಗ್ಗೆ ಕಾವ್ಯ ಏನು ಹೇಳುತ್ತದೆ ಎಂದರೆ ಭಾಷೆ, ಶಿಲ್ಪ, ಸೊಗಸು, ಛಂದಸ್ಸು, ಲಯಗಾರಿಕೆ ಇವೆಲ್ಲಾ ಬಹಳ ಮುಖ್ಯ ಕಾವ್ಯಶಿಲ್ಪ ಓದುಗರಿಗೆ ಏನನ್ನು ಕೊಡುತ್ತವೆ ಎಂಬುದು ನನಗೆ ಇನ್ನೂ ಅರ್ಥವಾಗಿಲ್ಲ ಎಂದರು.

**ಪ್ರಶ್ನೆ–ಕಾವ್ಯಶಿಲ್ಪವನ್ನು ನೀವು ಹೇಗೆ ಅರ್ಥೈಯಿಸುವಿರಿ?**

1. ಪುರಾಣಪ್ರಸಂಗಗಳನ್ನು ನೋಡುವ ದೃಷ್ಟಿಕೋನ
2. ಪರಂಪರೆಗೆ ಸ್ಪಂದಿಸುವ ರೀತಿ.
3. ಮಾನವೀಯತೆಯ ದೃಷ್ಟಿಕೋನ

4. ಆಧುನಿಕ ಯುಗದಲ್ಲಿ ಮೌಲ್ಯಗಳನ್ನು ಅರಗಿಸಿಕೊಳ್ಳುವ ಕ್ರಮ.

ಮನುಷ್ಯನ ಅಸಾಯಕತೆಯ ಸ್ಪಂದನ: ಗೊಮ್ಮಟೇಶ್ವರನ ಎದುರು ನಿಂತು ತುಡಿಯುವ ಮನುಷ್ಯನ ಆಕಾಂಕ್ಷೆಯನ್ನು ಅಭಿವ್ಯಕ್ತಿಸುತ್ತದೆ. 'ಕಾಡಿನಲ್ಲಿ ಕತ್ತಲೆ', 'ಕವಿತೆ' ಕವನಗಳಲ್ಲಿ ಮುಗ್ಧರನ್ನು ಹೇಗೆ ಬಲಿತೆಗೆದು ಕೊಳ್ಳುತ್ತದೆ ಎಂಬ ಚಿತ್ರವಿದೆ. 'ಜಡಿಮಳೆಯ ಇರುಳಿನಲ್ಲಿ'– ಮನುಷ್ಯನ ನಂಬಿಕೆಯನ್ನು ಪ್ರೀತಿಸುವ ಮೋಡಿ ಮಾಡುವ ಪ್ರಯತ್ನ, ನಂಬಿಕೆ ಗಟ್ಟಿಯಾದದ್ದು ಅಥವಾ ಟೊಳ್ಳು ಎಂಬುದನ್ನು ಚಿತ್ರಿಸುತ್ತದೆ. 'ಅಸ್ತಮಾನ' ಕೃಷ್ಣನ ಕೊನೆಯ ದಿನಗಳನ್ನು ನೆನಪಿಸುತ್ತದೆ. 'ಚರಿತ್ರೆ' ಅಂದರೆ? ಇರುವುದಷ್ಟೆ ಅಲ್ಲ ನಡೆಯುತ್ತಿರುವುದು 'ಯುಗಾದಿ' ಸೃಷ್ಟಿಯ ಸೃಜನಶೀಲತೆಯನ್ನು ಕುರಿತದ್ದು ಜಗತ್ತು ಸೃಜನಶೀಲವಾಗಿ ಮುಂದುವರೆಯಬೇಕು. ಮನುಷ್ಯ ಇದರಲ್ಲಿ ಸ್ಪರ್ಧಿಯಾಗಬೇಕು, ಸೃಜನಶೀಲತೆಯ ವೈಭವೀಕರಣವೇ ನಾನು ಹಲವಾರು ಯುಗಾದಿ ಪದ್ಯಗಳನ್ನು ಬರೆಯಲು ಕಾರಣವಾಯಿತು. ದೇವರು, ಧರ್ಮ, ಜಾತಿ ಇವುಗಳನ್ನು ನಾನು ಒಪ್ಪುವುದಿಲ್ಲ, ಇವುಗಳನ್ನು ಮೀರುವ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದರು.

"ಕಾವ್ಯಶಿಲ್ಪ" – ಕೈಗೆಟುಕದ ವಿಚಾರ, ಶಿಲ್ಪವನ್ನು Define ಮಾಡಬೇಕು ಎಂದು 'ಹೊಸಹುಟ್ಟು' ಕವಿತೆಯಲ್ಲಿ ಇದನ್ನು ಸ್ಪಷ್ಟಪಡಿಸಿದ್ದೇನೆ.

ನಾನೊಲ್ಲೆ
ಕೈಮುಗಿದು ಹೇಳಿದನು ಮನು ನಾನೊಲ್ಲೆ
ಇರುವ ಈ ಎಲ್ಲವನ್ನೂ ನಿರ್ನಾಮಗೊಳಿಸಿ
ನಾಳಿನ ದಿವಸ ನಾನು ನನ್ನ ಪರಿವಾರ
ಉಳಿದು ಬದುಕುವ ಭಾಗ್ಯ ನನಗೆ ಬೇಡ
ನೀ ವರ್ಣಿಸಿದ ವಾಸ್ತಾವದ ಒಂದಂಶ
ನಾನು ಕೂಡ.
ಕೊಚ್ಚಿಲಿ ಬಿಡು ನನ್ನನ್ನೂ ಸೇರಿಸಿಕೊಂಡು
ಈ ಮಹಾ ಪ್ರವಾಹ
ನನಗಿಲ್ಲ ನಾನೊಬ್ಬನೇ ಬದುಕುವ ದಾಹ
ನಾಳೆ ಬೆಳೆದೀತು ಹೊಸಮಣ್ಣಿನಲ್ಲಿ ಬೇರೂರಿ
ನನ್ನಲ್ಲಿರುವ ಒಳ್ಳಿತೇನಾದರೂ

ಕೊಂಬೆ – ರೆಂಬೆಗೆಪುಟಿದುಹೊಸಹೂವು–ಚಿಗುರು

(ಸ.ಕಾ.ಪು.491)

ಏನೆಂದರೆ ಇಲ್ಲಿ ಕವಿತೆ ಬದಲಾಗಿ ಇವತ್ತಿನ ಮನು ಪ್ರಾಚೀನ ಮನು ಅಲ್ಲ. ಬದುಕಿನ ಬದಲಾವಣೆಗಳಲ್ಲಿ ನಂಬಿಕೆ ಇರುವ ಮನುಷ್ಯ. ಆ ಬದಲಾವಣೆ ಹೇಗೆ ಅಂದರೆ ತನ್ನಿಂದಾಚೆಯ ಜಗತ್ತು ಕೆಟ್ಟು ಹೋಗಿದೆ ಎಂದು ಮಾತನಾಡುತ್ತಾ ಹೊಸ ಜಗತ್ತಿನ ಹರಿಕಾರನಾಗಿ ನಿಲ್ಲುತ್ತಾನೆ. ಜಗತ್ಪ್ರಳಯವಾಗುತ್ತದೆ. ಜಗತ್ತಿನಲ್ಲಿ ಉತ್ತಮವಾದದ್ದನ್ನು ಸಂಗ್ರಹಿಸಿಕೊಂಡು ಸಿದ್ಧನಾಗು. ಹಡಗನ್ನು ಕಟ್ಟಿಕೋ ಹೊರಡು ಎಂದು ಆಶ್ವಾಸನೆ ನೀಡುತ್ತಾನೆ. ಜಗತ್ತು ಬದಲಾಗಬೇಕು ಅನ್ನುವವರು ಮೊದಲು ಅವರು ಬದಲಾಗಬೇಕು. ಪುರಾಣವನ್ನು ಒಡೆದುಕಟ್ಟುವ ಕೆಲಸ ಆಗಬೇಕು. ಹೀಗೆ ಕವನದಿಂದ ಕವನಕ್ಕೆ ಹೇಳುತ್ತಾ ಹೋದರು. ಬಹಳ ಸುಸ್ತಾದಂತೆ ಕಂಡರು. ಅವರನ್ನು ನೋಡಿದ ಮಾತ’ನಾಡಿದ ಭಾಗ್ಯ ನನಗೆ ಸಿಕ್ಕಿತು ಎಂಬ ಹರ್ಷದಿಂದ ಅವರಿಗೆ ನಮಸ್ಕಾರಗಳನ್ನು ಹೇಳಿ ಹೊರಟೆನು.

# ಅಧ್ಯಾಯ–9

## ಉಪಸಂಹಾರ

ಜಿ.ಎಸ್.ಎಸ್. ಅವರು ಜನಮೆಚ್ಚಿದ ಕವಿಗಳಲ್ಲಿ ಒಬ್ಬರು. ಕಾರಣ ಅವರ ಸರಳತೆ, ನೇರನುಡಿಗಳಿಂದ ಓದುಗನಿಗೆ ಸಂವಹಗೊಳಿಸುವ ಪಾರದರ್ಶಕ ಗುಣದಿಂದ ಎಂದು ಸ್ಪಷ್ಟವಾಗುತ್ತದೆ. ಸುಮಾರು 60 ವರ್ಷಗಳ ಸಾಹಿತ್ಯ ರಚನೆಯಲ್ಲಿ ಕಾವ್ಯ, ಗದ್ಯ, ಮೀಮಾಂಸೆ, ವಿಮರ್ಶೆ, ಪ್ರವಾಸ ಸಾಹಿತ್ಯ ಹೀಗೆ ಹಲವಾರು ಪ್ರಕಾರಗಳಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪ್ರಸಿದ್ದ ಕವಿಗಳ ಪ್ರಭಾವ ಮತ್ತೆ ಪ್ರೇರಣೆಗೆ ಒಳಗಾಗಿದ್ದರೂ ಸ್ವಂತಿಕೆಯನ್ನು ರೂಡಿಸಿಕೊಂಡಿದ್ದಾರೆ. ನಾನು ನನ್ನ ಪ್ರಬಂಧ 'ಕಾವ್ಯಶಿಲ್ಪ'ವನ್ನು ಹೇಳ ಹೊರಟಿದ್ದರೂ ಕೆಲವೊಮ್ಮೆ ಸಾಮಾಜಿಕ ಅನ್ವೇಷಣೆ, ಕವಿತೆಯ ವಿಮರ್ಶೆಗೆ ಅರಿವಿಲ್ಲದೆ ತೊಡಗಿಸಿಕೊಂಡಿದ್ದೇನೆ. ಅದು ನನ್ನ ಮಿತಿಯೂ ಇರಬಹುದು. ಏನೇ ಆದರೂ ಕಾವ್ಯ ಶರೀರದ ಅರ್ಥವನ್ನು ಹೇಳುವ ಸಂದರ್ಭದಲ್ಲಿ ಕಾವ್ಯ ನಿಗೂಢಾರ್ಥದ ಕಡೆಗೆ ನನ್ನ ಮನ ಒಲಿದಿರಬಹುದು. ಹಾಗೆಯೇ ಭಾಷೆ, ಲಯ, ಛಂದೋ ವೈವಿಧತೆ, ಸಂಗೀತದ ಗುಣ ಇವುಗಳನ್ನು ದಾಖಲಿಸುವ ಪ್ರಯತ್ನ ನಡೆದಿದೆ ಅಷ್ಟೇ.

ಸಾಮಗಾನದಿಂದ–ದೀಪದ ಹೆಜ್ಜೆವರೆಗಿನ ಕವನಸಂಕಲನಗಳ ಹಾದಿಯಲ್ಲಿ ಆಗಿರುವ ಬದಲಾವಣೆಯನ್ನು ತರುವ ಪ್ರಯತ್ನವಿದೆ. ಕವಿತೆಗಳ ಪ್ರಯೋಗದಲ್ಲಿ ಬಂಧ ಮತ್ತು ಆಕೃತಿಗಳ ಬದಲಾವಣೆ ಎದ್ದು ಕಾಣುತ್ತದೆ. ಇವರ ಒಟ್ಟು ಕವನ ಸಂಕಲನಗಳಲ್ಲಿ ಎರಡು ಗುಣವನ್ನು ಕಾಣಬಹುದು.

1. ಜೀವ ಸಮ್ಮೃದ್ಧಿ ಪ್ರಕೃತಿ
2. ಮಾನವ ಕೇಂದ್ರಿತ ಸಮಾಜ

ನವೋದಯ ಕಾವ್ಯ ಲಕ್ಷಣವಾದ ಪ್ರಕೃತಿಯ ಗುಣವನ್ನು ಮೀರಲು ಸಾಧ್ಯವಿಲ್ಲ. ಇದರ ನಿಯತಲಯಗಳು ಸದಾ ಆಕರ್ಷಣೆ ಮುಖ್ಯವಾದದ್ದು. ಮತ್ತೇ ಮತ್ತೇ ಅದರ ವರ್ಣನೆಗೆ ಸದಾ ಮರಳಿ ಬರುತ್ತಾರೆ. ಪ್ರಕೃತಿ ಸಹಜವಾದ ಕುತೂಹಲ, ಉತ್ಸಾಹ, ವಿಸ್ಮಯ, ಪರಿವರ್ತನೆ, ಇವುಗಳನ್ನು ವರ್ಣಿಸಿದರೆ ಇದಕ್ಕೆ ವಿರುದ್ಧವಾಗಿ ಸಮಾಜದಲ್ಲಿ ಮಾನವ ಭಿನ್ನತೆ, ಕ್ರೋಧ, ಸಮರಸವಿಲ್ಲದ ಜೀವನ ಇವುಗಳನ್ನು ಚಿತ್ತಿಸಿದ್ದಾರೆ. ಅಲ್ಲದೆ ಪುರಾಣಗಳಿಂದ, ವಾಸ್ತವತೆಯಿಂದ ಚರಿತ್ರೆಯಿಂದ ಹಲವಾರು ಕವನಗಳಲ್ಲಿ ಪ್ರಸ್ತುತತೆಯನ್ನು ವ್ಯಂಗ್ಯವಾಗಿ ಚಿತ್ರಿಸುವಲ್ಲಿ ಸಮರ್ಥವೆನಿಸಿವೆ. ಸಂಕೇತಗಳ ಮೂಲಕ ಕಟಕಿಯ ಮಾತುಗಳನ್ನು ಆಡಿದ್ದಾರೆ. ಕೆಲವು ಬಿಡಿಕವನಗಳು, ನೀಳ್ಗವನಗಳು, ಚುಟುಕುಗಳು ರಚಿಸಿದ್ದಾರೆ.

ಜಿ.ಎಸ್.ಎಸ್.ರವರು ಕವನದ ಬಂಧದ ಮೂಲಕ ಅರ್ಥವನ್ನು ಗ್ರಹಿಸುವ ಪ್ರಯತ್ನದಲ್ಲಿ ಮುಕ್ತಛಂದಸ್ಸಿನ ಕವಿತೆಗಳನ್ನು ರಚಿಸಿದ್ದಾರೆ. ಮುಕ್ತಛಂದದಲ್ಲಿ ಅರ್ಥಲಯಾನುಸಾರಿಯಾಗಿ, ಮಾತಿನ ದಾಟಿಯನ್ನು ರೀತಿಗಳನ್ನು ಮೈಗೂಡಿಸಿಕೊಂಡಿರುವುದನ್ನು ಕಾಣುತ್ತೇವೆ. ಕವಿ ತನ್ನ ಕವಿತೆಯಲ್ಲಿ ಯಾರಿಗೋ ಹೇಳುತ್ತಿರುವ ಧಾಟಿಯೇ ಬೆಳೆದ ಕಾವ್ಯಮಾರ್ಗದಲ್ಲಿ ದಟ್ಟವಾಗುವುದನ್ನು ಕಾಣುತ್ತೇವೆ. ಮೊದಮೊದಲು ನಡುಗನ್ನಡದ ಹಲವು ರೂಪಗಳನ್ನು ಕವಿ ಬಳಸುವುದಾದರೂ, ಆನಂತರದಲ್ಲಿ ಶಿಷ್ಟ ಕನ್ನಡವನ್ನು ಮುಖ್ಯವಾಗಿ ಬಳಸಿದ್ದಾರೆ. ಶಿಷ್ಯ ಕನ್ನಡದ ಲಯವಿನ್ಯಾಸಗಳು ಭಾಷೆಯ ಮುಖ್ಯ ಆಸಕ್ತಿಯಾಗಿವೆ. ಈ ಸಂಬಂಧದಲ್ಲಿ ಸಂಭಾಷೆಯ ನೆಲೆ ಒಂದಾದರೆ, ಶುದ್ದ ಕಾವ್ಯದ ನೆಲೆ ಇನ್ನೊಂದು. ಉದಾ: ಮುಂಬೈ ಜಾತಕ, ನಂತರದ ಕವಿತೆಗಳಲ್ಲಿ ಇವೆರಡನ್ನೂ ಮೀರಿದ ಅಪೇಕ್ಷಣಿಯ ಭಾಷೆಯನ್ನು ಕವಿ ಬಳಸಿದ್ದಾರೆ.

ಜಿ.ಎಸ್.ಎಸ್.ರವರ ಕಾವ್ಯ ಶಿಲ್ಪವನ್ನು ಕುರಿತು ಮಾತನಾಡುವಾಗ ವಸ್ತು ರೂಪ, ಶೈಲಿ, ಛಂದಸ್ಸು ಇವುಗಳ ಸೂಕ್ಷ್ಮತೆಯ ದೃಷ್ಟಿಯಿಂದ ಅಧ್ಯಯನ ನಡೆಸಲಾಗಿದೆ. ಕವಿತೆ ಮೂಲತಃ ಶಬ್ದಾರ್ಥಗಳ ಒಂದು ವಿಶಿಷ್ಟ ರೀತಿಯ ಕಟ್ಟಡ. ಕವಿತೆಯ ಸಂದರ್ಭದಲ್ಲಿ ಬಂಧ ಎಂದರೆ ನಿಯತವಾದ ಪದ್ಯಬಂಧ 'ಚಕ್ರಗತಿ' ಎಂಬ ಕವನ ಸಂಕಲನದಲ್ಲಿ 'ಪದ್ಯಬಂಧದ ಹೊಸ ಪ್ರಯೋಗಗಳು ನಡೆದಿವೆ. ಈ ಪ್ರಯೋಗಗಳ ಲಕ್ಷಣವೆಂದರೆ ಪರಿಚಿತವಾದ ಹಾಗೂ ಸಮೃದ್ಧವಾದ 'ಚತುಷ್ಪದಿ' ಪದ್ಯಬಂಧವನ್ನು ಅದರ ಚೌಕಟ್ಟನ್ನು ದಾಟಿಸಿ ಪದ್ಯದಿಂದ ಪದ್ಯಕ್ಕೆ ಮುಂದುವರಿಸುವ ಪ್ರಯತ್ನವನ್ನು ಕಾಣಬಹುದು. ಇದನ್ನು ಕವಿ 'ಮುಕ್ತಛಂಧ' ಎಂದು ಕರೆದಿದ್ದಾರೆ. ಇದರಲ್ಲಿ ಇಡೀ ಕವನವೇ ಒಂದು ಶಿಲ್ಪದಂತೆ ಕಾಣುತ್ತದೆ ಎನ್ನಬಹುದು. ಸಾಮಾನ್ಯವಾಗಿ ಹೊಸಗನ್ನಡ ಕವಿತೆಯಲ್ಲಿ ಮಾತ್ರಾಬಂಧಗಳ ಚತುಷ್ಪದಿಗಳ ಕಟ್ಟಡದಿಂದಾಗಿದ್ದು, ಆ ಚತುಷ್ಪದಿಗಳು ಒಂದೊಂದು ಪ್ರತ್ಯೇಕ ಸಂಪೂರ್ಣ ಅರ್ಥದ ವಾಕ್ಯಘಟಕಗಳಾಗಿರುತ್ತವೆ. ಜಿ.ಎಸ್.ಎಸ್.ರವರ ಈ ರೀತಿ ಪ್ರಯೋಗಗಳು ಹೊಸದಾಗಿದೆ ಎಂದು ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಒಪ್ಪಿಕೊಂಡಿದ್ದಾರೆ.

ಒಟ್ಟಿನಲ್ಲಿ ಜಿ.ಎಸ್.ಎಸ್. ಅವರ ವ್ಯಕ್ತಿತ್ವನ್ನು ಗಮನಿಸಿದಾಗ ಆದರ್ಶ ಮತ್ತು ಆಶಾವಾದ ಅವರ ವ್ಯಕ್ತಿತ್ವದ ಪ್ರಧಾನ ಅಂಶಗಳಂತೆ ತೋರುತ್ತದೆ. ವ್ಯಷ್ಠಿ ಹಿತಾಕಾಂಕ್ಷೆಯನ್ನು ಬದಿಗೊತ್ತಿ ಸಮುದಾಯ ಹಿತವನ್ನು ಬಯಸುವ ಆದರ್ಶ ಶಿವರುದ್ರಪ್ಪನವರ ವ್ಯಕ್ತಿತ್ವದಲ್ಲಿದೆ. ಶ್ರೇಷ್ಠವಾದದ್ದನ್ನು ಗೌರವಿಸುವ ಗುಣ ಇವರದ್ದು ಎಲ್ಲಾ ಪಂಥಗಳನ್ನು ಮೀರಿದ ಸಾಂಸ್ಕೃತಿಕ ವ್ಯಕ್ತಿತ್ವವೊಂದನ್ನು

ಪಡೆದುಕೊಂಡಿದ್ದಾರೆ. ಹಾಗೆಯೇ ಸಂಸ್ಕೃತಿ, ಸಮಾಜ, ಸಂವೇದನೆ ಜಡವಾಗದ ಹಾಗೆ ನೋಡಿಕೊಳ್ಳುವುದೇ ಇವರ ಒಂದು ವಿಶಿಷ್ಟತೆ. ಆದರೆ ಇದೇ ಸಂಶೋಧನೆ ಅಂತಿಮವಲ್ಲ ಇದೊಂದು ಸಂಶೋಧನೆಯ ವಿಧಾನ ಮಾತ್ರ. ಇದರ ನಂತರವೂ ಸಂಶೋಧನೆ ಬರಬಹುದು ಯಾವುದಕ್ಕೂ ಅಂತಿಮ ಎಂಬುದು ಇಲ್ಲ.

## ಆಕರ ಗ್ರಂಥಗಳು


1) ಡಿ.ಕೆ.ಶಾಮಸುಂದರರಾವ್ (ಸಂ) – ಜಿ.ಎಸ್.ಎಸ್. ಸಮಗ್ರ ಕಾವ್ಯ–ಕಾಮಧೇನು ಪುಸ್ತಕ ಭವನ, ಬೆಂಗಳೂರು–2011.

2) ಡಾ.ಹೆಚ್.ಎಸ್.ರಾಘವೇಂದ್ರರಾವ್ – (ಸಂ.ಕೃತಿ) ಹಾಡೆ ಹಾದಿಯ ತೋರಿತು ನೇತ್ರಾ ಪ್ರಿಂಟರ್ಸ್, ಬೆಂಗಳೂರು–1996.

3) ಡಾ.ಎ.ಎಸ್.ಶಂಕರನಾರಾಯಣ(ಸಂ) ಆಕಾಶದೀಪ ಅಭಿನಂದಾನ ಗ್ರಂಥ, ಕಾವ್ಯ ಪ್ರಕಾಶನ, ಬೆಂಗಳೂರು.2008.

4) ಎ.ಎಸ್.ಶಂಕರನಾರಾಯಣ ಡಿ.ಎಸ್.ನಾಗಭೂಷಣ, ಡಾ.ಎಸ್.ನಟರಾಜು – ಸಂಪಾದಕರು, ಹಣತೆ ಅಭಿನಂದಾನ ಗ್ರಂಥ, ಲೋಹಿಯ ಪ್ರಕಾಶನ, ಬೆಂಗಳೂರು.2001.

5) ಸ್ನೇಹ ಕಾರ್ತಿಕ (ಸಂ) ಅಭಿನಂದಾನ ಗ್ರಂಥ – 1997.

6) ಗೌರವ ಜಿ.ಎಸ್.ಎಸ್.–75 ಅಬಿನಂದನಾ ಗ್ರಂಥ–2001.

7) ಜಿ.ಎಸ್.ಎಸ್.(ಲೇ) ಸಮಗ್ರ ಗದ್ಯ ಸಂಪುಟ 1,2,3–ಕಾಮಧೇನು ಪ್ರಕಾಶನ, ಬೆಂಗಳೂರು–1996.

8) ಡಿ.ಆರ್.ನಾಗರಾಜ್ – ಅಮೃತ ಮತ್ತು ಗರುಡ–ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

9) ಪಿ.ಲಂಕೇಶ್ – ಸಾಹಿತಿ, ಸಾಹಿತ್ಯ ವಿಮರ್ಶೆ, ಲಂಕೇಶ್ ಪ್ರಕಾಶನ ಬೆಂಗಳೂರು–2010.

10) ಎಲ್.ಎಸ್.ಶೇಷಗಿರಿರಾವ್–ಹೊಸಗನ್ನಡ ಸಾಹಿತ್ಯ ಚರಿತ್ರೆ – ಅಂಕಿತಪ್ರಕಾಶನ, ಬೆಂಗಳೂರು–1999.

11) ಡಾ.ಹೆಚ್.ಎಸ್.ವೆಂಕಟೇಶಮೂರ್ತಿ – ವಿಮರ್ಶಾ ಸಂಪುಟ, ದಿವ್ಯ ಪ್ರಿಟರ್ಸ್, ಬೆಂಗಳೂರು–2011.

12) ಪ್ರೊ.ಸಿ.ಎನ್.ರಾಮಚಂದ್ರನ್ – ಬಯಲುರೂಪ– ಕನ್ನಡ ಬುಕ್ ಏಜನ್ಸಿ, ಬೆಂಗಳೂರು–2006.

13) ಜಿ.ಎಸ್.ಎಸ್(ಸಂ.) ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಪ್ರಸಾರಾಂಗ, ಬೆಂಗಳೂರು–1999.

14) ಜಿ.ಎಸ್.ಎಸ್.–ಸೌಂದರ್ಯ ಮೀಮಾಂಸೆ– ಶಾರದ ಪ್ರಕಾಶನ, ಬೆಂಗಳೂರು –1982.

15) ಜಿ.ಎಸ್.ಎಸ್. ಕಾವ್ಯರ್ಥ ಚಿಂತನ–ರೋಹಿಣೀ ಪ್ರಿಂಟರ್ಸ್, ಬೆಂಗಳೂರು –1983.

16) ಓ.ಎಲ್.ನಾಗಭೂಷಣ– –ವಿಮರ್ಶೆಯ ಪರಿಭಾಷೆ–ಅಂಕಿತಪ್ರಕಾಶನ ಬೆಂಗಳೂರು–1998.

17) ತೀ.ನಂ.ಶ್ರೀ – ಸಮಾಲೋಕನ ಗೀತಾ ಬುಕ್ಕ ಹೌಸ್, ಮೈಸೂರು.

18) ಡಿ.ಆರ್.ನಾಗರಾಜ್–ಅಲ್ಲಮಪ್ರಭು ಮತ್ತು ಶೈವಪ್ರತಿಭೆ ಅಕ್ಷರ ಪ್ರಕಾಶನ, ಹೆಗ್ಗೋಡು–2001.

19) ತೀ.ನಂ.ಶ್ರೀ–ಭಾರತೀಯ ಕಾವ್ಯಮೀಮಾಂಸೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2006.

20)ಡಾ.ವೀರಣ್ಣ ದಂಡೆ–ಕನ್ನಡ ಕಾವ್ಯ ಮೀಮಾಂಸೆ–ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2006.

21) ಡಾ.ನರಹಳ್ಳಿ ಬಾಲಸುಬ್ರಮಣ್ಯ –ಇಹದ ಪರಿಮಳದ ಹಾದಿ–ಅಂಕಿತ ಪ್ರಕಾಶನ ಬೆಂಗಳೂರು–2006.

22.)ಜಿ.ಎಸ್.ಎಸ್.–ಪಂಪ ಒಂದು ಅಧ್ಯಯನ. ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು–1974.

23) ಹೆಚ್.ನಂಜೇಗೌಡ, ಕುವೆಂಪು –ಸೂಕ್ತಿಸುಧಾ – ಕಾಲೇಜು ಬುಕ್ ಹೌಸ್, ಬೆಂಗಳೂರು–2011.

24)ಕುವೆಂಪು ತಪೋನಂದನ – ಉದಯರವಿ ಪ್ರಕಾಶನ ಮೈಸೂರು – 1995.

25) ಡಾ.ಯು.ಆರ್.ಅನಂತಮೂರ್ತಿ – ನವ್ಯಾಲೋಕ ರಾಜಾಪವರ್ ಹೌಸ್ 2002.

26)ಡಾ.ಪಿ.ವಿ.ನಾರಾಯಣ ಪ್ರೊ.ಎಂ.ಪ್ರಸನ್ನಕುಮಾರ್ ಸಂಪಾದಕರು ಸಾಹಿತ್ಯ ಸಂಪದ–ಪ್ರಸಾರಾಂಗ, ಬೆಂಗಳೂರು–2001.

27)ಡಾ.ಡಿ.ಆರ್.ನಾಗರಾಜ್ – ಶಕ್ತಿ ಶಾರದೆಯ ಮೇಳ, ಅಕ್ಷರಪ್ರಕಾಶನ, ಹೆಗ್ಗೋಡು–2002.

28)ವಿ.ಕೆ.ಗೋಕಾಕ್ – ನವ್ಯಲೋಕ ಬಿ.ಹೆಚ್.ಪ್ರಕಾಶನ ಬೆಂಗಳೂರು–1998.

29)ಟಿ.ಪಿ.ಅಶೋಕ – ಪುಸ್ತಕಪ್ರೀತಿ, ಅಕ್ಷರ ಪ್ರಕಾಶನ ಹೆಗ್ಗೋಡು 1993.

30)ಅಗ್ರಹಾರ ಕೃಷ್ಣಮೂರ್ತಿ–ಸಂಸ್ಕೃತಿ ಕಥನ – ಸುವರ್ಣ ಸಾಹಿತ್ಯ ಗ್ರಮಥಮಾಲೆ 2006.

31)ಡಾ.ಗಿರಡ್ಡಿ ಗೋವಿಂದರಾಜು – ಸಮಗ್ರ ವಿಮರ್ಶೆ – ಪೂರ್ಣಿಮ ಪ್ರಿಂಟಸ್, ಬೆಂಗಳೂರು 2001.

32)ಶ್ರೀನಿವಾಸ ಹಾವನೂರ್ – ಹೊಸಗನ್ನಡ ಅರುಣೋದಯ, ಕನ್ನಡ ಅದ್ಯಯನ ಸಂಸ್ಥೆ, ಮೈಸೂರು–1974.

33)ಡಾ.ಎನ್.ಎಸ್.ತಾರನಾಥ್ (ಸಂ) ಶತಮಾನದ ಸಂಶೋಧನೆ – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–2001.

34)ಡಾ.ಜಿ.ಹೆಚ್.ನಾಯಕ – ಶತಮಾನದ ಕನ್ನಡ ಸಾಹಿತ್ಯ ಬೃಂದಾವನ ಪ್ರಿಂಟಸ್ ್ ಮೈಸೂರು.–1990.

35)ಪ್ರೊ.ಜಿ,ಶಂಕರಯ್ಯ (ಸಂ) ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯ ಪಕ್ಷಿನೋಟ ಕ.ಸಾ.ಪ.ಬೆಂಗಳೂರು–2003.

36)ಡಾ.ಡಿ.ಆರ್.ನಾಗರಾಜ್ – ಸಂಸ್ಕೃತಿ ಕಥನ– ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು–2002.

# ಛಾಯಾಂಕಣ



ಪ್ರೊ ಸುಮಂಗಳಮ್ಮನವರು
ಡಾ.ಜಿ.ಎಸ್. ಶಿವರುದ್ರಪ್ಪನವರನ್ನು
ಸಂದರ್ಶನ ಮಾಡಿದಾಗ

ಪ್ರೊ ಸುಮಂಗಳಮ್ಮನವರು
ಡಾ.ಜಿ.ಎಸ್. ಶಿವರುದ್ರಪ್ಪನವರನ್ನು
ಗೌರವಿಸಿದ ಸಂದರ್ಭ





ಕರ್ನಾಟಕ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ರಾಷ್ಟ್ರಕವಿ
ಪದವಿಯನ್ನು ಡಾ. ಜಿ.ಎಸ್.ಶಿವರುದ್ರಪ್ಪನವರಿಗೆ ನೀಡಿದ ಸಂದರ್ಭ
ಜೊತೆಯಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಇದ್ದಾರೆ.




ರಾಷ್ಟ್ರಕವಿ ಶಿವರುದ್ರಪ್ಪನವರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ



ರಾಷ್ಟ್ರಕವಿ ಶಿವರುದ್ರಪ್ಪನವರನ್ನ ಸನ್ಮಾನಿಸಿದ ಶ್ರೀ ಚೆನ್ನವೀರಕಣವಿಯವರು




ರಾಷ್ಟ್ರಕವಿ ಶಿವರುದ್ರಪ್ಪನವರನ್ನ ದುಬಾಯಿಯಲ್ಲಿ ಸನ್ಮಾನಿಸಿದ ಸಂದರ್ಭ




ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರೊಂದಿಗೆ
ಡಾ. ಜಿ.ಎಸ್. ಶಿವರುದ್ರಪ್ಪನವರ ಆತ್ಮೀಯ ಸಂಭಾಷಣೆ



ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ



ರಾಷ್ಟ್ರಕವಿ ಶಿವರುದ್ರಪ್ಪನವರ ಜೊತೆ ಪತ್ನಿ ಶ್ರೀಮತಿ ರುದ್ರಾಣಮ್ಮನವರು



ಮನೆಯಂಗಳದಲ್ಲಿ ರಾಷ್ಟ್ರಕವಿ ಶಿವರುದ್ರಪ್ಪನವರು

## ಜೀವನ ಪಥ

ಜನನ : 3.2.1926

ಸ್ಥಳ: ಶಿಕಾರಿಪುರ, ಶಿವಮೊಗ್ಗ ಜಿಲ್ಲೆ, ಕರ್ನಾಟಕ

**ವಿದ್ಯಾಭ್ಯಾಸ:**

ಮೈಸೂರು ವಿಶ್ವವಿದ್ಯಾನಿಲಯ–ಬಿ.ಎ. ಆನರ್ಸ್(1949); ಎಂ.ಎ. (1953) ಪ್ರಪಥಮ ದರ್ಜೆಯಲ್ಲಿ ತೇರ್ಗಡೆ; ಮೂರು ಸುವರ್ಣಪದಕ ಹಾಗೂ ಎರಡು ಬಹುಮಾನಗಳು ಪಿ,ಹೆಚ್.ಡಿ.(1960) ಶ್ರೀ ಕುವೆಂಪು ಅವರ ಮಾರ್ಗದರ್ಶನದಲ್ಲಿ ಬರೆದ 'ಸೌಂದರ್ಯ ಸಮೀಕ್ಷೆ' ಎಂಬ ಪ್ರೌಢ ಪ್ರಬಂಧಕ್ಕೆ.

**ವೃತ್ತಿ ಜೀವನ :**

1. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕ (1949–1963)
2. ಹೈದರಾಬಾದ್ ಉಸ್ಮಾನಿಯ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ರೀಡರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥ (1963–1966)
3. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ರೀಡರ್ (1966–1970)
4. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕ ಹಾಗೂ ನಿರ್ದೇಶಕ (1970–1986)
5. ಕರ್ನಾಟಕ ಸಾಹಿತ್ಯ ಆಕಾಡೆಮಿಯ ಅಧ್ಯಕ್ಷ (1987–1990)
6. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಕುವೆಂಪು ಪೀಠದ ಸಂದರ್ಶಕ ಪ್ರಾಧ್ಯಾಪಕ (1944–1995)

**ಸಾಹಿತ್ಯ ಜೀವನ (ಪ್ರಕಟಣೆಗಳು) :**

**ಅ) ಕವನ ಸಂಕಲನಗಳು :**

1. ಸಾಮಗಾನ –1951

2. ಚೆಲವು ಒಲವು (1953)

3. ದೇವಶಿಲ್ಪ–1986

4. ತೀರ್ಥವಾಣಿ–1961

5. ಕಾರ್ತೀಕ –1961

6. ದೀಪದ ಹೆಜ್ಜೆ (1959)

7. ಅನಾವರಣ (1963)

8. ತೆರೆದ ದಾರಿ 1966

9. ಗೋಡೆ–1972

10. ಕಾಡಿನ ಕತ್ತಲಲ್ಲಿ (1982)

11. ಪ್ರೀತಿ ಇಲ್ಲದ ಮೇಲೆ (1969)

12. ಚಕ್ರಗತಿ (1992)

13. ವ್ಯಕ್ತಮಧ್ಯ (1998)

14. ಸಂಜೆ ದಾರಿ–1954

**ಗದ್ಯ ಕೃತಿಗಳು**

1. ಕರ್ಮಯೋಗಿ–1956
2. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ 1973
3. ಗಂಗೆಯ ಶಿಖರಗಳಲ್ಲಿ
4. ವಿಮರ್ಶೆಯ ಪೂರ್ವಪಶ್ಚಿಮ (1961)
5. ಪರಿಶೀಲನೆ (1967)
6. ಗತಿಬಿಂಬ 1969
7. ಪ್ರತಿಕ್ರಿಯೆ
8. ನವೋದಯ 1976
9. ಕನ್ನಡ ಸಾಹಿತ್ಯ ಸಮೀಕ್ಷೆ
10. ಅನುರಣನ
11. ಸೌಂದರ್ಯ ಸಮೀಕ್ಷೆ(1965)
12. ಮಹಾಕಾವ್ಯ ಸ್ವರೂಪ(1976)
13. ಕಾವ್ಯಾರ್ಥ ಚಿಂತನ(1983)
14. ಕನ್ನಡ ಕವಿಗಳ ಕಾವ್ಯ–ಕಲ್ಪನೆ(1989)
15. ಚತುರಂಗ
16. ಬೆಡಗು (1989)

17. ಅಮೆರಿಕಾದಲ್ಲಿ ಕನ್ನಡಿಗ 1991

18.ಹೊಸಗನ್ನಡ ಕವಿತೆಗಳಲ್ಲಿ ಕಾವ್ಯಚಿಂತನೆ

19. ವಿಸ್ತರಣ (1995)

20. ಶಿವಯೋಗಿ ಸಿದ್ಧರಾಮ

21. ಸರ್ವಭೂಷಣ ಶಿವಯೋಗಿ

22. ಇಂಗ್ಲೆಂಡಿನಲ್ಲಿ ಚತುರ್ಮಾಸ

23. ಚದುರಿದ ಚಿಂತನೆಗಳು

24.ಕುವೆಂಪು–ಒಂದು ಪುನರಾಲೋಕನ(2005)

**ಸಂಪಾದಿತ:**

1. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ – ಆರು ಸಂಪುಟಗಳಲ್ಲಿ

2. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಹತ್ತು ಸಂಪುಟಗಳಲ್ಲಿ

3. ಸಾಹಿತ್ಯ ವಾರ್ಷಿಕ – ಹದಿನಾಲ್ಕು ಸಂಪುಟಗಳಲ್ಲಿ

**ಪ್ರವಾಸ:**

ಅ) 1973ನೇ ಸೆಪ್ಟೆಂಬರ್ ನಲ್ಲಿ ಭಾರತ–ಸೋವಿಯೆತ್ ಸಾಂಸ್ಕೃತಿಕ ವಿನಿಮಯ ಯೋಜನೆಯಲ್ಲಿ ರಷ್ಯಾದಲ್ಲಿ ಪ್ರವಾಸ

ಆ) ಅಮೆರಿಕಾ, ಇಂಗ್ಲೆಂಡ್ (1987), ಥಾಯ್‌ಲಂಡ್–ಸಿಂಗಪುರ(1994)ಇಂಗ್ಲೆಂಡ್–ಯೂರೋಪು(1996) ಅಮೆರಿಕಾ (1997)

**ಪ್ರಶಸ್ತಿ – ಗೌರವಗಳು.**

1. 1974ರಲ್ಲಿ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಎಂಬ ಪ್ರವಾಸ ಕಥನಕ್ಕೆ 'ಸೋವಿಯೆತ್ ಲ್ಯಾಂಡ್ ನೆಹರೂ' ಪ್ರಶಸ್ತಿ.
2. 1982ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ.
3. 1983–84ರಲ್ಲಿ ಯು.ಜಿ.ಸಿ.ಯಿಂದ ರಾಷ್ಟ್ರೀಯ ಉಪನ್ಯಾಸಕ(National Lecturer)ಆಗಿ ನೇಮಕ.
4. 1984ರಲ್ಲ 'ಕಾವ್ಯಾರ್ಥ ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

5. 1984ರಲ್ಲಿ 'ಕಾವ್ಯರ್ಥ ಚಿಂತನ' ಕೃತಿಗೆ ವರ್ಷದ ಅತ್ಯುತ್ತಮ ಕೃತಿ ಎಂದು ಬಹುಮಾನ
6. 1984ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ.
7. ಪ್ರೊ.ಭೂಸನೂರಮಠ ಪ್ರಶಸ್ತಿ – 1997.
8. ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ = 1997
9. ಗೊರೂರು ಪ್ರಶಸ್ತಿ – 1999
10. ಡಾ.ಮಾಸ್ತಿ ಪ್ರಶಸ್ತಿ – 2000
11. ರಾಷ್ಟ್ರಕವಿ ಪುರಸ್ಕಾರ–2006.

**ಇತರೆ:**

1. 1963ರಲ್ಲಿ ದೆಹಲಿಯ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಕನಾಟಕದ ಪ್ರತಿನಿಧಿ.
2. 1964ರಲ್ಲಿ ತುಮಕೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ.
3. 1986ನೇ ಏಪ್ರಿಲ್‌ನಲ್ಲಿ ಮದರಾಸು ಕನ್ನಡಿಗರ ಸಮ್ಮೇಳನದ ಅಧ್ಯಕ್ಷತೆ.
4. 1992ನೇ ಜನವರಿಯಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲಭಾರತ 61ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ.

**ಗೌರವ ಗ್ರಂಥಗಳು :**

1) ಸ್ನೇಹ ಕಾರ್ತೀಕ–1997.

2) ಗೌರವ – 2001.

3) ಹಣತೆ – 2001.

4) ಆಕಾಶದೀಪ – 2008.